ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಸೌಕರ್ಯವನ್ನು ಮತ್ತಷ್ಟು ಸದೃಢಗೊಳಿಸುವ ಸಲುವಾಗಿ ಕಾರವಾರದಲ್ಲಿ 198 ಕೋಟಿ ರೂ. ವೆಚ್ಚದ 450 ಹಾಸಿಗೆ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರಿನಲ್ಲಿ 10 ಕೋಟಿ ರೂ.ಗಳ ಟ್ರಾಮಾಕೇರ್ ಕೇಂದ್ರ ಮತ್ತು ಮೈಸೂರು ಹಾಗೂ ತುಮಕೂರಿನಲ್ಲಿ 92 ಕೋಟಿ ರೂ. ವೆಚ್ಚದ ಫೆರಿಫೆರಲ್ ಕ್ಯಾನ್ಸರ್ ಕೇಂದ್ರಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. ಜತೆಗೆ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 180 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಿದೆ.

ಅಮೃತ್ ನಗರೋತ್ಥಾನದಲ್ಲಿ 500 ಕೋಟಿ ಮೀಸಲು



ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-4 ರಡಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ 500 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ. ಹೊಸದಾಗಿ ಮೇಲ್ದರ್ಜೆಗೇರಿಸಲಾದ ರಾಯಚೂರು, ಬೀದರ್ ಮತ್ತು ಹಾಸನ ಮಹಾನಗರ ಪಾಲಿಕೆಗಳಿಗೆ ಮಹಾತ್ಮಾಗಾಂಧಿ ನಗರ ವಿಕಾಸ್ ಯೋಜನೆ 2.0ರಡಿ 2026-27ನೇ ಸಾಲಿನಲ್ಲಿ ತಲಾ 200 ಕೋಟಿ ರೂ.ಗಳನ್ನು ನೀಡಲಾಗಿದೆ.

ಇ-ಆಸ್ತಿ ತಂತ್ರಾಂಶ ಸಂಯೋಜನೆ



ನಗರ ಸ್ಥಳೀಯ ಸಂಸ್ಥೆಗಳಲ್ಲಿ ಏಕೀಕೃತ ಆಸ್ತಿ ತೆರಿಗೆ ತಂತ್ರಾಂಶದೊಂದಿಗೆ ಇ-ಆಸ್ತಿ ತಂತ್ರಾಂಶವನ್ನು ಸಂಯೋಜನೆಗೊಳಿಸಲಾಗುವುದು. ತೆರಿಗೆ ಬೇಡಿಕೆ ಮತ್ತು ಬಾಕಿ ವಿವರಗಳನ್ನು ಸ್ವಯಂ ಚಾಲಿತವಾಗಿ ಸೃಜಿಸುವ ಯುನಿಫೈಡ್ ಆಸ್ತಿ ತೆರಿಗೆ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು.ನಗರ ಸ್ಥಳೀಯ ಸಂಸ್ಥೆಗಳ ಸ್ಥಿರಾಸ್ತಿಗಳು ಹಾಗೂ ವಾಣಿಜ್ಯ ಸಂಕೀರ್ಣಗಳ ನಿರ್ವಹಣಾ ಪ್ರಕ್ರಿಯೆಯನ್ನು ಸರಳಗೊಳಿಸಲು ಹಾಗೂ ಏಕರೂಪದ ನೀತಿಯನ್ನು ಪಾಲಿಸಲು ಎಸ್ಟೇಟ್ ಮ್ಯಾನೇಜಮೆಂಟ್ ರೂಲ್-2026 ಜಾರಿಗೊಳಿಸಲಾಗುವುದು.

ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್ ಆರಂಭ



ಉನ್ನತ ವ್ಯಾಸಂಗ, ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಬರುವ ವಿದ್ಯಾರ್ಥಿಗಳಿಗಾಗಿ ಧಾರವಾಡದಲ್ಲಿ 4, ಬೆಂಗಳೂರಿನಲ್ಲಿ 2 ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭಿಸಲಾಗುವುದು. ಕಲಬುರಗಿ ನಗರಕ್ಕೆ 24/7 ಶಾಶ್ವತವಾಗಿ ಗುಣಮಟ್ಟದ ನೀರನ್ನು ಒದಗಿಸಲು ಅಂದಾಜು 1,863 ಕೋಟಿ ರೂ. ವೆಚ್ಚದ ಕಾಮಗಾರಿಗೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುವುದು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುತ್ತಿರುವ ವಿವಿಧ ಭಾಗಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ 100 ಕೋಟಿ ರೂ. ಒದಗಿಸಲಾಗುವುದು ಎಂದು ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಶೈಕ್ಷಣಿಕ ಅಗತ್ಯಗಳಿಗೆ ₹15,081 ಕೋಟಿ ಅನುದಾನ

ಶಿಕ್ಷಣ, ಸೌಕರ್ಯಕ್ಕೆ ವಿಶೇಷ ಒತ್ತು

ರಾಜ್ಯ ಸರ್ಕಾರವು 2026-27ನೇ ಸಾಲಿನ ಆಯವ್ಯಯದಲ್ಲಿ ಶಿಕ್ಷಣ, ವಸತಿ ಮತ್ತು ಸಾಮಾಜಿಕ ಸಬಲೀಕರಣಕ್ಕೆ ವಿಶೇಷ ಒತ್ತು ನೀಡಿದೆ.

ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಬಜೆಟ್‌ನಲ್ಲಿ ಸಿಂಹಪಾಲು ನೀಡಲಾಗಿದೆ. ರಾಜ್ಯದ ಸುಮಾರು 75 ಲಕ್ಷ ವಿದ್ಯಾರ್ಥಿಗಳಿಗೆ 2,676 ಕೋಟಿ ರೂ.ಗಳ ವಿದ್ಯಾರ್ಥಿ ವೇತನವನ್ನು ವಿತರಿಸಲಾಗಿದ್ದು, ಶೈಕ್ಷಣಿಕ ಸಾಲ ಮತ್ತು ಶುಲ್ಕ ಮರುಪಾವತಿ ಯೋಜನೆಗಳ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಹೊರೆ ಇಳಿಸಲಾಗಿದೆ. ರಾಜ್ಯದ 5,306 ವಿದ್ಯಾರ್ಥಿನಿಲಯಗಳು ಮತ್ತು 1,258 ವಸತಿ ಶಾಲೆಗಳ ಸುಧಾರಣೆ ಹಾಗೂ 13.30 ಲಕ್ಷ ಮಕ್ಕಳ ಶೈಕ್ಷಣಿಕ ಅಗತ್ಯಗಳಿಗಾಗಿ ಒಟ್ಟು 15,081 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

ಮೂಲಸೌಕರ್ಯ ಮತ್ತು ವಸತಿ ಕ್ರಾಂತಿ: ಬಡಜನರು ವಾಸಿಸುವ ಕಾಲೋನಿಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು 1,332 ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ. ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ 3,662 ವಿವಿಧ ಕಾಮಗಾರಿಗಳಿಗಾಗಿ 1,635 ಕೋಟಿ ರೂ.ಗಳನ್ನು ಅನುಮೋದಿಸಲಾಗಿದೆ. ವಿಶೇಷವಾಗಿ, ಅರಣ್ಯದ ಅಂಚಿನಲ್ಲಿ ವಾಸಿಸುತ್ತಿರುವ 11 ಸಮುದಾಯಗಳ 6,257 ವಸತಿರಹಿತ ಕುಟುಂಬಗಳಿಗೆ ತಲಾ 4.50 ಲಕ್ಷ ರೂ.ಗಳ ವೆಚ್ಚದಲ್ಲಿ ಮನೆ ನಿರ್ಮಿಸಿಕೊಡುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡಿದೆ.



- 75 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ
- ವಸತಿರಹಿತ ಕುಟುಂಬಗಳಿಗೆ ತಲಾ 4.50 ಲಕ್ಷ ರೂ.ಗಳ ವೆಚ್ಚದಲ್ಲಿ ಮನೆ
- 1,650 ಕೋಟಿ ರೂ.ಗಳಲ್ಲಿ ಸಮುದಾಯ ಭವನಗಳ ನಿರ್ಮಾಣ

ಇದುವರೆಗೆ 684 ಕೋಟಿ ಟ್ರಿಪ್‌ಗಳಲ್ಲಿ ಪ್ರಯಾಣ ಸೌಲಭ್ಯ

ಶಕ್ತಿ ಯೋಜನೆಗೆ ₹5,300 ಕೋಟಿ

ಮಹಿಳೆಯರು ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣ ಮಾಡುವ ಮೂಲಕ ಸ್ವಾವಲಂಬನೆ ಮತ್ತು ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾದ ಶಕ್ತಿ ಯೋಜನೆಗಾಗಿ ಸುಮಾರು ಪ್ರಸಕ್ತ ಸಾಲಿನಲ್ಲಿ 5,300 ಕೋಟಿ ರೂ. ಒದಗಿಸಲಾಗಿದೆ. ಶಕ್ತಿ ಯೋಜನೆಯಲ್ಲಿ ಉಚಿತವಾಗಿ ಪ್ರಯಾಣ ಮಾಡುತ್ತಿರುವ ಮಹಿಳೆಯರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಇದುವರೆಗೆ 684 ಕೋಟಿ ಟ್ರಿಪ್‌ಗಳಲ್ಲಿ ಮಹಿಳೆಯರು ಪ್ರಯಾಣ ಸೌಲಭ್ಯ ಪಡೆದಿರುತ್ತಾರೆ.

10 ಕೋಟಿ ರೂ. ವೆಚ್ಚದಲ್ಲಿ ರೂಫ್ ಟಾಪ್ ಸೋಲಾರ್: ರಾಜ್ಯದಲ್ಲಿ ಸ್ವಂತ ಕಟ್ಟಡ ಹೊಂದಿರುವ 25 ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಡ್ರೈವಿಂಗ್ ಟ್ರ್ಯಾಕ್ ಆಟೋಮೇಟೆಡ್ ಟೆಸ್ಟಿಂಗ್ ಸ್ಟೇಷನ್ ಕಟ್ಟಡದ ಮೇಲ್ಛಾವಣಿಯಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ರೂಫ್ ಟಾಪ್ ಸೋಲಾರ್ ಅಳವಡಿಸುವ ಯೋಜನೆ ಜಾರಿಗೊಳಿಸಲಾಗುವುದು.

ಬ್ಲಾಕ್‌ಸ್ಪಾಟ್ ಗುರುತಿಸುವ ತಂತ್ರಾಂಶ ಅಭಿವೃದ್ಧಿಗೆ 5 ಕೋಟಿ ರೂ.: ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹೆಚ್ಚುತ್ತಿರುವ ಅಪಘಾತ ಸ್ಥಳಗಳನ್ನು ಬ್ಲಾಕ್‌ಸ್ಪಾಟ್ ಗುರುತಿಸಲು, ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಐಐಟಿ ಮದ್ರಾಸ್ ಮತ್ತು ಎನ್‌ಐಸಿ ಸಹಯೋಗದೊಂದಿಗೆ 5 ಕೋಟಿ ರೂ. ವೆಚ್ಚದಲ್ಲಿ ಡ್ಯಾಶ್ ಬೋರ್ಡ್ ಒಳಗೊಂಡ ತಂತ್ರಾಂಶ ಅಭಿವೃದ್ಧಿಪಡಿಸಲಾಗುವುದು.

ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಕ್ಕೆ 12 ಕೋಟಿ ರೂ.: ಚಿಕ್ಕಮಗಳೂರು ಹಾಗೂ ತುಮಕೂರಿನಲ್ಲಿ 12 ಕೋಟಿ ರೂ.ವೆಚ್ಚದಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸಲಾಗುವುದು.



ವೇತನ ಪರಿಷ್ಕರಣೆ

ಏ.1ರಿಂದ ಜಾರಿಗೆ ಬರುವಂತೆ ಸಾರಿಗೆ ನೌಕರರ ವೇತನವನ್ನು ಪರಿಷ್ಕರಿಸಲು ನಿಶ್ಚಯಿಸಿರುತ್ತದೆ. ಇದಕ್ಕಾಗಿ ವೇತನ ಬಾಕಿ 1,271 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಸಂಪಾದಕೀಯ

ರಾಜ್ಯ ಬಜೆಟ್ : ನಿಜ ಹೂರಣವೇನು?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 17ನೇ ಬಜೆಟ್ ಮಂಡಿಸಿದ್ದಾರೆ. 3ಗಂಟೆ 36ನಿಮಿಷಗಳ ಬಜೆಟ್ ಭಾಷಣದ ಮೂಲಕವೂ ಅವರು ದಾಖಲೆ ಮಾಡಿದ್ದಾರೆ. ಬಜೆಟ್‌ನಲ್ಲಿ ನಿರೀಕ್ಷೆಯಂತೆ ಗ್ಯಾರಂಟಿ ಯೋಜನೆಗಳ ಪೈಕಿ ಅನ್ನಭಾಗ್ಯ ಯೋಜನೆಗೆ 6,200ಕೋ.ರೂ., ಗೃಹಲಕ್ಷ್ಮೀ ಯೋಜನೆಗೆ 28,608ಕೋ.ರೂ., ಗೃಹಜ್ಯೋತಿ ಯೋಜನೆಗೆ 10,578ಕೋ.ರೂ.ಸ್ತ್ರೀಶಕ್ತಿ ಯೋಜನೆಗೆ 5,300ಕೋ.ರೂ.ಗಳನ್ನು ಮೀಸಲಿಡಲಾಗಿರುವುದಾಗಿ ಮುಖ್ಯಮಂತ್ರಿಯವರು ಪ್ರಕಟಿಸಿದ್ದಾರೆ.

ಬೆಂಗಳೂರು ಮಹಾನಗರವನ್ನು 5 ಭಾಗಗಳಾಗಿ ವಿಭಜನೆಗೊಳಿಸಿದ ಬಳಿಕ ಇದೀಗ ಬೆಂಗಳೂರು ಅಭಿವೃದ್ಧಿಗೆ 7 ಸಾವಿರ ಕೋ.ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದೆ. ಇದೇ ರೀತಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆಗೆ 3 ವರ್ಷಗಳಲ್ಲಿ 13000 ಕೋ.ರೂ.ಗಳ ಯೋಜನೆಯೊಂದನ್ನು ಪ್ರಕಟಿಸಲಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕೈಗಾರಿಕಾ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕರಾವಳಿಗೆ 2 ಸೇರಿದಂತೆ ರಾಜ್ಯದಲ್ಲಿ 12 ಹೊಸ ಪೊಲೀಸ್ ಠಾಣೆಗಳ ನಿರ್ಮಾಣವನ್ನು ಪ್ರಕಟಿಸಲಾಗಿದೆ. ರಾಜ್ಯದಲ್ಲಿ ಕಾನೂನುಸುವ್ಯವಸ್ಥೆಯ ಪರಿಸ್ಥಿತಿ ಕುರಿತಂತೆ ಹೆಚ್ಚುತ್ತಿರುವ ಕಳವಳಗಳ ನಡುವೆ ಈ ಪ್ರಸ್ತಾವ ಬಂದಿದ್ದು,



ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 8000ಹುದ್ದೆಗಳನ್ನು ಭರ್ತಿ ಮಾಡಲಾಗುವುದೆಂದೂ ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಒಟ್ಟಾರೆಯಾಗಿ ರಾಜ್ಯದ ವಿವಿಧ ಇಲಾಖೆ ಗಳಲ್ಲಿ ಖಾಲಿ ಇರುವ 56,432ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಬಜೆಟಿನಲ್ಲಿ ಗಮನ ಸೆಳೆದಿರುವ ಅಂಶವೆಂದರೆ, 16ವಯಸ್ಸಿನ ಕೆಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿಷೇಧಿಸುವ ಅಂಶವನ್ನು ಪ್ರಸ್ತಾವಿಸಲಾಗಿದೆ. ಎಳೆಯ ಮಕ್ಕಳ ಮೇಲೆ ಜಾಲತಾಣಗಳು ಬೀರುತ್ತಿರುವ ಗಂಭೀರ ದುಷ್ಪರಿಣಾಮಗಳ ಬಗ್ಗೆ ಕಳವಳಗಳು ಹೆಚ್ಚುತ್ತಿರುವ ನಡುವೆಯೇ ಇಂತಹ ಕ್ರಮವೊಂದನ್ನು ಮುಖ್ಯಮಂತ್ರಿಯವರು ಘೋಷಿಸಿದ್ದು ಮೆಚ್ಚುಗೆಗೆ ಭಾಜನವಾಗಿದೆ. ಬಜೆಟ್‌ನ ಪರ-ವಿರುದ್ಧ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದು ಮದ್ಯದ ಮೇಲಿನ ತೆರಿಗೆ ಸ್ವರೂಪವನ್ನು ಬದಲಿಸಿ ಈ ಸಾಲಿನಲ್ಲಿ 45000 ಕೋ.ರೂ.ಗಳ ರಾಜಸ್ವ ಸಂಗ್ರಹಿಸುವ ಗುರಿಯನ್ನು ಸಿದ್ದರಾಮಯ್ಯ ಅವರು ಪ್ರಕಟಿಸಿದ್ದು, ಕಂದಾಯ ಇಲಾಖೆಗೆ 15500 ಕೋ.ರೂ., ನೋಂದಣಿ ಮುದ್ರಾಂಕದಿಂದ 29000ಕೋ.ರೂ., ಗಣಿ ಇಲಾಖೆಗೆ 11,000 ಕೋ.ರೂ., ವಾಣಿಜ್ಯ ಇಲಾಖೆಗೆ 12500 ಕೋ.ರೂ.ಗಳ ಸಂಗ್ರಹದ ಗುರಿ ನೀಡಿದ್ದಾರೆ. ಸ್ತ್ರೀಶಕ್ತಿ ಯೋಜನೆಗೆ ಮೀಸಲಿರಿಸಿದ ಮೊತ್ತ 5,300ಕೋ.ರೂ.ಗಳಾದರೆ, ಕೆಎಸ್ಸಾರ್ಟಿಸಿ ಸೇರಿದಂತೆ ಸಾರಿಗೆ ನಿಗಮಗಳಿಗೆ ಸರಕಾರ ಬಾಕಿ ಉಳಿಸಿಕೊಂಡಿರುವ ಮೊತ್ತ ಕೂಡ 5,313ಕೋ.ರೂ.ಗಳಾಗಿದೆ. ಇಲ್ಲಿ ಯೋಜನೆಯ ಕ್ರೆಡಿಟ್ ಕಾಂಗ್ರೆಸ್ ಸರಕಾರಕ್ಕಾದರೆ, ಹೊರೆ ಮಾತ್ರ ಸಾರಿಗೆ ನಿಗಮಕ್ಕೆ ಎಂಬ ಟೀಕೆ ವ್ಯಕ್ತವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ನೀಡುವ ಮೊತ್ತವನ್ನು ಜನಸಾಮಾನ್ಯರ ಮೇಲೆ ನೋಂದಣಿ, ಅಬಕಾರಿ, ಇಂಧನ, ಕಂದಾಯ ಇಲಾಖೆಗಳ ಶುಲ್ಕಗಳಲ್ಲಿ ತೀವ್ರ ಏರಿಕೆಯ ಹೊರೆ ಹೊರಿಸುವ ಮೂಲಕ ಪಡೆಯಲಾಗುತ್ತಿದೆ ಎಂಬ ಟೀಕೆಗಳು ವ್ಯಕ್ತವಾಗಿವೆ. ಉರ್ದು ಶಾಲೆಗಳ ಅಭಿವೃದ್ಧಿಗೆ 400 ಕೋ.ರೂ., ಅಲ್ಪಸಂಖ್ಯಾತ ನಿರುದ್ಯೋಗಿಗಳಿಗೆ 3ಲ.ರೂ. ಸಹಾಯಧನ, 1000 ಕೋ.ರೂ. ವೆಚ್ಚದಲ್ಲಿ ಶಾಲಾ ಉನ್ನತೀಕರಣ, ಹಜ್ ಭವನ ನಿರ್ಮಾಣ ಮುಂತಾದ ಯೋಜನೆಗಳ ಮೂಲಕ ವೋಟ್‌ಬ್ಯಾಂಕ್ ರಾಜಕೀಯ ಮುಂದುವರಿಸಿರುವುದಾಗಿ ಟೀಕೆಗಳು ವ್ಯಕ್ತವಾಗಿವೆ. ಒಟ್ಟಾರೆಯಾಗಿ ಇದು '11ಜಿ'ಬಜೆಟ್ ಎಂದು ಮುಖ್ಯಮಂತ್ರಿಯವರು ಹೇಳಿಕೊಂಡರೆ , ವಿಪಕ್ಷಗಳು '11ಲೈ'ಗಳ ಬಜೆಟ್ ಎಂದು ಟೀಕಿಸಿವೆ.

ವಿಶುದ್ಧ ಚಕ್ರ ಮತ್ತು ಭಾಷೆಯ ಮಜಲುಗಳು

ಕೃತಕ ಬುದ್ಧಿಮತ್ತೆ ಏನೇನೋ ಮಾಡಬಹುದು. ಆದರೆ ಕೃತಕ ಬುದ್ಧಿಮತ್ತೆಗೆ ವಿಶುದ್ಧ ಚಕ್ರವಿಲ್ಲ, ಅದಕ್ಕಾಗಿಯೇ ನೀವು ವಿಭಿನ್ನ. ಅದಕ್ಕಿಂತಲೂ ನೀವು ಅದ್ಭುತ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಭಾಷೆಯು ನಿಮ್ಮ ಆಲೋಚನೆಗಳನ್ನು, ಭಾವನೆಗಳನ್ನು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಹಾಯ ಮಾಡುತ್ತದೆ ಎನ್ನುವುದು ನಿಮಗೆ ಗೊತ್ತು. ಆದರೆ ವಿಶುದ್ಧ ಚಕ್ರದ ಸಹಾಯದಿಂದಾಗಿ ಅವುಗಳಿಗೆಲ್ಲಾ ಒಂದು ಸೌಂದರ್ಯ ಉಂಟಾಗುತ್ತದೆ. ಆಗ ನಿಮ್ಮ ಮಾತುಗಳು ಎಲ್ಲರನ್ನು ಪ್ರಭಾವಿಸುತ್ತದೆ. ಅಷ್ಟೇ ಅಲ್ಲ ವಿಶುದ್ಧ ಚಕ್ರವು ಜಾಗೃತವಾಗಿದ್ದರೆ, ಅವರ ಆಲೋಚನೆಗಳ ದಿಕ್ಕನ್ನು ನಿಮ್ಮ ಮಾತೇ ರೂಪಿಸಲು ಸಹಾಯ ಮಾಡುತ್ತದೆ.

ಭಾಷೆಯಿಂದಾಗಿ ನಿಮ್ಮಲ್ಲಿ ಸೃಜನಶೀಲತೆ ಗೋಚರವಾಗುತ್ತದೆ. ಅಂತಹಾ ಸೃಜನಶೀಲತೆಯು ವಿಶುದ್ಧ ಚಕ್ರದಿಂದಾಗಿ ನೀವು ಆಡುವ ಪ್ರತಿಯೊಂದು ಪದಗಳನ್ನೂ ವಿಶೇಷವಾಗಿ ರೂಪಿಸುತ್ತದೆ. ಆಗ ನಿಮ್ಮ ಪದಗಳೆಲ್ಲಾ ಆಭರಣದೊಳಗಿನ ಮುತ್ತುಗಳಾಗುತ್ತವೆ. ನೀವು ಮಾತನಾಡುತ್ತಿರುವಾಗಲೇ ನಿಮ್ಮೊಳಗೊಂದು ವಿಶೇಷ ಪ್ರಕ್ರಿಯೆ ಉಂಟಾಗುತ್ತದೆ. ಅದರಿಂದಾಗಿ ನೀವು ಆ ಕ್ಷಣದಲ್ಲಿಯೇ ಹೊಸದೊಂದು ಆಲೋಚನೆಯನ್ನು ಹುಟ್ಟು ಹಾಕುತ್ತೀರಿ. ಮತ್ತು ಅದನ್ನು ಆ ಸಭೆಯಲ್ಲಿಯೇ ಪ್ರಸ್ತುತಪಡಿಸುತ್ತೀರಿ. ಮತ್ತು ನೀವೊಂದು ಕ್ರಾಂತಿಗೆ ಕಾರಣವಾಗುತ್ತೀರಿ. ಮಾತನಾಡುವಾಗ ಹೊಸ ಪದಗಳ ಸೃಷ್ಟಿಯನ್ನೂ ಮಾಡುತ್ತೀರಿ. ಹೀಗೆ ನಿಮ್ಮ ಸೃಜನಶೀಲತೆ ಪರಾಕಾಷ್ಠೆಗೆ ತಲುಪುತ್ತದೆ. ನಿಮಗೆ ಯಾರೂ ಸರಿಸಾಟಿ ಇಲ್ಲದಂತೆ ನೀವು ಬೆಳೆಯುತ್ತೀರಿ. ಕೊನೆಗೆ ನಿಮಗೆ ನೀವೇ ಸವಾಲಾಗುತ್ತೀರಿ.

ನಿಮ್ಮ ಮಾತಿನಿಂದಾಗಿ ನಿಮ್ಮ ಸಂಬಂಧಗಳು ಹೆಚ್ಚುತ್ತಾ ಹೋಗುತ್ತವೆ. ಆಗ ನೀವು ತುಂಬಾ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಸಂಬಂಧಗಳು ಯಾವಾಗಲೂ ಒಂದು ಜವಾಬ್ದಾರಿ. ನೀವದನ್ನು ನಿರ್ವಹಿಸಲೇಬೇಕಾಗುತ್ತದೆ. ಇಲ್ಲದಿದ್ದರೆ ಅಪವಾದ ಗ್ಯಾರಂಟಿ. ಹೀಗಾಗಿ ನಿಮ್ಮ ಭಾಷೆ ಶುದ್ಧವಾಗಿರಬೇಕಾದ್ದು ಅಗತ್ಯ. ಅದು ಕೇವಲ ಶುದ್ಧ ಮಾತ್ರವಲ್ಲ, ವಿಶುದ್ಧವಾಗಿಯೂ ಇರಬೇಕಾಗುತ್ತದೆ. ಅಂದರೆ ವಿಶುದ್ಧ ಚಕ್ರದಲ್ಲಿ ಶುದ್ಧೀಕರಣ ಹೊಂದಿಯೇ ಬರಬೇಕಾಗುತ್ತದೆ. ಆಗ ಮಾತ್ರ ಅದಕ್ಕೆ ಮೌಲ್ಯ ಸಿಗುತ್ತದೆ. ನಿಮ್ಮ ಸಂಪರ್ಕ ಹೆಚ್ಚಲೂ ಭಾಷೆ ಕಾರಣವಾಗುತ್ತದೆ. ನಿಮಗೆ ಬೇರೆ ಬೇರೆ ಭಾಷೆ ಬಂದರೆ ನಿಮ್ಮ ಸಂಪರ್ಕ ವಿಸ್ತಾರವಾಗುತ್ತದೆ. ನಿಮಗೆ ಯಾರೊಂದಿಗೆ, ಎಲ್ಲಿ, ಯಾವಾಗ, ಹೇಗೆ ಏನು ಮಾತನ್ನು ಆಡಬೇಕೆಂದು ತಿಳಿದಿದ್ದರೆ, ನಿಮ್ಮ ಸಂಪರ್ಕ ಬಲವಾಗುತ್ತದೆ. ನಿಮ್ಮ ಮೇಲೆ ನಂಬಿಕೆ ಹೆಚ್ಚುತ್ತದೆ. ಮಾತುಗಳೆಲ್ಲಾ ಮಾಣಿಕ್ಯವಾಗುತ್ತದೆ. ಸಂಪರ್ಕ ಎನ್ನುವುದು ಕೇವಲ ವ್ಯಾವಹಾರಿಕವಲ್ಲ, ಅದೊಂದು ಜೀವನ ವಿಧಾನವಾಗಬೇಕು. ಆಗ ಅದಕ್ಕೆ ನೀವು ಸ್ವಲ್ಪ ಭಾವನೆಗಳನ್ನು ಸೇರಿಸಬೇಕಾಗುತ್ತದೆ, ಸ್ವಲ್ಪ ಬುದ್ಧಿವಂತಿಕೆಯನ್ನು ಜೋಡಿಸಬೇಕಾಗುತ್ತದೆ, ಸ್ವಲ್ಪ ಅಲಂಕಾರವನ್ನೂ ಮಾಡಬೇಕಾಗುತ್ತದೆ. ಇವೆಲ್ಲವೂ ಮಿಳಿತವಾಗಿ ಹೊಮ್ಮುವುದು ವಿಶುದ್ಧ ಚಕ್ರ ಜಾಗೃತವಾಗಿದ್ದರೆ ಮಾತ್ರ. ಇವುಗಳಲ್ಲಿ ಯಾವುದಾದರೂ ಹೆಚ್ಚು ಕಮ್ಮಿಯಾದರೂ ಸಮತೋಲನ ತಪ್ಪುತ್ತದೆ. ಹಾಗಾಗಿ ಸಂಪರ್ಕ ಎನ್ನುವುದು ಹಗ್ಗದ ಮೇಲಿನ ನಡಿಗೆ ಇದ್ದಂತೆ. ತುಂಬಾ ನಾಜೂಕು.

ಇದು ಮಾಹಿತಿ ಯುಗ ಮತ್ತು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಯುಗ. ಜ್ಞಾನ ಎನ್ನುವುದು ನಿಮ್ಮ ಅಂಗೈಯಲ್ಲಿದೆ. ಆದರೆ ಅದನ್ನು ಯಾರು ಬೇಕಾದರೂ ಹಾರಿಸಿಬಿಡುವ, ಏಮಾರಿಸಿಬಿಡುವ, ವಂಚಿಸುವ, ನಿಮ್ಮನ್ನು ದಿವಾಳಿ ಮಾಡುವ ಸಾಧ್ಯತೆಯೇ ಹೆಚ್ಚಿದೆ. ಜ್ಞಾನದಿಂದ ನೀವು ಹಣವನ್ನು ಗಳಿಸದಿರಬಹುದು, ಆದರೆ ಬದುಕುವ ದಾರಿಯಲ್ಲಿ ಧೈರ್ಯವಾಗಿ ಮುನ್ನಡೆಯುವ ಆತ್ಮವಿಶ್ವಾಸವನ್ನು ನೀಡುತ್ತದೆ. ಹಿಟ್ಲರ್ ಯಹೂದಿಗಳನ್ನು ದೇಶದಿಂದ ಹೊರಗಟ್ಟಿದಾಗ ಅವರು ತಮ್ಮ ಕೈಯಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಹೋದರಂತೆ!! ಬಟ್ಟೆ ಬರೆಯನ್ನಲ್ಲ, ಹಣದ ಟ್ರಂಕುಗಳನ್ನಲ್ಲ, ಹೆಂಡತಿ ಮಕ್ಕಳನ್ನಲ್ಲ ಅಥವಾ ಯಾವುದೇ ವಸ್ತುಗಳನ್ನಲ್ಲ, ಬದಲಿಗೆ ಜ್ಞಾನಸ್ವರೂಪಿ ಸರಸ್ವತಿಯನ್ನು. ಈಗಲೂ ಜಗತ್ತು ಯಹೂದಿಗಳನ್ನು ಜೀನಿಯಸ್ ಎಂದೇ ಕರೆಯುವುದು. ಮಾಹಿತಿಗಳು ಅಂಗೈಯಲ್ಲಿರುವುದು ನಿಜ, ಆದರೆ ಅದನ್ನು ದೊರಕಿಸಿಕೊಳ್ಳಲು ಉಪಕರಣಗಳು ಬೇಕು, ಕ್ಷೇತ್ರ ಬೇಕು, ಮಾಧ್ಯಮ ಬೇಕು, ಕೊನೆಗೆ ವಿದ್ಯುತ್ ಸಹಾ ಬೇಕು. ಕೃತಕ ಬುದ್ಧಿಮತ್ತೆಗೂ ಸಹಾ ಪ್ರೋಗ್ರಾಮಿಂಗ್ ಇರಬೇಕು. ನೀವು ಹೇಳಿದ್ದನ್ನು ಅದ್ಭುತವಾಗಿ ಮಾಡಿ ತೋರಿಸುತ್ತದೆ ಎನ್ನುವುದು ಸತ್ಯವಾದರೂ ಅದಕ್ಕೂ ನೀವು ಬೇಕು. ಆದಕ್ಕೆ ವಿಶುದ್ಧ ಚಕ್ರವಿಲ್ಲ, ಅದಕ್ಕಾಗಿಯೇ ನೀವು ವಿಭಿನ್ನ. ಅದಕ್ಕಿಂತಲೂ ನೀವು ಅದ್ಭುತ. ಕೃತಕ ಬುದ್ಧಿಮತ್ತೆಯಲ್ಲ.

ನೀವು ವಿಶುದ್ಧವನ್ನು ಕೈವಶ ಮಾಡಿಕೊಂಡರೆ, ಇತರರ ಆಲೋಚನೆಗಳನ್ನು, ಭಾವನೆಗಳನ್ನು ಮಾತ್ರವಲ್ಲ, ಅವರ ನಡೆವಳಿಕೆಯನ್ನೂ ಬದಲಿಸಿಬಿಡಬಲ್ಲಿರಿ. ಬದಲಾಯಿಸುವುದು ನಿಮ್ಮ ಕೆಲಸವಲ್ಲ, ಆದರೆ ಅವರು ಬದಲಾಗುತ್ತಾರೆ ಎಂಬುದಕ್ಕೆ ನೀವು ಕಾರಣರಾಗಿರುತ್ತೀರಿ. ಬದಲಾವಣೆಯು ಅಥವಾ ನಿಮ್ಮ ಮಾತುಗಳು ತರ್ಕ ಮತ್ತು ವಾದಗಳನ್ನು ಅವಲಂಬಿಸಿರಬೇಕು. ಹಾಗೂ ಅದಕ್ಕೆ ನೀವು ಸಾಕ್ಷಿಯನ್ನು ಹೊಂದಿರಬೇಕು. ಆಗ ನಿಮ್ಮನ್ನು ಯಾರಿಂದಲೂ ಸೋಲಿಸಲು ಆಗದು. ಹಾಗೂ ಸೋಲು ಎನ್ನುವುದು ನಿಮ್ಮ ಮುಂದಿನ ಜೀವನದಲ್ಲಿ ನಿಮ್ಮನ್ನು ಕಾಡಿಸುವುದಿಲ್ಲ.

ಕೆಣಕುವಿಕೆ ಎನ್ನುವ ಒಂದು ವಿಧಾನವಿದೆ. ನೀವು ನಿಧಾನವಾಗಿ ವಿಷಯವನ್ನು ನಿಮ್ಮ ನೇರಕ್ಕೆ ಹೇಳುತ್ತಾ ಬರುತ್ತೀರಿ. ಎದುರಿನವರಿಗೆ ಕಿರಿಕಿರಿ ಆಗುತ್ತಿದ್ದರೂ ಅವರು ನಿಮ್ಮ ಮೇಲಿನ ಬಾಂಧವ್ಯದಿಂದ ಸುಮ್ಮನೆ ಇರುತ್ತಾರೆ. ಅಥವಾ ಕೆಲವು ವಿಷಯಗಳನ್ನು, ವೈಯಕ್ತಿಕ ಸಂಗತಿಗಳನ್ನು ಬೇಕೆಂದೇ ಅವರ ಎದುರು ಆಡುತ್ತೀರಿ. ಅವರ ತಪ್ಪುಗಳನ್ನು, ಕೆಲಸವನ್ನು ಮತ್ತೆ ಮತ್ತೆ ಎತ್ತಿ ಆಡುವುದು, ಹುಳುಕೇ ಇಲ್ಲದಿದ್ದರೂ ಮೊಸರಲ್ಲಿ ಕಲ್ಲನ್ನು ಹುಡುಕುವುದು. ಅದನ್ನೇ ಪಿರಿಪಿರಿ ಮಾಡುತ್ತಾ ಹೇಳುವುದು. ಹೀಗೆ ನಾನಾ ವಿಧಗಳಲ್ಲಿ ಎದುರಿನವರನ್ನು ಕೆಣಕುವವರು ಯಾವಾಗಲೂ ಇದ್ದಾರೆ. ಅವರನ್ನೆಲ್ಲಾ ನಿರ್ಲಕ್ಷಿಸಿ ನೀವು ಮುಂದೆ ಸಾಗಲು ವಿಶುದ್ಧ ಚಕ್ರದ ಸಹಾಯ ಬೇಕೇಬೇಕು.

ವಿಶುದ್ಧ ಚಕ್ರವು ನಿಮ್ಮ ಮನಸ್ಸನ್ನು ಆಳುತ್ತದೆ. ಸಕಾರಾತ್ಮಕವಾಗಿ ಅದು ವಿಷಯಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುತ್ತದೆ. ಮತ್ತು ನಿಮ್ಮ ವರ್ತನೆಯ ಮೂಲಕ ಹೊರಹೊಮ್ಮಿಸುತ್ತದೆ. ಉದಾಹರಣೆಗೆ;

ಫ್ರೇಮಿಂಗ್ ಎಫೆಕ್ಟ್: ವಿಶುದ್ಧ ಚಕ್ರದ ಜಾಗೃತಿಯಿಂದಾಗಿ ಯಾವುದೇ ವಿಷಯವಿರಲಿ, ಕೆಲಸವಿರಲಿ, ಕಲಿಕೆ ಇರಲಿ, ಎಲ್ಲವೂ ಕೇಂದ್ರೀಕರಣವಾಗಿರುತ್ತದೆ. ನಿರ್ದಿಷ್ಟ ಗುರಿಯನ್ನು ಹೊಂದಿರುತ್ತದೆ. ಅದು ನಿಮ್ಮನ್ನು ಮತ್ತು ಎದುರಿನವರನ್ನು ಇಬ್ಬರನ್ನೂ ಏಕಕಾಲಕ್ಕೆ ಪ್ರಭಾವಿಸುತ್ತದೆ.

ಪ್ರತಿ ಪದವನ್ನು ಆಡುವಾಗಲೂ ಒಂದು ಹೊಸ ಅರ್ಥವನ್ನು ಹೊಮ್ಮಿಸುವ ಧ್ವನಿ ನಿಮ್ಮದಾಗಿರುತ್ತದೆ. ಆ ಧ್ವನಿಯು ಕಠೋರವಾಗಿರುವುದಿಲ್ಲ, ಮೃದುವಾಗಿಯೂ ಇರುವುದಿಲ್ಲ, ನಯವಾಗಿರುವುದಿಲ್ಲ, ಮಂದ್ರವಾಗಿಯೂ ಇರುವುದಿಲ್ಲ. ಅದನ್ನು ಮಾತಿನಿಂದ ವರ್ಣಿಸಲು ಆಗದು. ಆದರೆ ಅದು ತನ್ನದೇ ಆದ ಸ್ವಾಯುತ್ತತೆಯನ್ನು ಹೊಂದಿರುತ್ತದೆ. ಕೇಳುಗರನ್ನು ನೆನಪಿನ ಕಡಲಲ್ಲಿ ತೇಲಿಸುತ್ತದೆ. ಹಳೆಯದನ್ನು ಕಣ್ಮುಂದೆ ತಂದು ನಿಲ್ಲಿಸುತ್ತದೆ. ನೀವು ಅದರೊಳಗೆ ತೇಲಿ ತೇಲಿ ಹೋಗುತ್ತೀರಿ. ಮತ್ತು ಹೊರಬರಲು ಇಷ್ಟವಿಲ್ಲದೇ ಅಲ್ಲಿಯೇ ಉಳಿಯುತ್ತೀರಿ. ಅದರಿಂದ ನಿಮಗೊಂದು ಸುಖ ಸಿಗುತ್ತದೆ. ಮತ್ತು ಅದನ್ನು ನೀವು ಶಾಶ್ವತಗೊಳಿಸುವ ಪ್ರಯತ್ನ ಮಾಡುತ್ತೀರಿ. ಅದೇ ವಿಶುದ್ಧ ಚಕ್ರದ ಭಾವ ಪ್ರಚೋದಕ ಸಾಮರ್ಥ್ಯ.

ನೀವು ನಿಮ್ಮೊಳಗೇ ಮಾತನಾಡಲು ತೊಡಗುತ್ತೀರಿ. ಮೊದಮೊದಲು ನೀವು ಮನಸ್ಸಿನಲ್ಲೇ ಮಾತನಾಡಿಕೊಳ್ಳುತ್ತೀರಿ. ಬಳಿಕ ಅದು ಗುನುಗುನು ಶಬ್ದವನ್ನು ಸೂಸುತ್ತದೆ. ಆಮೇಲೆ ನೀವು ದೊಡ್ಡದಾಗಿಯೇ ಮಾತನಾಡಿ ಬಿಡುತ್ತೀರಿ. ನಿಮಗೆ ನೀವು ಆಜ್ಞೆಯನ್ನು ನೀಡುತ್ತೀರಿ. ನಿಮ್ಮನ್ನು ನೀವೇ ಕಾಡುತ್ತೀರಿ. ಬೈಯುತ್ತೀರಿ. ಹೊಗಳುತ್ತೀರಿ. ಸಮಾಧಾನ ಮಾಡಿಕೊಳ್ಳುತ್ತೀರಿ. ಇವೆಲ್ಲದರಿಂದ ನಿಮ್ಮ ಮಾನಸಿಕ ಸ್ಥಿತಿ ಸುಧಾರಿಸುತ್ತಾ ಹೋಗುತ್ತದೆ.

ವಿಶುದ್ಧ ಚಕ್ರದ ಸಹಾಯದಿಂದಾಗಿ ನೀವು ಸಕಾರಾತ್ಮಕವಾದ ಪದಗಳನ್ನೇ ಬಳಸುತ್ತೀರಿ, ಆದರೆ ಕೆಲವು ಪದಗಳು ಸಕಾರಾತ್ಮಕ ಮತ್ತು ನಕಾರಾತ್ಮಕ ಭಾವನೆಗಳನ್ನು ಪ್ರಚೋದಿತ್ತವೆ. ನಕಾರಾತ್ಮಕ ಭಾವನೆಗಳು ಹಾನಿಯನ್ನು ಉಂಟು ಮಾಡುತ್ತವೆ. ಸಕಾರಾತ್ಮಕವಾಗಿದ್ದರೆ ನಿಮ್ಮ ಅಭಿವೃದ್ಧಿಗೆ ಕಾರಣವಾಗುತ್ತವೆ.

ನಿಮ್ಮ ಧ್ವನಿಯು ನಿಮ್ಮ ವ್ಯಕ್ತಿತ್ವವನ್ನು ತೋರಿಸುತ್ತದೆ. ಅದು ಟೋನ್ ಮತ್ತು ಪಿಚ್‌ಗಳನ್ನು ಅವಲಂಬಿಸಿವೆ. ನಿಮ್ಮ ಸ್ವರವೇ ನಿಮ್ಮ ಭಾವನೆಗಳನ್ನು ಹೇಳಿ ಬಿಡುತ್ತದೆ. ಅದರ ಏರಿಳಿತ ತುಂಬಾ ಮುಖ್ಯ. ಆಗ ಮಾತ್ರ ಯಾವುದೇ ಸನ್ನಿವೇಶ ಅರ್ಥವಾಗುತ್ತದೆ.

ಮಾತನಾಡುವಾಗ ದೇಹಭಾಷೆ, ಮುಖಭಾವ, ಕಣ್ಣಿನ ಸಂಪರ್ಕ ಇವುಗಳು ಇಲ್ಲದಿದ್ದರೆ ನೀವು ತಜ್ಞರಾಗಲು ಸಾಧ್ಯವಿಲ್ಲ. ನಿಮ್ಮ ನಿರಂತರತೆ ಮಾತ್ರ ನಿಮ್ಮನ್ನು ವಿಜ್ಞಾನಿಯನ್ನಾಗಿ ಮಾಡುತ್ತದೆ. ನಿರಂತರತೆ ಮಾತ್ರ ನಿಮ್ಮ ಆರ್ಥಿಕ ಅಭಿವೃದ್ಧಿ ಮಾಡುತ್ತದೆ. ನಿರಂತರತೆ ಮಾತ್ರ ನಿಮ್ಮ ಕೆಲಸದಲ್ಲಿ ಖುಷಿ ನೀಡುತ್ತದೆ. ನಿರಂತರತೆ ಮಾತ್ರ ನಿಮಗೊಂದು ವ್ಯಕ್ತಿತ್ವವನ್ನು ನೀಡುತ್ತದೆ. ನೀವು ಒಮ್ಮೆ ಮಾತನಾಡುವಾಗ, ನಿಮ್ಮ ಎದುರಿನಲ್ಲಿರುವ ಯಾರಾದರೂ ಒಬ್ಬರ ಕಣ್ಣಲ್ಲಿ ಕಣ್ಣಿಟ್ಟು ನೋಡಿ, ಮಾತು ಮುಗಿಯುವವರೆಗೂ ಆಗಾಗ ಅವರನ್ನು ಬರೀ ನೋಡುವುದಲ್ಲ ಕಣ್ಣಲ್ಲಿ ಕಣ್ಣಿಟ್ಟು ನೋಡಿ. ಅವರು ನಿಮ್ಮ ವಶಕ್ಕೆ ಬಂದುಬಿಡುತ್ತಾರೆ.

ಬಾಲ್ಯದಿಂದಲೂ ನೀವು ಕತೆಗಳನ್ನು ಕೇಳುತ್ತಾ ಕೇಳುತ್ತಾ ಬೆಳೆದು ಬಂದಿದ್ದೀರಿ. ಅದಕ್ಕಾಗಿಯೇ ಒಂದು ಪುಸ್ತಕ ಕಂಡರೂ ನೀವು ಅದನ್ನು ಕೈಗೆತ್ತಿಕೊಳ್ಳುತ್ತೀರಿ. ಮತ್ತು ಓದುತ್ತೀರಿ. ಮುಂದೊಂದು ದಿನ ನೀವು ಆ ರೀತಿಯಲ್ಲಿ ಬಂದ ಪುಸ್ತಕಗಳನ್ನೆಲ್ಲಾ ಓದಿಯೇ ಓದುತ್ತೀರಿ. ಮತ್ತು ಅದರಲ್ಲಿರುವ ಕತೆಗಳನ್ನು ಚಂದವಾಗಿ ಹೇಳುತ್ತೀರಿ. ಕತೆ ಹೇಳುವುದು ಒಂದು ಕಲೆ. ಕತೆಗಳು ಎಂತೆಂಥವರನ್ನೂ ಮರುಳು ಮಾಡಿದೆ.

ಎಂದೂ ವ್ಯರ್ಥವಲ್ಲದವುಗಳು

ಭಕ್ತ್ಯಾ ಕೃತಾ ದೇವಪೂಜಾ ಕಷ್ಟೇನಾಪ್ಯರ್ಜಿತಂ ಧನಮ್ ।
ಶ್ರದ್ಧಯಾ ಚ ಕೃತಂ ಕರ್ಮ ಸಂವಿಭಾಗೋ ನ ವೈ ಮುಧಾ ॥ -ಸುವಚನಶತಕಂ

ಭಕ್ತಿಯಿಂದ ಮಾಡಿದ ದೇವರ ಪೂಜೆ, ಕಷ್ಟಪಟ್ಟು ಗಳಿಸಿದ ಹಣ, ಶ್ರದ್ಧೆಯಿಂದ ಮಾಡಿದ ಕೆಲಸ ಎಲ್ಲವನ್ನೂ ಎಲ್ಲರೊಡನೆ ಸಮವಾಗಿ ಹಂಚಿಕೊಳ್ಳುವುದು ಎಂದೂ ವ್ಯರ್ಥವಾಗುವುದಿಲ್ಲ - ಎಂಬುದು ಶ್ಲೋಕಾರ್ಥ.

ಮನುಷ್ಯನು ಮಾಡಿದ ಕೆಲವಷ್ಟು ಕಾರ್ಯಗಳು ಸಾರ್ಥಕವಾಗುತ್ತವೆ. ಹಲವಷ್ಟು ವ್ಯರ್ಥವಾಗುತ್ತವೆ. ಸಾರ್ಥಕವಾಗುವುದಕ್ಕೆ ವಿವೇಕಪೂರ್ಣವಾಗಿ ತೊಡಗಿಕೊಳ್ಳುವಿಕೆ, ನಿರಂತರ ಪರಿಶ್ರಮ, ಸರಿಯಾದ ಮಾರ್ಗದಲ್ಲಿ ಕ್ರಮಿಸುವಿಕೆ ಕಾರಣವಾದರೆ, ಗಡಿಬಿಡಿ,



ಯೋಚಿಸದೇ ಮುನ್ನುಗ್ಗುವುದು, ಆಲಸ್ಯ, ಆರಂಭಶೂರತ್ವ... ಇತ್ಯಾದಿಗಳು ವ್ಯರ್ಥವಾಗುವುದಕ್ಕೆ ಕಾರಣವೆನಿಸುತ್ತವೆ. ಆದ್ದರಿಂದಲೇ ಹೇಳುವುದು ಸರಿಯಾಗಿ ಯೋಚಿಸಿ ತೊಡಗಬೇಕು ಎಂಬುದಾಗಿ. ಭಗವಂತ ನಮಗೆ ಸಾಕಷ್ಟು ಅವಕಾಶವನ್ನಿತ್ತಿದ್ದಾನೆ. ವಿವೇಕವನ್ನೂ, ಬುದ್ಧಿಶಕ್ತಿಯನ್ನೂ ನೀಡಿದ್ದಾನೆ. ಇವುಗಳನ್ನೆಲ್ಲ ಅರಿತು ವ್ಯವಹರಿಸಬೇಕು. ಯಾವಾಗಲೂ ವ್ಯರ್ಥವಾಗದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನಿಸಬೇಕು. ವ್ಯರ್ಥ ಕೆಲಸ ಯಾರಿಗೂ ಭೂಷಣವಲ್ಲ, ಶೋಭೆ ತರುವುದಿಲ್ಲ.

ಭಕ್ತಿ, ಶ್ರದ್ಧೆ, ಶ್ರಮ, ಸಮಲೋಚನೆಗಳಿಂದ ಕೈಗೊಂಡ ಕೆಲಸವೆಂದೂ ವ್ಯರ್ಥತೆಗೆ ಅನುವು ಮಾಡಿಕೊಡುವುದಿಲ್ಲ. ಇದನ್ನೇ ಕವಿಯು ಪ್ರಕೃತ ಶ್ಲೋಕದಲ್ಲಿ ನಿರೂಪಿಸುತ್ತಾನೆ. ದೇವರ ಮುಂದೆ ಮಾಡಿದ ಪ್ರಾರ್ಥನೆ, ಪೂಜೆ ಪ್ರಯೋಜನಕ್ಕೆ ಬರಲಿಲ್ಲವೆಂದು ಕೆಲಸ ಕೈಗೂಡದಾಗ ಹೇಳುತ್ತೇವೆ. ಈ ರೀತಿಯಲ್ಲಿ ಆಕ್ಷೇಪಿಸುವ ಮುನ್ನ ನಾವೆಷ್ಟು ಭಕ್ತಿಯಿಂದ ಪೂಜಿಸಿದ್ದೇವೆ ಎಂಬುದನ್ನು ಮರೆಯುತ್ತೇವೆ. ಮನಸ್ಸಿನ ತುಂಬ 'ಬೇಕು'ಗಳನ್ನೇ ತುಂಬಿಕೊಂಡು ದೇವರ ಪೂಜೆಗೆ ಮುಂದಾದರೆ ಭಕ್ತಿ ಬರುವುದೆಂತು? ನಮ್ಮದು ನಿಷ್ಕಾಮ ಭಕ್ತಿಯಾಗಿರಬೇಕೇ ವಿನಾ ಸಕಾಮ ಭಕ್ತಿಯಾಗಿರಬಾರದು. ಭಕ್ತಿಯಿಂದ ಮಾಡಿದ ಪ್ರಾರ್ಥನೆ, ಪೂಜೆಗಳು ನಿಷ್ಫಲವಲ್ಲ. ವ್ಯಕ್ತಿಗನುಗುಣವಾಗಿ ಭಗವಂತನೊಲಿಯುತ್ತಾನೆ.

ಪ್ರಹ್ಲಾದನಿಗೆ ಭಕ್ತಿಯಿಂದ ಕಯಾಲು ವಿಷ ಕೊಟ್ಟಾಗಲೂ ಅಮೃತವಾಯ್ತು. ಉಡುಪಿಯ ಕೃಷ್ಣ ತಿರುಗಲು ಕನಕನ ಭಕ್ತಿಯೇ ಕಾರಣ. ಭಕ್ತ ಕುಂಬಾರನಿಗೆ ಭಕ್ತಿಯೇ ಮುಖ್ಯವಾಗಿತ್ತು. ಕಣ್ಣಪ್ಪನ ಭಕ್ತಿಯ ಮುಂದೆ ಬೇರೆ ಭಕ್ತಿಯೇ ಇಲ್ಲ. ಇಂತಹ ನೂರಾರು ದೃಷ್ಟಾಂತಗಳನ್ನು ಗಮನಿಸಿದರೆ ಭಕ್ತಿಯಿಂದ ಮಾಡಿದ ಭಗವಂತನ ಪೂಜೆ ವ್ಯರ್ಥವಲ್ಲವೆಂದು ಋಜುವಾತಾಗುತ್ತದೆ. ಹಾಗಾಗಿ ಭಕ್ತಿಯಿಂದ ಭಗವದಾರ್ಚನೆಯಲ್ಲಿ ತೊಡಗಬೇಕು. ಭಕ್ತಿಯೆಂಬುದು ವ್ಯಾಪಾರವಾಗಬಾರದು. ತೋರಿಕೆಯೂ ಆಗಬಾರದು. ಆಗ ಭಕ್ತಿಯೆಂದೂ ವ್ಯರ್ಥವಾಗದು. ಕಷ್ಟಪಟ್ಟು ಗಳಿಸಿದ ಹಣವೆಂದೂ ವ್ಯರ್ಥವಾಗದು. ಅದು ಶ್ರಮದ ಬೆಲೆ. ಅದು ಸನ್ಮಾರ್ಗವನ್ನೇ ಕಂಡುಕೊಳ್ಳುತ್ತದೆ. ಯಾರಿಗೂ ಮೋಸ ಮಾಡದೆ ನಿರಂತರ ಶ್ರಮವಹಿಸಿದ ಗಳಿಕೆಯಾದಲ್ಲಿ ವ್ಯರ್ಥದ ಪ್ರಶ್ನೆಯೇ ಹುಟ್ಟುವುದಿಲ್ಲ.

ಶ್ರದ್ಧೆಯಿಂದ ಮಾಡಿದ ಕಾಯಕವೂ ವ್ಯರ್ಥವಲ್ಲ. ಎಲ್ಲಕ್ಕೂ ಶ್ರದ್ಧೆಯೇ ಮುಖ್ಯ. ಆದ್ದರಿಂದಲೇ ವೇದವು 'ಶ್ರದ್ಧಾಂ ಕಾಮಸ್ಯ ಮಾತರಮ್' ಶ್ರದ್ಧೆಯು ಬಯಕೆಯ ತಾಯಿ ಎಂದಿದೆ. ಶ್ರದ್ಧೆಯು ವ್ಯರ್ಥವಾಗುವುದಕ್ಕೆ ಬಿಡುವುದಿಲ್ಲ. ಮಾಡಿದ ಕೆಲಸ ಒಳಿತಿರಲಿ, ಕೆಡುಕಿರಲಿ ನಮ್ಮವರಲ್ಲಿ ಹಂಚಿಕೊಳ್ಳಬೇಕು. ಎಲ್ಲರೊಡನೆ ಹಂಚಿಕೊಳ್ಳುವುದು ಉತ್ತಮ. ಅರಿತವರು, ಅನುಭವಿಗಳು ಅನುಭವಪೂರ್ಣ ಮಾಹಿತಿಯನ್ನು ಹಂಚಿಕೊಳ್ಳುತ್ತಾರೆ. ಮಾರ್ಗದರ್ಶನ ಮಾಡುತ್ತಾರೆ. ಇಂತಹ ಸನ್ಮಾರ್ಗಾನುಸರಣೆ ನಮ್ಮದಾದರೆ ವ್ಯರ್ಥವೆಂಬ ಪದ ನಮ್ಮ ಬಳಿ ಸುಳಿಯುವುದಿಲ್ಲ.

ಇರಾನ್ ಬಗ್ಗೆ ಮೋದಿ ಮೌನದ ಹಿಂದೆ-ಮುಂದೆ

ಒಳನೋಟ
• ಹೆ.ಬಾ. ಮಲ್ಯ



ರಷ್ಯಾ- ಉಕ್ರೇನ್ ಯುದ್ಧದ ನಂತರ ಈಗ ಅಮೆರಿಕ,ಇಸ್ರೇಲ್-ಇರಾನ್ ನಡುವೆ ಯುದ್ಧ ಆರಂಭವಾಗಿದೆ. ಇತ್ತ ಪಾಕಿಸ್ತಾನ-ಅಫಘಾನಿಸ್ತಾನಗಳ ನಡುವೆ ಯುದ್ಧ ನಡೆಯುತ್ತಿದೆ. ಇರಾನ್, ಪಾಕಿಸ್ತಾನ್, ಅಫಘಾನಿಸ್ತಾನಗಳಲ್ಲಿ ಯುದ್ಧಗಳು ಮತೀಯ ಆಧಾರದ ಮೇಲೆ ನಡೆಯುತ್ತಿವೆ. ಇಸ್ರೇಲ್‌ಗೆ ಮುಸ್ಲಿಂ ರಾಷ್ಟ್ರಗಳ ನಡುವೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನವಾದರೆ, ಅಮೆರಿಕಕ್ಕೆ ತನ್ನ 'ದೊಡ್ಡಣ್ಣ'ನ ಸ್ಥಾನವನ್ನು ಉಳಿಸಿಕೊಳ್ಳುವ ಕಾತರ. ಇರಾನ್, ಇಸ್ರೇಲನ್ನು ನಾಶ ಮಾಡಲು ಮೊದಲಿನಿಂದಲೂ ಕಿರುಕುಳ ನೀಡುತ್ತಲೇ ಬಂದಿದೆ. ಈ ಉಪಟಳವನ್ನು ಶಾಶ್ವತವಾಗಿ ಕೊನೆಗಾಣಿಸಬೇಕೆಂಬುದು ಇಸ್ರೇಲಿನ ಬಯಕೆ.

ಇಲ್ಲಿ ಇನ್ನೊಂದು ವಿಶೇಷವೆಂದರೆ ಮುಸ್ಲಿಂ ದೇಶಗಳೇ ಪರಸ್ಪರ ಬಡಿದಾಡಿಕೊಳ್ಳುವುದು. ಪಾಕಿಸ್ತಾನ ಮತ್ತು ಅಫಘಾನಿಸ್ತಾನಗಳೆರಡೂ ಮುಸ್ಲಿಂ ಮತೀಯ ಆಡಳಿತವಿರುವ ದೇಶಗಳು. ಆದರೆ ಮುಸ್ಲಿಮರಲ್ಲಿ ಶಿಯಾ-ಸುನ್ನಿ ಇತ್ಯಾದಿ ಅನೇಕ ಪರಸ್ಪರ ವಿರೋಧಿ ಜನಾಂಗಗಳಿವೆ. ಇರಾನ್ ಶಿಯಾ ಮುಸ್ಲಿಮರ ಆಡಳಿತ ಇರುವ ದೇಶ. ಅದು ಸುನ್ನಿ ಹಾಗೂ ವಹಾಬಿ ಪ್ರಾಬಲ್ಯದ ದೇಶಗಳಾದ ಸೌದಿ ಅರೇಬಿಯಾ, ಯುಎಇ, ಕತಾರ್, ಒಮಾನ್ ಮುಂತಾದ ದೇಶಗಳ ನಗರಗಳ ಮೇಲೆ ಕ್ಷಿಪಣಿ ದಾಳಿ ನಡೆಸುತ್ತಿದೆ.

ಇರಾನ್‌ನಲ್ಲೇ ಮುಸ್ಲಿಂ ಯುವ ಜನಾಂಗ ಖಮೇನಿ ಸಾವನ್ನು ಸಂಭ್ರಮಿಸುತ್ತಿರುವಾಗ ಭಾರತದ ಕೆಲವು ಮುಸ್ಲಿಂ ಗುಂಪುಗಳು ಆಯತೊಲ್ಲ ಖಮೇನಿಯ ಸಾವಿಗಾಗಿ ಕಣ್ಣೀರು ಸುರಿಸುತ್ತಿರುವುದು ವಿಚಿತ್ರ. ಇನ್ನು ಕಾಂಗ್ರೆಸ್ಸಿನ ಸಮಸ್ಯೆ ಇನ್ನೂ ವಿಚಿತ್ರ. ಇರಾನ್ ಯುದ್ಧ ಹಾಗೂ ಖಮೇನಿ ಹತ್ಯೆ ಬಗ್ಗೆ ಮೋದಿ ಮೌನ ಯಾಕೆ ಎಂಬುದೇ ಕಾಂಗ್ರೆಸಿಗರಿಗೆ ದೊಡ್ಡ ಚಿಂತೆ. ಏನೇ ಆದರೂ ಮೋದಿಯನ್ನು ಟೀಕಿಸುವುದು, ಮುಸ್ಲಿಮರ ಓಲೈಕೆ ಮಾಡುತ್ತಾ ಅಧಿಕಾರ ಗಳಿಸಲೆತ್ನಿಸುವುದು -ಇದೊಂದೇ ಅಜೆಂಡಾ ರಾಹುಲ್ ಮತ್ತು ಕಾಂಗ್ರೆಸಿಗರದ್ದು. ವಿದೇಶಾಂಗ ನೀತಿಯಲ್ಲಿ ಮೋದಿಯವರ ಪರಿಪಕ್ವತೆ ಬಗೆ ಅವರಿಗೇನು ಗೊತ್ತು? ಪಾಶ್ಚಾತ್ಯ ಜಗತ್ತು, ಮಧ್ಯ ಏಷ್ಯಾ ಯುದ್ಧದ ದಳ್ಳುರಿಯಲ್ಲಿ ಬೇಯುತ್ತಿದ್ದರೆ ಭಾರತದಲ್ಲಿ ಜನ ಹಾಯಾಗಿದ್ದಾರೆ. ಎಲ್ಲಾ ಕ್ರೈಸ್ತ, ಮುಸ್ಲಿಂ ದೇಶಗಳೊಂದಿಗೆ ಹಾಗೂ ಇಸ್ರೇಲ್, ರಷ್ಯಾಗಳೊಡನೆ ಕೂಡ ಮೋದಿ ಉತ್ತಮ ಸಂಬಂಧ ಸ್ಥಾಪಿಸಿದ್ದಾರೆ. ಜಗತ್ತು ತೈಲ ಸಂಕಷ್ಟದಲ್ಲಿದ್ದರೂ ರಷ್ಯಾದ ಎರಡು ಹಡಗುಗಳು ತೈಲ ಹೊತ್ತು ಭಾರತದತ್ತ ಬರುತ್ತಿವೆ.

ಈ ಯುದ್ಧದ ಸಂದರ್ಭದಲ್ಲಿ ಭಾರತ ಜಾಣ ನಡೆ ಪ್ರದರ್ಶಿಸಿದೆ. ಖಮೇನಿ ಹತ್ಯೆ ಬಗ್ಗೆ ಮೋದಿ ಮೌನ ವಹಿಸಿದರೂ, ಭಾರತದ ವಿದೇಶಾಂಗ ಖಾತೆಯ ಕಾರ್ಯದರ್ಶಿ ಇರಾನ್ ದೂತಾವಾಸಕ್ಕೇ ಹೋಗಿ ಅಲ್ಲಿನ ಪುಸ್ತಕದಲ್ಲಿ ಖಮೇನಿ ಸಾವಿನ ಬಗ್ಗೆ ಭಾರತದ ಪರವಾಗಿ ಸಂತಾಪ ಸೂಚಕ ಶಬ್ದಗಳನ್ನು ಬರೆದು ಬಂದಿದ್ದಾರೆ. ವಿದೇಶಾಂಗ ಸಚಿವ ಜೈಶಂಕರ್ ಇರಾನ್ ವಿದೇಶಾಂಗ ಸಚಿವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಏಕೆಂದರೆ ಇರಾನಿನ ಛಬಾಹರ್ ಬಂದರನ್ನು ಭಾರತ ನಿರ್ಮಿಸಿದೆ. ಇದರಿಂದ ಯುರೋಪಿಗೆ ಹತ್ತಿರದ ವಾಣಿಜ್ಯ ಮಾರ್ಗ ಲಭ್ಯವಾಗುತ್ತದೆ. ಇರಾನ್‌ನಿಂದ ಭಾರತ ಹೇರಳ ತೈಲ ಖರೀದಿಸುತ್ತಿದೆ. ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರತಿಯೊಂದು ಹೆಜ್ಜೆಯನ್ನೂ ಅಳೆದುತೂಗಿ, ಅತಿ ಎಚ್ಚರಿಕೆಯಿಂದ ಇಡಬೇಕಾಗುತ್ತದೆ. ಇಂಥ ಸೂಕ್ಷ್ಮತೆ, ಜಾಣ್ಮೆ ಮಂದಮತಿಗಳಿಗೆ ಹೇಗೆ ಅರ್ಥವಾಗಬೇಕು? ಅವರಿಗೆ ತನ್ನ ವಂಶ ಅಧಿಕಾರ ಹಿಡಿಯಬೇಕೆಂಬ ಚಿಂತೆ-ಅದಕ್ಕಾಗಿ ಎಲ್ಲ ಗಿಮಿಕ್‌ಗಳು. ಮೋದಿಗಾದರೋ ರಾಷ್ಟ್ರ ಹಾಗೂ ಈ ರಾಷ್ಟ್ರದ 140 ಕೋಟಿ ಪ್ರಜೆಗಳ ಹಿತರಕ್ಷಣೆಯ ಚಿಂತೆ.

ಇರಾನ್‌ನ ಪ್ರಾಚೀನ ಧರ್ಮ, ಸಂಸ್ಕೃತಿ, ಇತಿಹಾಸಗಳ ಮೇಲೆ ಬೆಳಕು ಚೆಲ್ಲುವುದು ಇಲ್ಲಿ ಪ್ರಸ್ತುತವೆನಿಸುತ್ತದೆ. ಸುಮಾರು ಕ್ರಿ.ಶ.7ನೇ ಶತಮಾನದಲ್ಲಿ ಅಂದರೆ ಅರಬ್ ದೇಶದಲ್ಲಿ ಇಸ್ಲಾಮಿನ ಉದಯವಾದ ಮೇಲೆ, ಅರಬ್ ಮುಸ್ಲಿಮರು ಪರ್ಷಿಯಾ(ಇಂದಿನ ಇರಾನ್) ದೇಶದ ಮೇಲೆ ಆಕ್ರಮಣ ಮಾಡಿ ವಶಪಡಿಸಿಕೊಂಡರು. ಅಲ್ಲಿ ಆಗ ಸಾವಿರಾರು ವರ್ಷಗಳಷ್ಟು ಪ್ರಾಚೀನವಾದ ಜೊರಾಷ್ಟ್ರಿಯನ್ ಧರ್ಮವಿತ್ತು. ಮುಸ್ಲಿಂ ಆಕ್ರಮಕರ ವಶವಾದ ಮೇಲೆ ಜೊರಾಷ್ಟ್ರಿಯನ್ ಧರ್ಮವನ್ನು ನಿಷೇಧಿಸಿ ಅವರ ದೇವಾಲಯಗಳನ್ನು ಧ್ವಂಸಗೊಳಿಸಲಾಯಿತು. ಜನರನ್ನು ಹಿಂಸಿಸಿ ಬಲಾತ್ಕಾರದಿಂದ ಮತಾಂತರ ಮಾಡಲಾಯಿತು. ತಮ್ಮ ಧರ್ಮವನ್ನು ಉಳಿಸಿಕೊಳ್ಳಲು ಸಾವಿರಾರು ಜೊರಾಷ್ಟ್ರಿಯನ್ನರು ಹಡಗುಗಳಲ್ಲಿ ಪಲಾಯನಗೈದು ಭಾರತದ ಗುಜರಾತ್ ತೀರ ತಲುಪಿದರು. ಅಲ್ಲಿ ಆಗ ಕರ್ಣಾವತಿಯ ರಾಜ ಆಳುತ್ತಿದ್ದ ಎಂದೂ, ನಿರಾಶ್ರಿತರು ಅವನಲ್ಲಿ ಆಶ್ರಯ ಬೇಡಿದರೆಂದೂ ಹೇಳುತ್ತಾರೆ. ಇನ್ನೊಂದು ಐತಿಹ್ಯದ ಪ್ರಕಾರ ಸಂಜಾನ್ ತೀರಕ್ಕೆ ತಲುಪಿ ಅಲ್ಲಿನ ರಾಜನಲ್ಲಿ ಆಶ್ರಯ ಬೇಡಿದರೆಂದು ಹೇಳಲಾಗುತ್ತದೆ. ಒಂದು ದಂತಕತೆಯ ಪ್ರಕಾರ ಅಲ್ಲಿನ ರಾಜನು ಅವರ ನಡೆಯನ್ನು, ಸಂಸ್ಕೃತಿಯ ಮಟ್ಟವನ್ನು ಪರೀಕ್ಷಿಸಲು ಒಂದು ಲೋಟದಲ್ಲಿ ತುಳುಕುವಷ್ಟು ಹಾಲು ತುಂಬಿ ಕಳುಹಿಸಿದನಂತೆ. ಆದರೆ ಸಂಸ್ಕಾರವಂತರೂ, ಪ್ರತಿಭಾವಂತರೂ ಆದ ಪರ್ಷಿಯನ್ನರು ಆ ತುಂಬು ಲೋಟದಲ್ಲಿ ಸಕ್ಕರೆ ಮಿಶ್ರ ಮಾಡಿ, ತಾವು ಹಾಲು-ಸಕ್ಕರೆ ಮಿಶ್ರಣದಂತೆ ಸವಿಯಾದ ಸಂಬಂಧ ಇಟ್ಟುಕೊಳ್ಳುತ್ತೇವೆಂಬ ಸಂದೇಶ ಕಳುಹಿಸಿ ಕೊಟ್ಟರಂತೆ. ಸಂತುಷ್ಟನಾದ ರಾಜ ಅವರಿಗೆ ಆಶ್ರಯ ಕೊಟ್ಟನಂತೆ. ಅವರನ್ನು ಫಾರ್ಸಿಗಳು ಎನ್ನುತ್ತಾರೆ. ಅವರು ಇಂದಿಗೂ ಹಿಂದುಗಳೊಡನೆ ಸಹಬಾಳ್ವೆ ಮಾಡಿಕೊಂಡು ಬಂದಿದ್ದಾರೆ. ಭಾರತೀಯರೇ ಆಗಿದ್ದಾರೆ. ತಮ್ಮ ಧರ್ಮವನ್ನೂ ಅಡೆತಡೆ ಇಲ್ಲದೆ ಅನುಸರಿಸಿಕೊಂಡು ಬರುತ್ತಿದ್ದಾರೆ. ದೇಶಕ್ಕೆ ಅಪಾರ ಕೊಡುಗೆಯನ್ನು ಕೊಟ್ಟಿದ್ದಾರೆ. ಕೆಲವು ಪ್ರಮುಖ ಹೆಸರುಗಳನ್ನು ಉದಾಹರಿಸಬೇಕೆಂದರೆ -ಜಮ್‌ಜಮ್ಶೆಟ್ಜಿ ಟಾಟಾ, ರತನ್ ಟಾಟಾ, ಗೋದ್ರೆಜ್, ವಾಡಿಯಾ, ಹೋಮಿ-ಜೆ.ಭಾಭಾ, ಸ್ಯಾಮ್ ಮಾಣಿಕ್ ಶಾ, ದಾಧಾಭಾಯಿ ನವರೋಜಿ, ಮೇಡಂ ಭಿಕ್ಯಾಜಿ ಕಾಮಾ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಫಿರೋಜ್ ಶಾ ಮೆಹ್ತಾ ಮುಂತಾದವರು.

1979ರವರೆಗೆ ಇರಾನ್‌ನಲ್ಲಿ ಮಹಮದ್ ರಾಜಾ ಶಾ ಪಹ್ಲವಿಯ ಆಡಳಿತವಿತ್ತು. ಅವರು ಅಮೆರಿಕದೊಂದಿಗೆ ಸ್ನೇಹದಲ್ಲಿದ್ದರು. ಅವರದ್ದು ವಂಶ ಸರ್ವಾಧಿಕಾರವಾಗಿದ್ದರೂ ಆಧುನಿಕ ಜೀವನ ಶೈಲಿಗೆ ವಿರೋಧವಿರಲಿಲ್ಲ. 1980ರ ಹೊತ್ತಿಗೆ ರುಹಲ್ಲಾ ಖೊಮೇನಿ ಇಸ್ಲಾಮಿಕ್ ಕ್ರಾಂತಿ ನಡೆಸಿ ಅಧಿಕಾರಕ್ಕೆ ಬಂದರು. ಅವರು ಶಿಯಾ ಮತೀಯ ನಾಯಕರು ಹಾಗೂ ಷರಿಯಾ ಕಾನೂನುಗಳನ್ನು ಖಡಕ್ಕಾಗಿ ಜಾರಿಗೆ ತಂದರು. ಯುವತಿಯರು ಮಹಿಳೆಯರಿಗೆ ಬುರ್ಖಾ ಕಡ್ಡಾಯವಾಯಿತು. ತಪ್ಪಿದವರಿಗೆ ಛಡಿ ಏಟು, ಹಿಂಸೆ. ಮಹಿಳೆಯರಿಗಂತೂ ಸ್ವಾತಂತ್ರ್ಯವೇ ಇಲ್ಲವಾಯಿತು. ವಿರೋಧಿಸಿದವರ ಮೇಲೆ ದೌರ್ಜನ್ಯ ಹಾಗೂ ನೇಣುಗಂಬದ ಶಿಕ್ಷೆ. 1989ರಲ್ಲಿ ಅವರು ನಿಧನರಾದ ಮೇಲೆ ಆಯತೊಲ್ಲಾ ಖಮೇನಿ ಕೂಡಾ ಅದೇ ಬಗೆಯ ಆಳ್ವಿಕೆ ಮುಂದುವರಿಸಿದರು. ಕೆಲವು ವರ್ಷದ ಹಿಂದೆ ಇರಾನ್‌ನ ಕಾಲೇಜ್ ಯುವತಿಯರು ಹಿಜಾಬ್ ವಿರುದ್ಧ ಪ್ರತಿಭಟಿಸಿದ್ದು ಎಲ್ಲರಿಗೂ ತಿಳಿದಿದೆ.

2004ರ ಆಗಸ್ಟ್ 15ರಂದು ಇರಾನ್‌ನಲ್ಲಿ ಭಯಾನಕ ಘಟನೆ ನಡೆಯಿತು. ಅತಾಫಿ ಸಹಾಲೆ ಎಂಬ ಯುವತಿಯನ್ನು ಒಂದು ಕ್ರೇನಿಗೆ ಹಗ್ಗ ಕಟ್ಟಿ ನೇಣಿಗೆ ಏರಿಸಲಾಯಿತು. ಆಕೆಯ ಅಪರಾಧವೆಂದರೆ ಒಂದು ರಾತ್ರಿ ಆಕೆ ಕಾರಿನಲ್ಲಿ ಹಿಜಾಬ್ ಧರಿಸದೆ ಇದ್ದುದು ಮತ್ತು ಪುರುಷ ಡ್ರೈವರ್ ಜೊತೆ ಒಬ್ಬಳೇ ಹೋದುದು. ಆಕೆಯನ್ನು ಪೊಲೀಸ್ ಸ್ಟೇಶನ್ನಿಗೆ ಎಳೆದುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರ ನಡೆಸಲಾಯಿತು. ಷರಿಯತ್ ಕಾನೂನಿನಂತೆ ನೇಣುಗಂಬದ ಶಿಕ್ಷೆ ವಿಧಿಸಲಾಯಿತು. ಕ್ರೇನಿನ ನೇಣಿನ ಕುಣಿಕೆಯಲ್ಲಿ ವಿಲ ವಿಲನೆ ಒದ್ದಾಡಿ, ಕೈಕಾಲು ಬಡಿಯುತ್ತಾ ಸಾಯುವ ಕೊನೆ ಕ್ಷಣದಲ್ಲಿ ಆಕೆ "ಮುಂದೊಂದು ದಿನ ನಿನ್ನ ಶವದ ಮೇಲೆಯೇ ಇಲ್ಲಿನ ಹೆಣ್ಮಕ್ಕಳು ಕುಣಿದು ಕುಪ್ಪಳಿಸಿ ಸಂಭ್ರಮಿಸುತ್ತಾರೆ ನೋಡು" ಎಂದು ಖಮೇನಿಗೆ ಶಪಿಸಿ ಪ್ರಾಣಬಿಟ್ಟಳು. ಕರ್ಮ ಎಂದಿಗೂ ಬೆನ್ನು ಬಿಡುವುದಿಲ್ಲ. ಇಂದು ಅಯತೊಲ್ಲಾ ಖಮೇನಿಯ ಶವ ಬಿದ್ದಿದೆ. ಇರಾನಿನ ಸಾರ್ವಜನಿಕ ಬೀದಿಗಳಲ್ಲಿ ಯುವಕ ಯುವತಿಯರು ಹಿಜಾಬ್ ಇಲ್ಲದೆ, ಕುಣಿದು ಸಂಭ್ರಮಿಸುತ್ತಿದ್ದಾರೆ. ಎಂಥ ವಿಡಂಬನೆ!

ಖಮೇನಿಗಾಗಿ ಭಾರತದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಕಣ್ಣೀರು ಸುರಿಸುತ್ತಾರೆ. ಅವರು ಓಲೈಸುತ್ತಿರುವ ಮುಸ್ಲಿಮರೂ ಕಣ್ಣೀರು ಸುರಿಸುತ್ತಿದ್ದಾರೆ. ಇಷ್ಟಕ್ಕೂ ಭಾರತ ಯಾಕಾಗಿ ಇರಾನ್‌ಗೆ, ಖಮೇನಿಗೆ ಬೆಂಬಲ ನೀಡಬೇಕು? ಛಬಾಹರ್ ಬಂದರು, ನಿಲ್ದಾಣ ಇರಾನ್ ಪುಕ್ಕಟೆ ಕೊಟ್ಟಿಲ್ಲ. ಭಾರತ ಕೋಟ್ಯಂತರ ರೂಪಾಯಿ ತನ್ನ ಖರ್ಚಿನಿಂದ ನಿರ್ಮಾಣ ಮಾಡಿಕೊಟ್ಟಿದೆ. ಇರಾನ್‌ಗೂ ಅದರ ಲಾಭವಿದೆ. ಮೇಲಾಗಿ ಇರಾನ್ ಒಂದು ಕಟ್ಟರ್‌ಪಂಥೀ ಸರ್ವಾಧಿಕಾರಿ ದೇಶ. ಅಲ್ಲಿನ ಪ್ರಜೆಗಳೇ ಅವರ ಆಡಳಿತದ ವಿರುದ್ಧ ಪ್ರತಿಭಟಿಸುತ್ತಾ ಬಂದಿದ್ದಾರೆ. ನಮ್ಮದು ಸ್ವತಂತ್ರ ಪ್ರಜಾಪ್ರಭುತ್ವ. ಮಾತ್ರವಲ್ಲದೆ ಭಾರತದ ವಿರುದ್ಧ ಪಾಕಿಸ್ತಾನ ಪುಲ್ವಾಮಾ ಆಕ್ರಮಣ ಮಾಡಿದಾಗಲಾಗಲೀ, ಕಾಶ್ಮೀರಿ ಪಂಡಿತರ ನರಮೇಧ ಮಾಡಿದಾಗಲಾಗಲೀ ಇರಾನ್ ಖಂಡಿಸಲಿಲ್ಲ. ಜಮ್ಮು-ಕಾಶ್ಮೀರದ ಬಗ್ಗೆ ಅದು ಸದಾ ಪಾಕಿಸ್ತಾನವನ್ನು ಬೆಂಬಲಿಸುತ್ತಾ ಬಂದಿದೆ. ಇವು ಕೆಲವೇ ಉದಾಹರಣೆಗಳು. ಅದು ಎಂದೂ ಭಾರತದ ಪ್ರಜಾಪ್ರಭುತ್ವದ ಪರವಾಗಿರಲಿಲ್ಲ. ಅವರ ತೈಲ ನಮಗೆ ಅನಿವಾರ್ಯವೇನೋ ಅಹುದು. ಆದರೆ ನಾವು ಪುಕ್ಕಟೆ ಖರೀದಿಸುತ್ತಿಲ್ಲ. ಅದು ವಾಣಿಜ್ಯ ವ್ಯವಹಾರ. ಹಾಗಾಗಿ ಇರಾನ್ ಬಗ್ಗೆ ಚಿಂತಿಸುವ ಅಗತ್ಯ ಅಷ್ಟೊಂದೇನೂ ಇಲ್ಲ. ಜೊತೆಗೆ ಇಸ್ರೇಲ್ ನಮಗೆ ಆಪತ್ಕಾಲದಲ್ಲಿ ಪ್ರಾಮಾಣಿಕವಾಗಿ ಸಹಾಯ ಮಾಡಿದ ದೇಶ.

ಇಂದು ಯುದ್ಧದಿಂದ ಜಗತ್ತು ಅಪಾಯದಲ್ಲಿದೆ ನಿಜ. ಆದರೆ ಜಾಗತಿಕವಾಗಿ ಇಸ್ಲಾಂ ಹೆಚ್ಚು ಅಪಾಯದಲ್ಲಿದೆ. ಕೊಲ್ಲಿ ಸಮರವು ಅದರ ಮೇಲೆ ದೊಡ್ಡ ಪರಿಣಾಮ ಬೀರುವುದು ನಿಶ್ಚಿತವಾಗಿದೆ.

ಇರಾನ್ ಯುದ್ಧ: ಪ್ರಾಕ್ಸಿ ಯುದ್ಧದಿಂದ ಮನೆಬಾಗಿಲಿನವರೆಗೆ

▸ ಪ್ರಶಾಂತ್ ವೈದ್ಯರಾಜ್



ಇಸ್ರೇಲ್, ಅಮೆರಿಕಾ ಮತ್ತು ಇರಾನ್ ನಡುವಿನ ಯುದ್ಧವು ಈಗ ಅತ್ಯಂತ ಅಪಾಯಕಾರಿ ಹಂತಕ್ಕೆ ತಲುಪಿದೆ. ನೇರ ದಾಳಿಗಳು, ಕ್ಷಿಪಣಿ ಪ್ರಹಾರಗಳು ಮತ್ತು ವೇಗವಾಗಿ ಏರುತ್ತಿರುವ ಭೂರಾಜಕೀಯ ಉದ್ವಿಗ್ನತೆಗಳು ಈಗ ಹಿಂದಿನ ಛಾಯಾ ಯುದ್ಧದ ಮಾದರಿಯನ್ನು ಬದಲಿಸಿವೆ. ಅಮೆರಿಕಾ ಟ್ರಂಪ್ ಮತ್ತು ನೇತನ್ಯಾಹು ಅವರ ಉದ್ದೇಶ ಇರಾನ್‌ನ ನಾಯಕತ್ವವನ್ನು ಉಚ್ಚಾಟನೆ ಮಾಡುವುದು, ಅದರ ಅಣುಕಾರ್ಯಕ್ರಮವನ್ನು ನಿಲ್ಲಿಸುವುದು, ಇಸ್ಲಾಮಿಕ್ ರೆವಲ್ಯೂಶನರಿ ಗಾರ್ಡ್ ಕಾರ್ಪ್ಸ್ (IRGC), ಕುದ್ಸ್ ಫೋರ್ಸ್ ಮತ್ತು ಬಸೀಜ್ ಸೇರಿದಂತೆ ಪ್ರಮುಖ ಸೈನಿಕ ಶಕ್ತಿಯನ್ನು ಕುಗ್ಗಿಸುವುದು ಮತ್ತು ಇರಾನ್ ಜನತೆಗೆ 'ತಮ್ಮ ದೇಶವನ್ನು ಮರಳಿ ಪಡೆಯಲು' ಅವಕಾಶ ಕಲ್ಪಿಸುವುದಾಗಿದೆ. ಇದರ ಹಿಂದೆ ಇರಾನ್‌ನ ತೈಲ ಮತ್ತು ಖನಿಜ ಸಂಪತ್ತುಗಳ ಮೇಲಿನ ಹಿತಾಸಕ್ತಿ ಕೂಡ ಅಡಕವಾಗಿದೆ ಎನ್ನಲಾಗುತ್ತಿದೆ. ಇಸ್ರೇಲಿ ಮತ್ತು ಅಮೆರಿಕನ್ ಪಡೆಗಳು ಇರಾನ್‌ನ ನಾಯಕರು ಮತ್ತು ಅದರ ಸೈನಿಕ ಮೂಲಸೌಕರ್ಯವನ್ನೂ ಗುರಿಯಾಗಿಸಿಕೊಂಡಿವೆ. ಇದಕ್ಕೆ ಪ್ರತಿಯಾಗಿ ಇರಾನ್ ಗಲ್ಫ್ ಪ್ರದೇಶದಲ್ಲಿನ ಅಮೆರಿಕಾ ನೆಲೆಗಳ ಮೇಲೆ ಪ್ರತಿದಾಳಿ ನಡೆಸುತ್ತಿದೆ. ಈ ಯುದ್ಧವು ಏಕಾಏಕಿ ಉಂಟಾಗಿಲ್ಲ ಮತ್ತು ದಶಕಗಳಿಂದ ರೂಪುಗೊಂಡಿದ್ದ ಒಂದು ತಂತ್ರದ ನೈಸರ್ಗಿಕ ಪರಿಪಾಕ ಎನ್ನುವುದನ್ನು ನಾವು ಗಮನಿಸಬೇಕು.

ಹಮಾಸ್‌ನ ದಾಳಿ ಮತ್ತು ಪ್ರತ್ಯುತ್ತರ

ಪ್ರಸ್ತುತ ಬೆಳವಣಿಗೆಯನ್ನು 2023ರ ಅಕ್ಟೋಬರ್ 7ರ ಘಟನಾವಳಿಗಳನ್ನು ಅವಲೋಕಿಸಿ ವಿಶ್ಲೇಷಿಸಬೇಕಾಗಿದೆ. ಅದೇ ದಿನ ಹಮಾಸ್ ಇಸ್ರೇಲ್‌ನ ದಕ್ಷಿಣ ಭಾಗದ ಮೇಲೆ ಭೀಕರ ದಾಳಿ ನಡೆಸಿತು. ಅದರಲ್ಲಿ ಸುಮಾರು 1,200 ಇಸ್ರೇಲಿ ನಾಗರಿಕರು ಸಾವನ್ನಪ್ಪಿದರು. 250 ಜನರನ್ನು ಗಾಜಾಕ್ಕೆ ಅಪಹರಿಸಲಾಯಿತು.

ಇರಾನ್‌ನ ಪ್ರಾಕ್ಸಿ ಜಾಲ

ಇಸ್ರೇಲ್ ಮತ್ತು ಅಮೆರಿಕಾ ವಿರುದ್ಧ ಕಾರ್ಯನಿರ್ವಹಿಸುತ್ತಿರುವ ಉಗ್ರಸಂಘಟನೆಗಳಿಗೆ ಇರಾನ್‌ನಿಂದ ದೀರ್ಘಾವಧಿಯ ಸಹಾಯ ದೊರಕುತ್ತಿದೆ. ಇರಾನ್ ಪ್ರತಿವರ್ಷ ಹಮಾಸ್ ಮತ್ತು ಪ್ಯಾಲೆಸ್ಟಿನಿಯನ್ ಸಂಸ್ಥೆಗಳಿಗೆ ಸುಮಾರು 100 ಮಿಲಿಯನ್ ಡಾಲರ್ ನೆರವು ನೀಡುತ್ತದೆ ಎಂಬ ಅಂದಾಜುಗಳಿವೆ. ಇದಲ್ಲದೆ ಇರಾನ್ ಉಗ್ರ ಸಂಘಟನೆಗಳಿಗೆ ರಾಕೆಟ್, ಕ್ಷಿಪಣಿ ಭಾಗಗಳು, ಡ್ರೋನ್ ತಂತ್ರಜ್ಞಾನ, ತರಬೇತಿ ಮತ್ತು ತಂತ್ರಜ್ಞ ಸಹಾಯ ನೀಡಿದೆ. ಇರಾನಿನ ಇಸ್ಲಾಮಿಕ್ ಗಣರಾಜ್ಯವು ಹಮಾಸ್‌ನ ಹಣಕಾಸು ಮತ್ತು ಮಿಲಿಟರಿ ಶಕ್ತಿಯ ಬೆನ್ನೆಲುಬಾಗಿದೆ. ಹಣಕಾಸಿನ ಹೊರತಾಗಿಯೂ ಟೆಹ್ರಾನ್ ಹಮಾಸ್‌ನ ಸಶಸ್ತ್ರ ವಿಭಾಗವಾದ ಇಜ್ ಅದ್-ದಿನ್ ಅಲ್-ಕಸ್ಸಾಮ್ ಬ್ರಿಗೇಡ್‌ಗಳಿಗೆ ತಂತ್ರಜ್ಞಾನ ತರಬೇತಿ ಮತ್ತು ಕಾರ್ಯಾಚರಣೆಯ ಮಾರ್ಗದರ್ಶನವನ್ನು ಪೂರೈಸಿದೆ. ಇರಾನಿನ ನಾಯಕರು ಹಮಾಸ್ ಅನ್ನು ಆಕ್ಸಿಸ್ ಆಫ್ ರೆಸಿಸ್ಟೆನ್ಸ್ ಎಂದೇ ನೋಡುತ್ತಾ ಬಂದಿದ್ದಾರೆ. ಹಮಾಸ್ ಮಾತ್ರವಲ್ಲದೆ ಲೆಬನಾನ್‌ನ ಹಿಜ್ಬುಲ್ಲಾ ಕೂಡ ಇರಾನಿ ಆಡಳಿತದಿಂದ ಆರ್ಥಿಕ ಸಹಾಯವನ್ನು ನಿರಂತರ ಪಡೆಯುತ್ತದೆ. ಒಂದು ಅಂದಾಜಿನ ಪ್ರಕಾರ ಇರಾನ್ ಹಿಜ್ಬುಲ್ಲಾಗೆ ವಾರ್ಷಿಕವಾಗಿ 700 ಮಿಲಿಯನ್ ಡಾಲರ್‌ನಿಂದ 1 ಬಿಲಿಯನ್ ಡಾಲರ್‌ವರೆಗೆ ನೆರವು ನೀಡುತ್ತದೆ ಎನ್ನಲಾಗುತ್ತದೆ. ಇಂತಹ ಪ್ರಾಕ್ಸಿ ಸಂಸ್ಥೆಗಳ ಮೂಲಕ ಇರಾನ್ ನೇರ ಯುದ್ಧವಿಲ್ಲದೆ ಮಧ್ಯಪ್ರಾಚ್ಯಾದ್ಯಂತ ತನ್ನ ಪ್ರಭಾವವನ್ನು ವಿಸ್ತರಿಸಿದೆ.

ಸೈದ್ಧಾಂತಿಕ ಬೇರುಗಳು

1979ರ ಇಸ್ಲಾಮಿಕ್ ಕ್ರಾಂತಿಯಲ್ಲಿ ಶಾಹ್ ಪತನದ ನಂತರ ಅಯತೊಲ್ಲಾ ಖಮೇನಿ ನೇತೃತ್ವದ ಇಸ್ಲಾಮಿಕ್ ಗಣರಾಜ್ಯ ಸ್ಥಾಪನೆಯಾಯಿತು. ಪಶ್ಚಿಮದ ಪ್ರಭಾವ ವಿರೋಧಿ ಧೋರಣೆ ಮತ್ತು ಕ್ರಾಂತಿಕಾರಿ ಇಸ್ಲಾಮಿನ ಪ್ರಸಾರ ಖಮೇನಿಯ ಪ್ರಮುಖ ಕಾರ್ಯಸೂಚಿಯಾಗಿತ್ತು. IRGC ಎಂಬ ಶಕ್ತಿಯ ಸೃಷ್ಟಿ ಈ ಕಾರ್ಯಸೂಚಿಯಾಧಾರದಲ್ಲೇ ನಡೆಯಿತು. ಇರಾನ್‌ನ ಪ್ರಾಕ್ಸಿ ಯುದ್ಧ ಹಲವಾರು ವರ್ಷಗಳ ಕಾಲ ಕಡಿಮೆ ವೆಚ್ಚದಲ್ಲಿ ತನ್ನ ಶತ್ರುಗಳಿಗೆ ಹಾನಿ ಮಾಡುವ ಮಾರ್ಗವೊಂದನ್ನು ತೋರಿಸಿಕೊಟ್ಟಿತು. ಆದರೆ ಅಕ್ಟೋಬರ್ 7ರ ನಂತರ ಈ ಸಮತೋಲನದಲ್ಲಿ ವ್ಯತ್ಯಾಸವಾಗಿದೆ. ದಶಕಗಳಿಂದ ಹಮಾಸ್‌ಗೆ ನೀಡಿದ ಬೆಂಬಲದಿಂದ ಇರಾನ್, ಆ ದಾಳಿಗೆ ನೇವಾಗಿ ಸಂಬಂಧಪಟ್ಟಂತೆ ಕಾಣಿಸಿದೆ. ಲೆಬನಾನ್‌ನಿಂದ ಹಿಜ್ಬುಲ್ಲಾ, ಇರಾಕ್ ಮತ್ತು ಸಿರಿಯಾಗಳಿಂದ ಮಿಲಿಟರಿ ದಾಳಿಗಳು ಮತ್ತು ಯೆಮೆನ್‌ನಿಂದ ಹೌತಿ ಕ್ಷಿಪಣಿ ದಾಳಿಗಳು ಯುದ್ಧದ ಸ್ವರೂಪವನ್ನು ತೀವ್ರಗೊಳಿಸಿದೆ. ಇರಾನ್ ಇದನ್ನು ಪಶ್ಚಿಮದ ದೌರ್ಜನ್ಯಕ್ಕೆ ಪ್ರತಿಕ್ರಿಯೆ ಎಂದಿದೆ.

ಇರಾನ್‌ನ ಒಳರಾಜಕೀಯ ಮತ್ತು ಭಾರತದ ಸವಾಲು


ಇರಾನ್‌ನ ನಾಯಕತ್ವ ಹತ್ಯೆಗೊಳಗಾದ ಹಿನ್ನೆಲೆಯಲ್ಲಿ ದೇಶದ ಆಂತರಿಕ ಸ್ಥಿರತೆ ಪ್ರಶ್ನೆಯಲ್ಲಿದೆ. ದೀರ್ಘಕಾಲದ ಆರ್ಥಿಕ ನಿರ್ಬಂಧಗಳಿಂದ ಅಸಮಾಧಾನ ಮತ್ತು ಒತ್ತಡಗಳು ಹೆಚ್ಚುತ್ತಿವೆ. ಇದು ಇಸ್ಲಾಮಿಕ್ ಗಣರಾಜ್ಯಕ್ಕೆ ತಿರುಗುಬಾಣವಾಗಲಿದೆಯೇ ಎಂಬುದು ಮುಂದಿನ ದಿನಗಳಲ್ಲಿ ನಿರ್ಧಾರವಾಗಲಿದೆ.

ಭಾರತದ ದೃಷ್ಟಿಯಲ್ಲಿ ಈ ಸಂಘರ್ಷವು ತುಂಬಾ ಸೂಕ್ಷ್ಮ ಸಮೀಕರಣವಾಗಿದೆ. ಭಾರತಕ್ಕೆ ಈಗ ಯಾವ ಬಣಕ್ಕೂ ತಕ್ಷಣದ ಭಾವನಾತ್ಮಕ ಬೆಂಬಲ ಅಥವಾ ಖಂಡನೆ ನೀಡುವ ಅಗತ್ಯವಿಲ್ಲ. ಅನೇಕ ಸಂದರ್ಭದಲ್ಲಿ ಇರಾನ್ ಪಾಕಿಸ್ತಾನದ ಪರ ಧೋರಣೆ ತೋರಿದೆ. 1965 ಮತ್ತು 1971ರ ಯುದ್ಧಗಳಲ್ಲಿ ಇರಾನ್ ಇಸ್ಲಾಮಾಬಾದ್‌ಗೆ ಬೆಂಬಲ ನೀಡಿತ್ತು. ಇತ್ತೀಚಿನ ವರ್ಷಗಳಲ್ಲಿ ಚೀನಾದೊಂದಿಗೆ ಅದರ ಸಂಬಂಧ ಮತ್ತು ಆರ್ಥಿಕ ಸಹಕಾರ ಹೆಚ್ಚಾಗಿದೆ. ಆದರೆ ಭಾರತಕ್ಕೆ ಇಸ್ರೇಲ್ ಮತ್ತು ಅಮೆರಿಕಾದೊಂದಿಗೆ ಸಶಕ್ತ ರಕ್ಷಣಾ ಸಂಬಂಧವಿದೆ. ಇಂಥ ಸಂದರ್ಭದಲ್ಲಿ ಭಾರತಕ್ಕೆ ಉತ್ಸಾಹಕ್ಕಿಂತ ವಿವೇಕವೇ ಭಾರತಕ್ಕೆ ಹಿತ. ಈ ಯುದ್ಧವು ಅನಾಹುತವಲ್ಲ. ಇದು ದಶಕಗಳಿಂದ ರೂಪುಗೊಂಡಿದ್ದ ರಾಜತಾಂತ್ರಿಕ ಮತ್ತು ಮತೀಯ ವಿರೋಧದ ನೀತಿಯ ಫಲ.



ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಘೋಷವಾಕ್ಯದಲ್ಲಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ 17 ನೇ ಬಜೆಟ್ ಮಂಡನೆ ಮಾಡಿದ್ದಾರೆ. ರಾಜ್ಯದ ಕಲ್ಯಾಣ ಕರ್ನಾಟಕ, ಕರಾವಳಿ, ದಕ್ಷಿಣ ಕನ್ನಡ, ಬಯಲು ಸೀಮೆ ಸೇರಿದಂತೆ 31 ಜಿಲ್ಲೆಗೂ ಅನುದಾನದ ಜತೆಗೆ ಬೆಂಗಳೂರಿನ ಜನ ದಟ್ಟಣೆ ತಗ್ಗಿಸಲು ಮೈಸೂರನ್ನು ರಾಜ್ಯದ ಎರಡನೇ ಐಟಿ ನಗರವನ್ನಾಗಿಸಲು ಒತ್ತು ನೀಡಲಾಗಿದೆ. ವಿವಿಧ ಜಿಲ್ಲೆಗೆ ನೀಡಲಾದ ಅನುದಾನ, ಅಭಿವೃದ್ಧಿ ದೃಷ್ಟಿಯಿಂದ ಘೋಷಿಸಲಾದ ಯೋಜನೆಗಳ ಜಿಲ್ಲಾವಾರು ವಿವರ ಇಲ್ಲಿದೆ.

ಯಾವ ಜಿಲ್ಲೆಗೆ ಏನೇನು?



ವಿಜಯಪುರ
- ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ವಿಸ್ತೃತ ಯೋಜನಾ ವರದಿ
- ವಿಜಯಪುರ ಜಿಲ್ಲೆಯಲ್ಲಿ ತೃತೀಯ ಹಂತದ ಕ್ಯಾನ್ಸರ್ ಆರೈಕೆ ಒದಗಿಸಲು ಕ್ಯಾನ್ಸರ್ ಆಸ್ಪತ್ರೆ, ಜಿಲ್ಲೆಯ ಮುದ್ದೇಬಿಹಾಳ ಗ್ರಾಮಾಂತರ ಠಾಣೆ

ಬೀದರ್
- ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ 1,000 ಬಂದಿಗಳ ಸಾಮರ್ಥ್ಯದ ನೂತನ ಕಟ್ಟಡ.
- ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜಾನುವಾರುಗಳ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರ ಸ್ಥಾಪನೆ.

ಕಲಬುರಗಿ
- ಗುಲ್ಬರ್ಗಾ ವೈದ್ಯಕೀಯ ಸಂಸ್ಥೆಯಲ್ಲಿ ಐವಿಎಫ್ ಕೇಂದ್ರವನ್ನು ತೆರೆಯಲು ತಲಾ 11 ಕೋಟಿ ರೂ. ಘೋಷಣೆ

ಯಾದಗಿರಿ
- 100 ಕೋಟಿ ರೂ. ವೆಚ್ಚದಲ್ಲಿ ನೂತನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಯಾದಗಿರಿ ಜಿಲ್ಲೆಯ ಕಕ್ಕೇರಾ ಪೊಲೀಸ್ ಠಾಣೆ,

ಬೆಳಗಾವಿ
- ಜಿಲ್ಲೆಯ ರಾಯದುರ್ಗ ತಾಲೂಕಿನ ಗೊಣ್ಣಾವರ ಗ್ರಾಮದ ಹತ್ತಿರ ಮಲಪ್ರಭ ನದಿಯಿಂದ ಕೊರೆದ ಭಾಗಕ್ಕೆ ತಡೆಗೋಡೆ ನಿರ್ಮಾಣ.
- ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯ ಸ್ಥಾಪನೆ
- ಬೆಳಗಾವಿ ಜಿಲ್ಲೆಯ ಯರಗಟ್ಟಿ ಪೊಲೀಸ್ ಠಾಣೆ

ರಾಯಚೂರು
- ರಾಯಚೂರಿನಲ್ಲಿ 10 ಕೋಟಿ ರೂ. ವೆಚ್ಚದ ಸುಸಜ್ಜಿತ ಟ್ರಾಮಾ ಕೇರ್ ಕೇಂದ್ರ ಲೋಕಾರ್ಪಣೆ.
- ರಾಯಚೂರು ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೆ.

ಕೊಪ್ಪಳ
- ಅಂಜನಾದ್ರಿ ಬೆಟ್ಟವನ್ನು ವಿಶ್ವ ಪ್ರಸಿದ್ಧ ಪ್ರವಾಸಿ ತಾಣವನ್ನಾಗಿ ಮಾಡಲು 100 ಕೋಟಿ ರೂ. ವೆಚ್ಚದ ಯೋಜನೆ.
- ನವಲಿ ಬಳಿ ತುಂಗಭದ್ರಾ ನೀರಿನ ಕೊರತೆ ನೀಗಿಸಲು ಸಮತೋಲನಾ ಜಲಾಶಯ ನಿರ್ಮಾಣದ ಪ್ರಯತ್ನ.

ಧಾರವಾಡ
- ಜಿಲ್ಲೆಯಲ್ಲಿ ಡಿಜಿಟಲ್ ಗ್ರಾಂಥಾಲಯ ಹಾಗೂ ಅಧ್ಯಯನ ಕೇಂದ್ರ ಸ್ಥಾಪನೆಗೆ 10 ಕೋಟಿ ಮೀಸಲು
- ಹಜ್ ಭವನ ನಿರ್ಮಾಣ

ಬಾಗಲಕೋಟೆ
- ಮುಧೋಳ ತಾಲೂಕಿನ ಜಂಬಗಿ ಹತ್ತಿರ ಬ್ಯಾರೇಜ್ ಹತ್ತಿರ ರಕ್ಷಣಾ ಗೋಡೆ ನಿರ್ಮಾಣ
- ಆಸ್ಪತ್ರೆಗಳ ಉನ್ನತೀಕರಣಕ್ಕೆ ಬಜೆಟ್ ನಲ್ಲಿ ನಿಧಿ ಹಂಚಿಕೆ

ಹಾವೇರಿ
- ಜಿಲ್ಲೆಯ ತಿಳುವಳ್ಳಿ ಪೊಲೀಸ್ ಠಾಣೆ
- ರೇಷ್ಮೆಗೂಡಿನ ಸಾಕಾಣಿಕೆ ವೆಚ್ಚವನ್ನು 10 ರಿಂದ 20 ರೂ.ಗೆ ಹೆಚ್ಚಳ ಮಾಡಲಾಗುವುದು. ನಗರದಲ್ಲಿ ಡಿಸಿಸಿ ಬ್ಯಾಂಕ್ ಸ್ಥಾಪಿಸಲು ಪ್ರಸ್ತಾವನೆ.

ವಿಜಯನಗರ
- 24 ಕೋಟಿ ವೆಚ್ಚದಲ್ಲಿ ಹೊಸ ತಾರಾಲಯ ಸ್ಥಾಪನೆ

ಉತ್ತರ ಕನ್ನಡ
- ಜಿಲ್ಲೆಗೆ 100 ಕೋಟಿ ವೆಚ್ಚದಲ್ಲಿ ಆಸ್ಪತ್ರೆ ನಿರ್ಮಾಣ
- ಜಿಲ್ಲೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ಗದಗ
- ಗದಗ-ಕಪ್ಪತಗುಡ್ಡ- ಲಕ್ಕುಂಡಿ ಪ್ರದೇಶಗಳನ್ನು ಒಳಗೊಂಡ ಪ್ರವಾಸೋದ್ಯಮ ಸರ್ಕ್ಯೂಟ್ ಅಭಿವೃದ್ಧಿ
- ಪಟ್ಟಣದ ಸಾರಿಗೆ ವ್ಯವಸ್ಥೆ ಸುಧಾರಿಸಲು ನೂತನ ಬಸ್ಸು ನಿಲ್ದಾಣ ನಿರ್ಮಾಣ

ಕೋಲಾರ
- ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ
- ನರಸಾಪುರ ಕೈಗಾರಿಕಾ ವಲಯದಲ್ಲಿ ನೂತನ ಪೊಲೀಸ್ ಠಾಣೆ

ದಾವಣಗೆರೆ
- ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆಗಾಗಿ ಹೊನ್ನಾಳಿ ತಾಲ್ಲೂಕಿನಲ್ಲಿ ಬೃಹತ್ ಶೀತಲಗೃಹ ನಿರ್ಮಾಣ.
- ದಕ್ಷಿಣ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ 100 ಕೋಟಿ ರೂ. ಮೀಸಲು.

ಚಿತ್ರದುರ್ಗ
- ಜಿಲ್ಲೆಯ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸಲು ನೂತನ ತಾರಾಲಯ ನಿರ್ಮಾಣ.
- ಮೊಳಕಾಲ್ಮೂರು ತಾಲ್ಲೂಕಿನ ವೆಂಕಾಟಪುರ ಡ್ರೈಕ್ ಪಾಥ್ ವೇ ದುರಸ್ತಿ ಕಾರ್ಯ.

ಬಳ್ಳಾರಿ
- ಹಜ್ ಯಾತ್ರಿಕರ ಮತ್ತು ಸಂಬಂಧಿಕರ ಅನುಕೂಲಕ್ಕಾಗಿ ಜಿಲ್ಲೆಯಲ್ಲಿ ಹಜ್ ಭವನ ನಿರ್ಮಾಣ.
- ಶ್ರೀ ನಾನಕ್ ಝೀರಾ ಸಾಹೇಬ್ ಗುರುದ್ವಾರದಲ್ಲಿ ಜ್ಞಾನ ಪ್ರಸಾರಕ್ಕಾಗಿ ಗ್ರಂಥಾಲಯ ಸ್ಥಾಪನೆ.

ಹಾಸನ
- ಸಾಲಗಾಮೇಯಲ್ಲಿ ಚೆಕ್ ಡ್ಯಾಂ ನಿರ್ಮಾಣ. ಅರಕಲಗೂಡು ತಾಲೂಕಿನ ಕೆಂಚನಕಟ್ಟೆಯಲ್ಲಿ ಚೆಕ್ ಡ್ಯಾಂ ನಿರ್ಮಾಣ.
- ಮಹಾನಗರ ಪಾಲಿಕೆಗಳಿಗೆ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಗೆ 200 ಕೋಟಿ ರೂ.

ಚಿಕ್ಕಬಳ್ಳಾಪುರ
- ಗುಡಿಬಂಡೆ ತಾಲೂಕಿನ ಹಂಪಸಂದ್ರ ಕೆರೆ ಅಭಿವೃದ್ಧಿ
- ಬಾಗೇಪಲ್ಲಿ ತಾಲೂಕಿನ ಮುದ್ದಹಳ್ಳಿ ಕುಂಟೆ ಕೆರೆಯನ್ನು ಮರುನಿರ್ಮಾಣ.

ಶಿವಮೊಗ್ಗ
- ವಿಮಾನ ನಿಲ್ದಾಣದಲ್ಲಿ ತರಬೇತಿ ಶಾಲೆ ಆರಂಭ
- ಶಿವಮೊಗ್ಗ-ಶಿಕಾರಪುರ-ರಾಣಿಬೆನ್ನೂರು ರೈಲು ಕಾಮಗಾರಿಗೆ ಅನುದಾನ ಬಿಡುಗಡೆ
- ಆಸ್ಪತ್ರೆ ಉನ್ನತೀಕರಣಕ್ಕೆ ಬಜೆಟ್ ನಲ್ಲಿ ನಿಧಿ ಹಂಚಿಕೆ

ಬೆಂಗಳೂರು ನಗರ ಜಿಲ್ಲೆ
- ಅಭಿವೃದ್ಧಿ ಜೊತೆಗೆ 1,700 ಕೋಟಿ ರೂ. ಮೊತ್ತದ 158 ಕಿ.ಮೀ. ಉದ್ದದ ವೈಟ್ ಟಾಪಿಂಗ್ ರಸ್ತೆ ಕಾಮಗಾರಿ
- 19,036 ಕೋಟಿ. ರೂ. ಮೊತ್ತದ ಉಪ ಮುಖ್ಯರಸ್ತೆಗಳ ಅಭಿವೃದ್ಧಿ
- ಹೊರವರ್ತುಲ ರಸ್ತೆ ಅಭಿವೃದ್ಧಿಗೆ 450 ಕೋಟಿ ರೂ.ಗಳ ಯೋಜನೆ
- 273 ಕೋಟಿ ರೂ. ಅಂದಾಜು ವೆಚ್ಚದಲ್ಲಿ ರಾಜಾಕಾಲುವೆಗಳ ಮೇಲ್ದರ್ಜೆ
- ಜಿಬಿಎ ಹಾಗೂ 5 ಮಹಾನಗರ ಪಾಲಿಕೆಗಳ ಸ್ಥಾಪನೆ
- ಬೆಂಗಳೂರು ಅಭಿವೃದ್ಧಿಗೆ 7,000 ಕೋಟಿ ರೂ. ಹೆಚ್ಚುವರಿ ಅನುದಾನ
- 3 ವರ್ಷಗಳಲ್ಲಿ 3 ಸಾವಿರ ಕೋಟಿ ವೆಚ್ಚದ ವೈಟ್ ಟಾಪಿಂಗ್ ರಸ್ತೆಗಳ ನಿರ್ಮಾಣ
- ವಿದ್ಯಾರ್ಥಿ ನಿಲಯ ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಾಣ
- ಮುಂದಿನ 3 ವರ್ಷಗಳಲ್ಲಿ 127 ಜಂಕ್ಷನ್‌ಗಳ ಸೌಂದರ್ಯೀಕರಣ
- 500 ಕಿ.ಮೀ. ಉದ್ದದ ಪಾದಚಾರಿ ಮಾರ್ಗವನ್ನು ಮೇಲ್ದರ್ಜೆಗೆ, 100 ಸ್ಕೈವಾಕ್‌ಗಳ ನಿರ್ಮಾಣ
- ಅಭಿವೃದ್ಧಿ ಕಾಮಗಾರಿಗಳಿಗೆ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಒತ್ತು
- 6,939 ಕೋಟಿ ರೂ. ವೆಚ್ಚದಲ್ಲಿ ಹೆಚ್ಚುವರಿ 6 ಟಿಎಂಸಿ ನೀರು ಪೂರೈಸಲು ಕಾವೇರಿ 6ನೇ ಹಂತದ ಯೋಜನೆ
- 40 ಕಿ.ಮೀ. ಉದ್ದದ ಸುರಂಗಮಾರ್ಗವನ್ನು 40 ಸಾವಿರ ಕೋಟಿ ರೂ.ಗಳ ಮೊತ್ತದ (ಬೂಟ್) ಮಾದರಿಯಲ್ಲಿ ಕೈಗೊಳ್ಳಲು ಅನುಮೋದನೆ
- ಮೊದಲನೇ ಹಂತದಲ್ಲಿ 17 ಕಿ.ಮೀ. ಉದ್ದದ ಉತ್ತರ-ದಕ್ಷಿಣ ಕಾರಿಡಾರ್ ಯೋಜನೆಯನ್ನು 17,780 ಕೋಟಿ ರೂ. ಮೊತ್ತಕ್ಕೆ ಟೆಂಡರ್ ಕರೆಯಲಾಗುತ್ತದೆ.
- ಬೆಂಗಳೂರಲ್ಲಿ ಅತ್ಯಾಧುನಿಕ ಎಐ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸುವ ಉದ್ದೇಶದಿಂದ ನಾಸ್ಕಾಂ ಸಂಸ್ಥೆ ಸಹಭಾಗಿತ್ವದಲ್ಲಿ ಒಟ್ಟು 16 ಕೋಟಿ ರೂ. ವೆಚ್ಚದಲ್ಲಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗುವುದು.

ಉಡುಪಿ
- ಸಮಾಜದಲ್ಲಿ ಸೌಹಾರ್ದಯುತ ವಾತಾವರಣ ಕಾಯ್ದುಕೊಳ್ಳಲು ಜಿಲ್ಲೆಯಲ್ಲಿ ವಿಶೇಷ ಕಾರ್ಯಪಡೆ ನಿಯೋಜನೆ.
- ಬ್ರಹ್ಮಾವರ ತಾಲ್ಲೂಕಿನ ಶಿರಿಯಾರದಲ್ಲಿ ಹೊಳೆ ಹೂಳು ತೆರವು ಮತ್ತು ಸಂರಕ್ಷಣೆ ಕಾಮಗಾರಿ.

ಬೆಂ.ದಕ್ಷಿಣ
- ರಾಮನಗರದಲ್ಲಿ ನೂತನ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಾಣ.
- ರೇಷ್ಮೆ ಉದ್ದಿಮೆಗೆ ಉತ್ತೇಜನ ನೀಡಲು ಅತ್ಯಾಧುನಿಕ ಸಿಲ್ಕ್ ಪಾರ್ಕ್ ಸ್ಥಾಪನೆ.

ದಕ್ಷಿಣ ಕನ್ನಡ
- ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ಸಮುದ್ರ ಕೃಷಿ ಪ್ರೋತ್ಸಾಹಿಸಲು ಸೆಂಟರ್ ಆಫ್ ಎಕ್ಸ್‌ಲೆನ್ಸ್ ಸ್ಥಾಪನೆ.
- ಮಾಣಿ ಮತ್ತು ಸಜಿಪನಡು ಗ್ರಾಮಗಳಲ್ಲಿ ಭದ್ರತೆಗಾಗಿ ನೂತನ ಪೊಲೀಸ್ ಠಾಣೆಗಳ ಸ್ಥಾಪನೆ.

ಚಾಮರಾಜನಗರ
- ಹನೂರು ತಾಲೂಕಿನಲ್ಲಿ 1200 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಯೋಜನೆಗೆ 490 ಕೋಟಿ ಮೀಸಲು

ತುಮಕೂರು
- ಕ್ರೀಡಾ ಮೂಲಸೌಕರ್ಯಗಳನ್ನು ಮೂರು ಕೋಟಿ ರೂ.ಗಳ ವೆಚ್ಚದಲ್ಲಿ ಉನ್ನತೀಕರಣ.
- ಸಾರಿಗೆ ಇಲಾಖೆಯ ವತಿಯಿಂದ ಐದು ಕೋಟಿ ರೂ. ವೆಚ್ಚದಲ್ಲಿ ಸೀಜಿಂಗ್ ಯಾರ್ಡ್ ನಿರ್ಮಾಣ.

ಮೈಸೂರು
- ತಾಂಡವಪುರದಲ್ಲಿ ಸಿಲ್ಕ್ ಪಾರ್ಕ್, ಲಿಂಗಾಂಬುಧಿ ಸಸ್ಯತೋಟ ಅಭಿವೃದ್ಧಿ, ಜಯದೇವ ಆಸ್ಪತ್ರೆ ಮೇಲ್ದರ್ಜೆಗೆ, ಏರೋಸ್ಪೇಸ್ ಪಾರ್ಕ್ ಅಭಿವೃದ್ಧಿ. ನಗರದ ಲಿಂಗಾಂಬುಧಿ ಸಸ್ಯತೋಟವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು.
- ಸಿಲ್ಕ್ ಬೋರ್ಡ್: ನಂಜನಗೂಡು ತಾಲೂಕಿನ ತಾಂಡವಪುರದಲ್ಲಿ ಸಿಲ್ಕ್ ಪಾರ್ಕ್ ಸ್ಥಾಪನೆಯನ್ನು ಘೋಷಿಸಲಾಗಿದೆ.
- ಸ್ಥಳೀಯ ಮೇಕೆಗಳ ಉನ್ನತೀಕರಣಕ್ಕಾಗಿ ಮೈಸೂರಿನಲ್ಲಿ ಬಯೋಮೇಕೆ ತಳಿ ಸಂವರ್ಧನಾ ಕೇಂದ್ರ ಸ್ಥಾಪನೆ.
- ಪಿರಿಯಾಪಟ್ಟಣದಲ್ಲಿ ಬಂಡೂರು ಕುರಿ ತಳಿ ಸಂವರ್ಧನಾ ಕೇಂದ್ರ ಸ್ಥಾಪನೆ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದೆ.
- ಮೈಸೂರಿನಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಿದ್ದರಿಂದ 3 ಕಂಪನಿಗಳಲ್ಲಿ 30 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಗೆ ಆದ್ಯತೆ,

ಚಿಕ್ಕಮಗಳೂರು
- ಜಿಲ್ಲೆಯ ಪ್ರವಾಸಿ ಕೇಂದ್ರಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಮತ್ಸ್ಯದರ್ಶಿನಿಗಳ ಸ್ಥಾಪನೆ.
- ಸಾರಿಗೆ ಇಲಾಖೆಯ ವತಿಯಿಂದ ಜಿಲ್ಲೆಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಾಣ.

ಬೆಂಗಳೂರು ಗ್ರಾಮಾಂತರ
- ದೊಡ್ಡಬಳ್ಳಾಪುರದಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್ ಆರಂಭ
- ರೇಷ್ಮೆ ಅಭಿವೃದ್ಧಿಗೆ ವಿಶೇಷ ಅನುದಾನ ಬಿಡುಗಡೆ

ಕೊಡಗು
- ಸೋಮವಾರ ಪೇಟೆ ತಾಲೂಕಿನ ಐಗೂರು-ಅರೆಯೂರಿನಲ್ಲಿ ನಾಲೆ ಹಾಗೂ ತಡೆಗೋಡೆ ಅಭಿವೃದ್ಧಿಗೆ ವಿರಾಜಪೇಟೆ ತಾಲೂಕು ಭಾಗದಲ್ಲಿ ತೋಡಿಗೆ ತಡೆಗೋಡೆ ನಿರ್ಮಾಣ.

ಮಂಡ್ಯ
- ಶ್ರೀರಂಗಪಟ್ಟಣ ವ್ಯಾಪ್ತಿಯ ಸಿಡಿಎಸ್ ನಾಲೆಗಳ ಅಭಿವೃದ್ಧಿ, ಕಬಿನಿ ಎಡದಂಡೆನಾಲೆ ಅಭಿವೃದ್ಧಿ, ಹೇಮಾವತಿ ನದಿಯಿಂದ ನಾಗಮಂಗಲ, ಚನ್ನರಾಯಪಟ್ಟಣ ತಾಲೂಕುಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆ.

ಕಿರುಸುದ್ದಿ

ಬೆಂ.ಗ್ರಾ.ಜನರಲ್ಲಿ ನಿರಾಸೆ

ವಿಜಯಪುರ: ರಾಜ್ಯ ಸರ್ಕಾರ ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿ ಯೋಜನೆಗಳ ಪ್ರಸ್ತಾಪ ಇಲ್ಲದಿರುವುದು ಜನತೆಯಲ್ಲಿ ನಿರಾಸೆ ಮೂಡಿಸಿದೆ. ಕೃಷಿ, ನೀರಾವರಿ, ರೇಷ್ಮೆ, ತೋಟಗಾರಿಕೆ, ಪ್ರವಾಸೋದ್ಯಮ ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಜಿಲ್ಲೆಯನ್ನು ಪರಿಗಣಿಸದಿರುವುದು ಜಿಲ್ಲೆಗೆ ಸಿಕ್ಕಿದ ಯೋಜನೆಗಳು ಬರೀ ಶೂನ್ಯವಾಗಿದೆ. ಜಿಲ್ಲೆಯ ಬಹು ಬೇಡಿಕೆಗಳಾದ ಜಿಲ್ಲೆಯ ಕೆರೆಗಳಿಗೆ ಪ್ರಸ್ತುತ ಹರಿಸುತ್ತಿರುವ ಎಚ್.ಎನ್ ವ್ಯಾಲಿ ಯೋಜನೆಯ ಮೂರನೇ ಹಂತದ ಶುದ್ಧೀಕರಣ, ಎತ್ತಿನಹೊಳೆ ಯೋಜನೆ, ವಿಜಯಪುರ ತಾಲೂಕು ಕೇಂದ್ರ ಘೋಷಣೆ, ಮೆಟ್ರೊ ವಿಸ್ತರಣೆ, ಕ್ರೀಡಾಂಗಣ, ಕೃಷಿಕರಿಗೆ ಮಾರುಕಟ್ಟೆ ವ್ಯವಸ್ಥೆ, ವಿಜಯಪುರದಲ್ಲಿ ಕೆಎಸ್ ಆರ್‌ಟಿಸಿ ಡಿಪೋ ಕಾಮಗಾರಿಗೆ ಅಗತ್ಯ ಅನುದಾನ ಸೇರಿದಂತೆ ಹಲವು ಯೋಜನೆಗಳ ಕುರಿತು ರಾಜ್ಯ ಬಜೆಟ್‌ನಲ್ಲಿ ಪ್ರಸ್ತಾಪ ಇಲ್ಲವಾಗಿದೆ. ಕಳೆದ ಸಾಲಿನ ರಾಜ್ಯ ಬಜೆಟ್ನಜಲ್ಲಿ ದೇವನಹಳ್ಳಿಯಲ್ಲಿ ಬೆಂಗಳೂರು ಸಿಗ್ನೇಚರ್ ಬಿಸಿನೆಸ್ ಪಾರ್ಕ್ ಘೋಷಿಸಲಾಗಿತ್ತು. ಆದರೆ, ಈ ಬಾರಿ ಯಾವುದೇ ಹೊಸ ಯೋಜನೆಗಳನ್ನು ನೀಡಿಲ್ಲ. ಪ್ರಸ್ತುತ ದೇವನಹಳ್ಳಿ ಕ್ಷೇತ್ರದ ಶಾಸಕರಾದ ಕೆ.ಎಚ್.ಮುನಿಯಪ್ಪ ಅವರೇ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಜಿಲ್ಲಾ ಉಸ್ತುವಾರಿಸಚಿವರೆ ಆದರೂ ನಿರೀಕ್ಷಿತ ಮಟ್ಟದಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಹೊಸ ಯೋಜನೆಯಾಗಲಿ, ಹೆಚ್ಚಿನ ಅನುದಾನ ಘೋಷಣೆಯಾಗದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

ಉನ್ನತ ಶಿಕ್ಷಣ ಸಂಸ್ಥೆಗಳ ಪಾತ್ರ ಅಪಾರ

ಆನೇಕಲ್: ಆಧುನಿಕ ಜಗತ್ತಿನಲ್ಲಿ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಜವಾಬ್ದಾರಿ ಉನ್ನತ ಶಿಕ್ಷಣ ಸಂಸ್ಥೆಗಳ ಮೇಲಿದೆ ಎಂದು ಉಪಕುಲಪತಿ ಡಾ.ಪ್ರಿಯೆಸ್ಲಿ ಬಿ.ಶಾನ್ ತಿಳಿಸಿದರು. ತಾಲ್ಲೂಕಿನ ಅಲಯನ್ಸ್ ವಿಶ್ವವಿದ್ಯಾಲಯದಿಂದ 'ಇಂಡಸ್ಟ್ರಿ ಲೀಡರ್ಸ್ ಅಲಯನ್ಸ್ 2026' ಮತ್ತು 'ಅಲಯನ್ಸ್ ಎಚ್.ಆರ್. ಕಾನ್ಕ್ಲೇವ್ 2026' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಇವತ್ತಿನ ಕೃತಕ ಬುದ್ಧಿಮತ್ತೆ ಯುಗದಲ್ಲಿ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯೆಂದು ತಿಳಿಸಿದರು. ಕರ್ನಾಟಕ ಕೌಶಲ ಅಭಿವೃದ್ಧಿ ಪ್ರಾಽಕಾರದ ಅಧ್ಯಕ್ಷ ನಿವೃತ್ತ ಐಎಎಸ್ ಅಽಕಾರಿ ಡಾ.ರಮಣರೆಡ್ಡಿ ಮಾತನಾಡಿ, ಕೌಶಲಾಭಿವೃದ್ಧಿ ಯೋಜನೆಗಳ ಅಗತ್ಯತೆ ಮತ್ತು ಶಿಕ್ಷಣವನ್ನು ಉದ್ಯಮದ ಅಗತ್ಯಗಳಿಗೆ ಹೊಂದಾಣಿಕೆ ಮಾಡುವ ಮಹತ್ವವನ್ನು ವಿವರಿಸಿದರು. ಸಿಐಐ ಕರ್ನಾಟಕ ರಾಜ್ಯ ಅಧ್ಯಕ್ಷ ರಬೀಂದ್ರ ಶ್ರೀಕಾಂತನ್, ನಾಸ್ಕಾಂ ಕರ್ನಾಟಕ ಜಿಸಿಸಿ ಕೌನ್ಸಿಲ್ ಸದಸ್ಯೆ ಶಾಲಿನಿ, ಅಲಯನ್ಸ್ ವಿಶ್ವವಿದ್ಯಾಲಯದ ಚಾನ್ಸಲರ್ ಅಭಯ್ ಜಿ. ಚೆಬ್ಬಿ ಮತ್ತಿತರರಿದ್ದರು.

ಒಳ ಮೀಸಲು ಜಾರಿಗೊಳಿಸಲು ಆಗ್ರಹ

ದೇವನಹಳ್ಳಿ: ಸರ್ಕಾರ ಮೀಸಲಾತಿಯನ್ನು ಶೇ.56ಕ್ಕೇರಿಸಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿಗಳಿಸಬೇಕೆಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಮಾದಿಗ ದಂಡೋರಾ ಅಧ್ಯಕ್ಷ ಮಾರಪ್ಪ ತಿಳಿಸಿದರು. ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ಡಾ. ಬಾಬು ಜಗಜೀವನ್‌ರಾಮ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿ ನಂತರ ತಹಶೀಲ್ದಾರ್ (ಗ್ರೇಡ್2) ಜಯಕುಮಾರ್‌ಗೆ ಮನವಿ ನೀಡಿ ಮಾತನಾಡಿ, ಒಳಮೀಸಲಾತಿ ಜಾರಿಗೆ ರಾಜ್ಯ ಪಾಲರ ಅಂಕಿತ ದೊರೆತರೂ, ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನ ಹಿನ್ನೆಲೆಯಲ್ಲಿ ಮೀಸಲಾತಿ ಶೇ. 50 ಮೀರುವಂತಿಲ್ಲ ಎಂದು ನೀಡಿದ ತೀರ್ಪಿನ ಪ್ರಕಾರ ಒಳಮೀಸಲಾತಿ ಸಂಬಂಧ ರಾಜ್ಯ ಸರ್ಕಾರ ಆದೇಶ ಅಳವಡಿಸದೆ ನೇಮಕಾತಿ ಮಾಡಲು ಸೂಚಿಸಿರುವುದು ಮಾದಿಗ ಸಮುದಾಯದ ದೀರ್ಘ 35 ವರ್ಷದ ಹೋರಾಟಕ್ಕೆ ಮಾಡಿದ ಅನ್ಯಾಯವಾಗಿದೆ ಎಂದರು. ಸಿದ್ದರಾಮಯ್ಯ ಬಲಗೈ ಬಂಟರಾದ ಸಚಿವ ಮಹದೇವಪ್ಪನವರ ಕುಮ್ಮಕ್ಕಿನಿಂದ ಸಿಎಂ ಶೇ.15 ಒಳ ಮೀಸಲಾತಿಯನ್ನು ಗ್ರೂಪ್ ಎಬಿ ಸಿ ವರ್ಗೀಕರಣದಂತೆ ಜಾರಿಗೊಳಿಸಲು, ತಕ್ಷಣ ತಿದ್ದುಪಡಿ ಮಾಡಲು , ಶೇ.56 ಮೀಸಲಾತಿಯನ್ನು ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸಲು ಒತ್ತಾಯ ಮಾಡುತ್ತಿದ್ದೇವೆ ಎಂದರು.

ದೊಡ್ಡಬಳ್ಳಾಪುರದಲ್ಲಿ ಸಂಚಾರಿ ಪೊಲೀಸ್ ಠಾಣೆ | ಪ್ಯಾರಾ ಮೆಡಿಕಲ್ ಕೋರ್ಸ್ | ಸೈನ್ಸ್ ಸಿಟಿ ನಿರ್ಮಾಣ

ಬೆಂ.ಗ್ರಾ.ಜಿಲ್ಲೆ ಅಭಿವೃದ್ಧಿಗೆ ಮುನ್ನುಡಿ

ದೊಡ್ಡಬಳ್ಳಾಪುರ: ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಯಾವುದೇ ಶಾಶ್ವತ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳು ಘೋಷಣೆಯಾಗಿಲ್ಲ.

ಈಗ ಘೋಷಣೆಯಾಗಿರುವುದರಲ್ಲಿ ದೇವನಹಳ್ಳಿ ತಾಲೂಕಿನ ಹಲವು ಗ್ರಾಮಗಳಲ್ಲಿ ಚೆಕ್ ಡ್ಯಾಂಗಳ ನಿರ್ಮಾಣ, ದೇವನಹಳ್ಳಿ ತಾಲೂಕಿನ ಕಾರಹಳ್ಳಿ ಕೆರೆ ಅಭಿವೃದ್ಧಿ, ದೊಡ್ಡಬಳ್ಳಾಪುರ ತಾಲೂಕಿನ ಆದಿನಾರಾಯಣ ಹೊಸಹಳ್ಳಿಯಲ್ಲಿ ವಿಜ್ಞಾನ ನಗರ ನಿರ್ಮಾಣಕ್ಕೆ 233 ಕೋಟಿ ರೂ. ವೆಚ್ಚದ ವರದಿ ಕೇಂದ್ರಕ್ಕೆ ಸಲ್ಲಿಕೆ.

ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ಒಳಚರಂಡಿ ಅಭಿವೃದ್ಧಿ, ದೊಡ್ಡಬಳ್ಳಾಪುರದಲ್ಲಿ ಪ್ಯಾರಮೆಡಿಕಲ್ ಕೋರ್ಸ್ ತರಗತಿಗಳ ಪ್ರಾರಂಭ. ದೊಡ್ಡಬಳ್ಳಾಪುರದಲ್ಲಿ ಸಂಚಾರಿ ಪೊಲೀಸ್ ಠಾಣೆ ಪ್ರಾರಂಭ.

ಬೆಂಗಳೂರು ನಗರದ ವೃಷಭಾವತಿ ವ್ಯಾಲಿಯಿಂದ 2ನೇ ಹಂತದಲ್ಲಿ ಸಂಸ್ಕರಿಸಿದ 308 ಎಂಎಲ್‌ಡಿ ನೀರಿನಿಂದ 259 ಕೆರೆಯನ್ನು ತುಂಬಿಸುವ ಮೂಲ ಯೋಜನೆಯಾಗಿದೆ. ಈ ಪೈಕಿ ಗೋಪಾಲಪುರ ಕೆರೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲೂಕಿನ 119 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಗೆ 650 ಕೋಟಿ ರೂ. ಮೀಸಲಿಡಲಾಗಿದೆ.

ಹೊಸಕೋಟೆ ತಾಲೂಕಿನ ಸೂಲಿಬೆಲೆ ಮತ್ತು ನಂದಗುಡಿ ಹೋಬಳಿಗಳ 59 ಕೆರೆಗಳಿಗೆ ಎಚ್.ಎನ್. ವ್ಯಾಲಿ ಯೋಜನೆಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ತುಂಬಿಸುವ ಕಾಮಗಾರಿಗೆ 140 ಕೋಟಿ ರೂ. ಮೀಸಲಿಡಲಾಗಿದೆ

ಒಟ್ಟಾರೆ, ರಾಜಧಾನಿ ಸಮೀಪದಲ್ಲಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ನೀರಾವರಿ, ಶಿಕ್ಷಣ, ಆರೋಗ್ಯ, ಕೈಗಾರಿಕೆಗೆ ಸಂಬಂಧಿಸಿದಂತೆ ಇತರೆ ಯಾವುದೇ ಶಾಶ್ವತ ಯೋಜನೆಗಳು ಘೋಷಣೆಯಾಗಿಲ್ಲ ಎಂಬುದು ನಾಗರಿಕರ ಅಸಮಾಧಾನಕ್ಕೆ ಕಾರಣವಾಗಿದೆ.



ಪೊಳ್ಳು ಭರವಸೆಯ ಬಜೆಟ್



ಮೂರನೇ ಹಂತ ಶುದ್ಧೀಕರಣ ಘಟಕ ಕ್ಕೆ ಹಲವಾರು ವರ್ಷದಿಂದ ಹೋರಾಟ ಮಾಡಿದ್ದರೂ ಎರಡನೇ ಹಂತದ ಶುದ್ಧೀಕರಣ ಘಟಕಕ್ಕೆ ಬಜೆಟ್‌ನಲ್ಲಿ ಚಾಲನೆ ನೀಡಲಾಗುವುದು ಎಂದು ಹೇಳಲಾಗಿದೆ. ಮಡಿಕಲ್ ಕಾಲೇಜು ಸೇರಿದಂತೆ ಯಾವುದೇ ಅಭಿವೃದ್ಧಿ ಯೋಜನೆ ಘೋಷಣೆ ಮಾಡಿಲ್ಲ.ಜನರ ಪಾಲಿಗೆ ಇದು ಪೊಳ್ಳು ಭರವಸೆ ಬಜೆಟ್ ಆಗಿದೆ ಎಂದು ಜೆಡಿಎಸ ಮುಖಂಡ ಪ್ರವೀಣ್ ಕುಮಾರ್ ಟೀಕಿಸಿದರು.

ಉತ್ತಮ ಬಜೆಟ್



ಕಾಂಗ್ರೆಸ್ ಸರ್ಕಾರದ ಬಜೆಟ್ ಈ ಬಾರಿ ಮಹಿಳೆಯರಿಗೆ ಹೆಚ್ಚಿನ ಅನುದಾನ ನೀಡಿದೆ. ಶಿಕ್ಷಣ ಆರೋಗ್ಯಕ್ಕೆ ಒತ್ತು ನೀಡಿದೆ. ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ಒಳಚರಂಡಿ ಅಭಿವೃದ್ಧಿ, ಪ್ಯಾರಮೆಡಿಕಲ್ ಕೋರ್ಸ್, ಸಂಚಾರಿ ಪೊಲೀಸ್ ಠಾಣೆ ಘೋಷಣೆ ಮಾಡಲಾಗಿದೆ. ಸಿಎಂ ಸಿದ್ದರಾಮಯ್ಯ ಅವರು ರಾಜ್ಯದ ಹಿತದೃಷ್ಟಿ ಇಟ್ಟುಕೊಂಡು ಉತ್ತಮ ಬಜೆಟ್ ಮಂಡಿಸಿದ್ದಾರೆಂದು ಕಾಂಗ್ರೆಸ್ ಮುಖಂಡ ಹರಿಕುಮಾರ್ ಹೇಳಿದರು.

ಶೂನ್ಯ ಬಜೆಟ್



ಇಂದಿನ ರಾಜ್ಯ ಸರ್ಕಾರದ ಬಜೆಟ್ ನಿರಾಶದಾಯಕವಾಗಿದೆ. ಯಾವುದೇ ಹೊಸ ಯೋಜನೆ ಘೋಷಣೆ ಮಾಡಿಲ್ಲ. ಅಭಿವೃದ್ಧಿ ಯೋಜನೆಗಳಿಗೆ ಅನುದಾನ ನೀಡಿಲ್ಲ. ಕೇವಲ ಸಾಲದ ಬಜೆಟ್, ಜನರ ಮೇಲಿನ ತೆರಿಗೆ ಬಜೆಟ್ ಇದಾಗಿದೆ. ಒಟ್ಟಾರೆ, ಸಿ ಎಂ ಸಿದ್ದರಾಮಯ್ಯ ಅವರ 17ನೇ ಬಜೆಟ್ ಕರ್ನಾಟಕದ ಜನರಿಗೆ ಶೂನ್ಯವಾಗಿದೆ ಎಂದು ಬಿಜೆಪಿ ರಾಜ್ಯ ಯುವ ಮೋಚಾ ಅಧ್ಯಕ್ಷ, ಶಾಸಕ ಧೀರಜ್ ಮುನಿರಾಜ್ ಟೀಕಿಸಿದರು.

ಸಮಾಜ ಸೇವೆಗೆ ಹುಟ್ಟುಹಬ್ಬ ಪ್ರೇರಣೆ



ತಾವರೆಕೆರೆ: ತಾಲೂಕಿನ ದಿವಂಗತ ಮಾಜಿ ಸಚಿವ ಚಿಕ್ಕೇಗೌಡರ ಮೊಮ್ಮಗ ಮಾಜಿ ಯುವ ಕಾಂಗ್ರೆಸ್ ಅಧ್ಯಕ್ಷ ಯೋಜನಾ ಪ್ರಾಽಕಾರದ ಮಾಜಿ ಅಧ್ಯಕ್ಷರು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಆಪ್ತ ದೊಡ್ಡಗಟ್ಟಿಗನಬ್ಬಿಯ ನಾರಾಯಣಗೌಡ ನಾಣಿ ಅವರ ಹುಟ್ಟು ಹಬ್ಬವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಹಲವಾರು ರಾಜಕೀಯ ಮುಖಮಡರು ಶುಭ ಹಾರೈಸಿದರು. ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಜೆ. ಬಚ್ಚೇಗೌಡ ಮಾತನಾಡಿ , ಕಾಂಗ್ರೆಸ್‌ನಲ್ಲಿ ನಿಷ್ಠಾವಂತ ಕಾರ್ಯಕರ್ತನಾಗಿ ಬೆಳೆದು ಹಲವಾರು ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದ ನಾರಾಯಣಗೌಡರಿಗೆ ಮುಂದಿನ ದಿನದಲ್ಲಿ ರಾಜಕೀಯವಾಗಿ ಎತ್ತರಕ್ಕೆ ಬೆಳೆಯಲಿ ಎಂದು ಹೇಳಿದರು. ಕೆಪಿಸಿಸಿ ಮಾಜಿ ಸದಸ್ಯ ಖಾಜಿಹೊಸಹಳ್ಳಿ ಶಿವಕುಮಾರ್, ಹರಳೂರು ರವಿ, ಕೊರಳೂರು ಸುರೇಶ್, ಕೊಳತೂರು ವೆಂಕಟೇಗೌಡ, ಆಂಜಿನಪ್ಪ, ರಘು, ಯೇಸುಕೃಷ್ಣ, ಗೋಪಾಲಕೃಷ್ಣ, ವರದರಾಜು, ರವಿ, ಸುನೀಲ್ ಸೇರಿದಂತೆ ಅಭಿಮಾನಿಗಳಿದ್ದರು.

ಗಂಗಾಕಲ್ಯಾಣ ಯೋಜನೆ ಸದ್ಬಳಕೆಯಾಗಲಿ

ಸೂಲಿಬೆಲೆ: ಸರ್ಕಾರಿ ಜಾರಿ ಮಾಡಿರುವ ಗಂಗ ಕಲ್ಯಾಣ ಯೋಜನೆಯು ಬಡ ರೈತಾಪಿ ವರ್ಗಕ್ಕೆ ಅನುಕೂಲವಾಗಲಿದೆ ಎಂದರು ಬಮೂಲ್ ನಿರ್ದೇಶಕ ಬಿ.ವಿ.ಸತೀಶಗೌಡ ಹೇಳಿದರು

ಇಲ್ಲಿನ ಬೆಂಡಿಗಾನಹಳ್ಳಿ ಮಾತನಾಡಿದ ಅವರು ಭೀಮಕನಹಳ್ಳಿಯ ರಾಧಮ್ಮ ಅವರ ಜಮೀನಿನಲ್ಲಿ ಗಂಗಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿ ಕೊರಸಲಾಗಿದೆ. ಇದರಿಂದ ಅವರ ಜೀವನ ಸುಧಾರಣೆ ಕಾಣಲಿದೆ ಎಂದರು. ಶಾಸಕ ಶರತ್ ಬಚ್ಚೇಗೌಡರ ಶಿಫಾರಸ್ಸಿನ ಮೇರೆಗೆ ಯೋಜನೆ ಅನುಷ್ಠಾನ ಮಾಡಲಾಗಿದೆ. ಅರ್ಹ ಫಲಾನುಭವಿಗೆ ಯೋಜನೆ ತಲುಪಿದೆ ಎರಡು ಇಂಚು ನೀರು ದೊರೆತಿರುವುದು ಹರ್ಷದ ವಿಚಾರ ಎಂದರು. ಯುವ ಮುಖಂಡ ವಿಜಯಕುಮಾರ್, ತಾಪಂ ಮಾಜಿ ಉಪಾಧ್ಯಕ್ಷ ರಾಮೇಗೌಡ, ಮಧು,ನಾಗೇಶ್, ರಾಮಯ್ಯ, ಸುಬ್ರಮಣಿ, ರಾಧಮ್ಮ ಇತರರು ಇದ್ದರು.



ಮಾ.9ರಂದು ನೇತ್ರ ತಪಾಸಣಾ ಶಿಬಿರ

ಸೂಲಿಬೆಲೆ: ಇಲ್ಲಿನ ಜೇನುಗೂಡು ರೂರಲ್ ಡೆವಲಪ್‌ಮೆಂಟ್ ಅಂಡ್ ಕಲ್ಚರಲ್ ಟ್ರಸ್ಟ್ ಹಾಗೂ ಶಂಕರ ಕಣ್ಣಿನ ಅಸ್ಪತ್ರೆ ಇವರ ಸಹಯೋಗದಲ್ಲಿ ಬಮುಲ್ ನಿರ್ದೇಶಕ ಬಿ.ವಿ.ಸತೀಶಗೌಡರ ಸಹಕಾರದಲ್ಲಿ ಮಾ.9ರಂದು ಸೋಮುವಾರ ಸೂಲಿಬೆಲೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅವರಣದಲ್ಲಿ ನೇತ್ರ ತಪಾಸಣೆ ಹಾಗೂ ಚಿಕಿತ್ಸಾ ಉಚಿತ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟಿನ ಉಪಾಧ್ಯಕ್ಷ ಕೆ.ಎಂ.ಚೌಡೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಉಚಿತ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸೆ ಜೊತೆಯಲ್ಲಿ ಉಚಿತ ಕನ್ನಡಕ ವಿತರಣೆ ಮಾಡಲಾಗುತ್ತದೆ. ಶಿಬಿರದಲ್ಲಿ ಪಾಲ್ಗೊಳ್ಳುವವರು ಆಧಾರ್ ಕಾರ್ಡ ಕಡ್ಡಾಯವಾಗಿ ತರಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಮೊ.6361563255, 9066090777 ಸಂಪರ್ಕಿಸಲು ಕೋರಲಾಗಿದೆ.

ಮಾ.14ರಂದು ಪೌರಾಣಿಕ ನಾಟಕ ಪ್ರದರ್ಶನ



ತಾವರೆಕೆರೆ: ಹೊಸಕೋಟೆ ತಾಲೂಕಿನ ಚಿಕ್ಕನಲ್ಲಾಲ ಗ್ರಾಮದ ಶ್ರೀ ವೇಣುಗೋಪಾಲಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ಯಿಂದ ಮಾ.14ರ ಶನಿವಾರ ಸಾಮ್ರಾಟ್ ಸುಯೋಧನ ಎಂಬ ಪೌರಾಣಿಕ ನಾಟಕವನ್ನು ಗ್ರಾಮದಲ್ಲಿ ಪ್ರದರ್ಶನ ಮಾಡಲಾಗುವುದು ಎಂದು ನಾಟಕದ ಆಯೋಜಕರು ಹಾಗೂ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ತಿಮ್ಮರಾಯಪ್ಪ ತಿಳಿಸಿದರು.

ಗ್ರಾಮದ ಬಾಬು ಜಗಜೀವನರಾವ್ ಸಮುದಾಯ ಭವನದಲ್ಲಿ ಕರಪತ್ರ ಬಿಡುಗಡೆ ಬಳಿಕ ಮಾತನಾಡಿ, ಗ್ರಾಮದಲ್ಲಿ ಸುಮಾರು 40 ವರ್ಷದಿಂದ ಪೌರಾಣಿಕ ನಾಟಕ ಪ್ರದರ್ಶನ ಮಾಡಿಕೊಂಡು ಬರಲಾಗುತ್ತಿದೆ. ಟಿ.ವಿ.ರಾಮಸ್ವಾಮಿ ಅವರ ನಿರ್ದೇಶನದಲ್ಲಿ ಇದು ಐದನೇ ಬಾರಿ ನಾಟಕ ಪ್ರದರ್ಶನಗೊಳ್ಳಲಿದೆಂದರು. ಸಂಗೀತ ಹಾಗೂ ನಿರ್ದೇಶಕರಾದ ಟಿ.ವಿ.ರಾಮಸ್ವಾಮಿ, ಮುಖಂಡರಾದ ಅಶ್ವಥ್, ನಾಗರಾಜ್, ಭೀಮಣ್ಣ, ನಾರಾಯಣಸ್ವಾಮಿ, ವೆಂಕಟೇಶ್, ಮನೋಹರ್, ಶಶಿ , ಗಜೇಂದ್ರ, ಆಂಜಿನಪ್ಪ ,ಚೇತನ್, ಮರಿಯಪ್ಪ, ನರಸಿಂಹಯ್ಯ, ಮುನಿಸ್ವಾಮಿ, ಗಿರೀಶ್, ಕೃಷ್ಣಪ್ಪ, ರಾಮಚಂದ್ರ, ರಾಮಮೂರ್ತಿ, ಚನ್ನಕೇಶವ, ಪುನೀತ್, ಮುನಿವೆಂಕಟಪ್ಪ ಹಾಗೂ ಗ್ರಾಮಸ್ಥರಿದ್ದರು.

ನೆಲಮಂಗಲಕ್ಕೆ ಒಳಚರಂಡಿ ವ್ಯವಸ್ಥೆ

ನೆಲಮಂಗಲ: ರಾಜ್ಯ ಬಜೆಟ್‌ನಲ್ಲಿ ನೆಲಮಂಗಲ ನಗರಕ್ಕೆ ಒಳಚರಂಡಿ ಕಾಮಗಾರಿ ಘೋಷಣೆ ಮಾಡುವ ಮೂಲಕ 83ವರ್ಷಗಳ ಸಮಸ್ಯೆಗೆ ಮುಕ್ತಿ ನೀಡು ವ ಕೆಲಸವನ್ನು ಕಾಂಗ್ರೆಸ್ ನೇತೃತ್ವದ ಸರಕಾರ ಮಾಡಿದ್ದು ಶಾಸಕ ಎನ್.ಶ್ರೀನಿವಾಸ್ ಅವರಿಗೆ ನಗರದ ಜನತೆ ಅಭಿನಂದಿಸಿದರು.

ಬೆಂಗಳೂರಿಗೆ ಸಮೀಪವಿದ್ದ ನೆಲಮಂಗಲ ನಗರ 1943ರಲ್ಲಿ ಪುರಸಭೆ ಆಗಿ ಜಾರಿಗೆ ಬಂತು, ಆ ಸಮಯದಲ್ಲಿಯೇ ಒಳಚರಂಡಿಯ ಕೂಗು ಬಂದರೂ ಯಾವುದೇ ಪ್ರಯೋಜನವಾಗಲಿಲ್ಲ.1986ರಲ್ಲಿ ಪುರಸಭೆ ಮಂಡಲ ಪಂಚಾಯಿತಿಯಾಗಿ ಬದಲಾಗಿದ್ದು, 1996ರಲ್ಲಿ ಮಂಡಲ ಪಂಚಾಯಿತಿ ಪಟ್ಟಣ ಪಂಚಾಯಿತಿಯಾಗಿ ಬದಲಾಗುತ್ತದೆ.

ಅನಂತರ ಜನಸಂಖ್ಯೆ ಆಧಾರದಲ್ಲಿ 2007-08ರಲ್ಲಿ ಮತ್ತೆ ಪುರಸಭೆಯಾದರೂ ಒಳಚರಂಡಿ ಸಮಸ್ಯೆ, ಸಮಸ್ಯೆ ಯಾಗಿಯೇ ಉಳಿಯಿತು. 2019ರಲ್ಲಿ ಪುರಸಭೆ ನಗರಸಭೆ ಯಾಗಿ ಮೇಲ್ದರ್ಜೆಗೇರಿದರು ಒಳಚರಂಡಿ ಕನಸು ನನಸಾಗಲಿಲ್ಲ. 83 ವರ್ಷದಿಂದ ಪ್ರತಿ ಚುನಾವಣೆಯಲ್ಲಿ ಯೂ ನಗರಕ್ಕೆ ಒಳಚರಂಡಿ ಜಾರಿಗೊಳಿಸುವ ಘೋಷಣೆ ಮೊದಲ ಪಟ್ಟಿಯಲ್ಲಿದ್ದರು ಜನರಿಗೆ ಭರವಸೆಯೇ ಇಲ್ಲದಂತಾಯಿತು. ಆದರೆ 2026ರ ಬಜೆಟ್‌ನಲ್ಲಿ 127ನೇ ಪುಟದ310ನೇಅಂಶದಲ್ಲಿಮುಖ್ಯಮಂತ್ರಿಸಿದ್ದರಾಮಯ್ಯ ನವರು ನೆಲಮಂಗಲ ನಗರಸಭೆಗೆ ಒಳಚರಂಡಿ ಘೋಷಣೆ ಮಾಡಿ ಅಧಿಕ ಅನುದಾನ ನೀಡಿರುವುದು ಐತಿಹಾಸಿಕ ದಾಖಲೆ ಎನ್ನುತ್ತಿದ್ದಾರೆ ನಗರದ ಜನರು.

ಅನಿವಾರ್ಯವಾಗಿದ್ದ ಯೋಜನೆ: ನೆಲಮಂಗಲ ನಗರ ವಿಸ್ತಾರವಾಗಿ ಬೆಳೆದಿದ್ದು 1.20ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಯನ್ನು ಹೊಂದಿದೆ. ಬೆಂಗಳೂರು ಸಮೀಪದ ನೆಲಮಂಗಲ ನಗರದ ಒಳಚರಂಡಿ ನೀರು ಪಿಟ್‌ಗಳಿಗೆ ಹೋಗುವ ಜತೆ ಚರಂಡಿಗಳ ಮೂಲಕ ಕೆರೆಗಳಿಗೆ ಸೇರುತ್ತಿರುವುದು ಹೆಚ್ಚಾಗಿದೆ.ರಾಜಕಾಲುವೆಗಳು, ನಗರದ ಅಮಾನಿಕೆರೆ, ಬಿನ್ನಮಂಗಲ ಕೆರೆಗಳು ಒಳಚರಂಡಿ ನೀರಿನಿಂದಲೇ ತುಂಬಿದ್ದು ಒಳಚರಂಡಿ ಯೋಜನೆ ನಗರಕ್ಕೆ ತುಂಬ ಅನಿವಾರ್ಯವಾಗಿತ್ತು.

ನೆಲಮಂಗಲ ನಗರಕ್ಕೆ ಒಳಚರಂಡಿ ಮಾಡಲು ಹಿಂದಿನ ಅನೇಕ ಜನಪ್ರತಿನಿಧಿಗಳು, ಮಾಜಿ ಶಾಸಕರು ಹೋರಾಟ ಮಾಡಿದರು. ಯಾವುದೇ ಪ್ರಯೋಜನವಾಗಿರಲಿಲ್ಲ, ಆದರೆ ಶಾಸಕ ಎನ್.ಶ್ರೀನಿವಾಸ್ ನಿರಂತರ ಹೋರಾಟ, ಪರಿಶ್ರಮ, ಸಿಎಂ, ಡಿಸಿಎಂ ಹಾಗೂ ಸಚಿವ ಬೈರತಿ ಸುರೇಶ್‌ರವರನ್ನು ಹತ್ತಾರು ಭಾರಿ ಭೇಟಿ ಮಾಡಿ ಒತ್ತಾಯ ಮಾಡುವ ಜತೆ ವಿವಿಧ ಇಲಾಖೆ ಸಚಿವರ ಕಡೆಯಿಂದ ಸಿಎಂಗೆ ಮನವಿ ಮಾಡಿಸುವ ಮೂಲಕ ಈ ಬಜೆಟ್‌ನಲ್ಲಿ ಒಳಚರಂಡಿ ಯೋಜನೆ ಘೋಷಣೆ ಮಾಡಿಸಿದ್ದು 275ರಿಂದ 350 ಕೋಟಿ ಅನುದಾನವನ್ನು ಮೊದಲ ಹಂತದಲ್ಲಿ ನೀಡುವ ವಿಶ್ವಾಸವಿದೆ ಎಂದು ಶಾಸಕ ಎನ್.ಶ್ರೀನಿವಾಸ್ ಮಾಹಿತಿ ನೀಡಿದ್ದಾರೆ.

ನೀರಿನ ಸಮಸ್ಯೆಗೂ ಮುಕ್ತಿ: ನಗರಕ್ಕೆ ಕುಡಿಯಲು ನೀರಿಲ್ಲ, ಒಳಚರಂಡಿಗೆ ನೀರು ಎಲ್ಲಿ ತರುವುದು ಎಂಬ ಚಿಂತೆ ಸಾಮಾನ್ಯವಾಗಿಯೇ ಇತ್ತು ಆದರೆ ಕಾವೇರಿ ಯೋಜನೆಯ ಮೂಲಕ 6ನೇ ಹಂತದಲ್ಲಿ ನಗರಕ್ಕೆ ಅರ್ಧ ಟಿಎಂಸಿ ನೀರು ಘೋಷಣೆಯಾಗಿರುವ ಪರಿಣಾಮ ಕುಡಿಯುವ ನೀರಿಗೆ ಹಾಗೂ ಒಳಚರಂಡಿ ನಿರ್ವಹಣೆ ನೀರಿಗೂ ಸಮಸ್ಯೆ ಇಲ್ಲದಂತಾಗಿದೆ.



1996ರಿಂದ ಚುನಾವಣೆ ಎದುರಿಸಿದ್ದು ಅಂದಿನಿಂದ ಒಳಚರಂಡಿ ಭರವಸೆಯನ್ನು ಮಾತ್ರ ಕೇಳಿದ್ದೇನು. ಶಾಸಕರ ನಿರಂತರ ಪರಿಶ್ರಮ,ಹೋರಾಟ, ಬದ್ಧತೆ, ಮಾಡಲೇ ಬೇಕು ಎಂಬ ಸಂಕಲ್ಪದಿಂದ ಇಂದು ಸಹಕಾರವಾಗಿದ್ದು ಶಾಸಕ ಎನ್.ಶ್ರೀನಿವಾಸ್ ರವರಿಗೆ ಅಭಿನಂದನೆ ಸಲ್ಲಿಸುತ್ತೇವೆ.

■ ಕೆ.ಕೃಷ್ಣಪ್ಪ, ಹಿರಿಯ ಮುಖಂಡ ನೆಲಮಂಗಲ

ಪತ್ರಕರ್ತರ ಕ್ರೀಡಾಕೂಟಕ್ಕೆ ಚಾಲನೆ

ದೇವನಹಳ್ಳಿ: ಪಟ್ಟಣದ ವೇಣುಗೋಪಾಲಸ್ವಾಮಿ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಆಶ್ರಯದಲ್ಲಿ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿತ್ತು.

ನಂತರ ಜೂನಿಯರ್ ಕಾಲೇಜು ಮೈದಾನದಲ್ಲಿ ಗುಂಡು ಎಸೆತ ಮತ್ತು ಲೆಮನ್ ಸ್ಪೂನ್ ಓಟವನ್ನು ಹಾಗೂ ಸಂಘದ ಕಚೇರಿಯಲ್ಲಿ ಕೇರಂ ಆಟಗಳನ್ನು ಆಡಿಸಲಾಯಿತು. ಜಿಲ್ಲಾಧ್ಯಕ್ಷ ಜಿ.ಶ್ರೀನಿವಾಸ್ ಮಾತನಾಡಿ, ಕ್ರೀಡೆಯಲ್ಲಿ ಸೋಲು-ಗೆಲುವು ಸಾಮಾನ್ಯ. ಮೊದಲು ಪ್ರತಿಯೊಬ್ಬರೂ ಸ್ಪರ್ಧಾ ಮನೋಭಾವದಿಂದ ಆಟಗಳಲ್ಲಿ ಭಾಗವಹಿಸುವುದು ಬಹುಮುಖ್ಯ.ಈಒತ್ತಡದಕಾರ್ಯನಿರ್ವಹಣೆಯಲ್ಲಿ ದೈಹಿಕ ಮತ್ತು ಮಾನಸಿಕ ಸಧೃಡತೆ ಕಾಪಾಡಿಕೊಳ್ಳಲು ಇಂತಹ ಕ್ರೀಡೆಗಳಲ್ಲಿ ಹೆಚ್ಚಾಗಿ ಭಾಗವಹಿಸಿ ಎಂದು ಸಲಹೆ ನೀಡಿದರು. ತಾಲೂಕು ಉಪಾಧ್ಯಕ್ಷ ಪಿ. ಹರ್ಷ ಮಾತನಾಡಿ, ಮಾರ್ಚ್ 9ರಂದು ಸೋಮವಾರ, 10ರಂದು ಮಂಗಳವಾರ ದೇವನಹಳ್ಳಿ ತಾಲೂಕು ಸೂಲಿಬೆಲೆ ರಸ್ತೆಯ ಬ್ರಿಗೇಡ್ ಅರ್ಚರ್ಡ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಪಂದ್ಯಾವಳಿಯನ್ನು ಹಮ್ಮಿಕೊಂಡಿದೆ. ಬೆಂಗಳೂರು ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಧಿಕಾರಿಗಳ ವರ್ಗ ಮತ್ತು ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಜಿಲ್ಲಾಧ್ಯಕ್ಷ ಜಿ.ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ರಮೇಶ್, ನಿರ್ದೇಶಕ ಜಗದೀಶ್, ವಿನಯ್, ಹರ್ಷ, ಜಗದೀಶ್, ನರಸಿಂಹಮೂರ್ತಿ, ಡಿ.ಎನ್.ನಾರಾಯಣಸ್ವಾಮಿ, ಟಿ.ಎಂ.ನಾಗರಾಜ್, ಮಂಜುನಾಥ್, ನಿರ್ಮಲಾ, ಅಶ್ವಿನಿ, ಕೆಂಪೇಗೌಡ ಇತರರಿದ್ದರು.

ಕನಕ ಸೌಹಾರ್ದ ಸಹಕಾರ ಸಂಘಕ್ಕೆ ಆಯ್ಕೆ



ಹೊಸಕೋಟೆ: ಕನಕ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗೆ ನೂತನ ಅಧ್ಯಕ್ಷರಾಗಿ ಸಿ.ಶ್ರೀನಿವಾಸಯ್ಯ ಹಾಗು ಉಪಾಧ್ಯಕ್ಷರಾಗಿ ಜಿಟಿ ಮೋಹನ್ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಽಕಾರಿ ಮಾದವ ರೆಡ್ಡಿ ಘೋಷಣೆ ಮಾಡಿದರು.

ಕನಕ ನಗರದಲ್ಲಿರುವ ಕನಕ ಸೌಹಾರ್ದ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗೆ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆ ಹಾಗೂ ನೂತನವಾಗಿ ನೇಮಕಗೊಂದ ನಿರ್ದೇಶಕರಿಗೆ ಆದೇಶ ಪತ್ರ ವಿತರಣೆ ಬಳಿಕ ನೂತನ ಅಧ್ಯಕ್ಷ ಸಿ.ಶ್ರೀನಿವಾಸಯ್ಯ ಮಾತನಾಡಿ, ಸೊಸೈಟಿ ಅಭಿವೃದ್ದಿಗೆ ಶೇರುದರರ ಸಂಖ್ಯೆಯನ್ನು ಹೆಚ್ಚಿಸಬೇಕಿದೆ. ಠೇವಣಿದಾರರ ಸಂಖ್ಯೆಯೂ ಹೆಚ್ಚಿಸ ಬೇಕಿದೆಂದರು. ನೂತನ ಉಪಾಧ್ಯಕ್ಷ ಜಿಟಿ ಮೋಹನ್ ಕುಮಾರ್ ಮಾತನಾಡಿ, ದರು. ನಿರ್ದೇಶಕರಾದಕೆ.ಎಂ.ಮುನಿರಾಜ್, ಮುನಿಶಾಮಣ್ಣ, ಎಂ.ಎ.ಕೃಷ್ಣಾ ರೆಡ್ಡಿ (ಕಿಟ್ಟಿ), ಸಿ.ಮುನಿಯಪ್ಪ, ಎಂ. ನಾರಾಯಣಸ್ವಾಮಿ, ಜೆ.ಕೃಷ್ಣಮೂರ್ತಿ, ಎನ್. ಮಂಜುನಾಥ್, ಅಶ್ವತ್, ಎ.ಎಸ್. ಸಂಪತ್ ಕುಮಾರ್, ಎನ್. ಶೋಭಾ, ಎಚ್. ವಿ. ಹೇಮಲತಾ, ಸಿಬ್ಬಂದಿ ಇದ್ದರು.

ಹಲಸಹಳ್ಳಿಯಲ್ಲಿ ಭಂಡಾರಪೆಟ್ಟಿಗೆಗೆ ಸ್ವಾಗತ | ವಿವಿಧ ದೇವರ ಮೆರವಣಿಗೆ

ಗ್ರಾಮೀಣರ ಒಗ್ಗಟ್ಟಿಗೆ ಧಾರ್ಮಿಕ ಆಚರಣೆ

ತಾವರೆಕೆರೆ: ನಮ್ಮ ಹಿರಿಯರು ಆಚರಿಸಿರುವ ಧಾರ್ಮಿಕ ಸಂಪ್ರದಾಯವನ್ನು ಪಾಲಿಸುವುದು ನಮ್ಮ ಆದ್ಯಕರ್ತವ್ಯಎಂದು ಬಾಣಮಾಕನಹಳ್ಳಿ ವದಲಿ ರಾಮೇಶ್ವರ ಟ್ರಸ್ಟ್ ಅಧ್ಯಕ್ಷ ರಮೇಶ್ ಎಂಎನ್‌ಆರ್ ತಿಳಿಸಿದರು.

ತಾವರೆಕೆರೆಯ ರಾಮೇಶ್ವರ, ಸಿದ್ದೇಶ್ವರ, ಬಿದರಹಳ್ಳಿ ಬತ್ತೇಶ್ವರ ವಾಗಟರಾಮೇಶ್ವರ ಅಪ್ಪಸಂದ್ರ ಬತ್ತೇಶ್ವರ ಬಾಣಮಾಕನಹಳ್ಳಿ ವದಲೀರಾಮೇಶ್ವರ, ದೊಡ್ಡ ದೇವರ ಜಾತ್ರಾಮಹೋತ್ಸವ 11 ವರ್ಷದ ನಂತರ ನಡೆಯುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಆಗಮಿಸಿದ ದೇವರ ಎತ್ತು ಹಾಗೂ ಭಂಡಾರ ಪೆಟ್ಟಿಗೆ ಕಾಲಾಟ ತೆಂಗಿನಕಾಯಿ ಪವಾಡ ತಂಡದೊಂದಿಗೆ ಸ್ವಾಗತ ನೀಡಿದ ಬಳಿಕ ಮಾತನಾಡಿ, ಮೇಲಿನ ಆರು ದೇವರುಗಳ ಒಕ್ಕಲಿನವರು ರಾಜ್ಯದ ವಿವಿಧ ಮೂಲೆಯಲ್ಲಿ ನೆಲೆಸಿದ್ದಾರೆ. ಗ್ರಾಮಕ್ಕೆ ಬಂದು ಸಾವಿರಾರು ವರ್ಷದಿಂದ ಹಿರಿಯರು ಆಚರಿಸಿ ಕೊಂಡು ಬಂದಿರುವ ಸಂಪ್ರದಾಯವನ್ನು ಪಾಲಿಸುತ್ತಿರುವುದು ವಿಶೇಷವಾಗಿದೆಎಂದರು.ದೇವರಎತ್ತುಭಂಡಾರಪೆಟ್ಟಿಗೆಯಲ್ಲಿ ಮೂಲ ಮೂರ್ತಿಯನ್ನಿಟ್ಟುಕೊಂಡು ತಲೆಯ ಮೇಲೆ ಹೊತ್ತು ಹಲಸಹಳ್ಳಿಯ ಗ್ರಾಮ ದೇವರಾದ ದೊಡ್ಡಮ್ಮದೇವಿ, ಸುಗ್ಗಲಮ್ಮದೇವಿ, ಶನೇಶ್ವರ ಸ್ವಾಮಿ, ವೀರಾಂಜನೇಯ, ಓಂಶಕ್ತಿ, ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸುವರು. ಕಾಲಾಟ ತೆಂಗಿನಕಾಯಿ ಪವಾಡ, ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮಾಡಿ ಪೂಜಿಸಿದ ನಂತರ ಏಪ್ರಿಲ್ 6ರವರೆಗೆ 'ದೇವರ ಕಟ್ಟುಪಾಡು ಪಾಲಿಸಲು ಬದ್ದರಾಗಿರುತ್ತೇವೆಂದು ತಿಳಿಸಿದರು.

ಕಂಬಿಯಜಮಾನರು ಗ್ರಾಪಂ ಮಾಜಿ ಅಧ್ಯಕ್ಷೆ ಸುಬ್ಬುಲಕ್ಷ್ಮಿಚಿಕ್ಕ ನಾರಾಯಣಸ್ವಾಮಿ ಮಾತನಾಡಿ, ವಿಶ್ವದಲ್ಲಿಯೇ ಕುರುಬ ಕುಲಕ್ಕೆ ಮಾತ್ರಒಲಿದು ಬಂದಿರುವ ತೆಂಗಿನಕಾಯಿ ಪವಾಡದ ಮತ್ತು ಭಂಡಾರವನ್ನುಧರಿಸುವ ಮೂಲಕ ಬಸವನ ತಲೆ ಮೇಲೆ ಮತ್ತು ದೀಕ್ಷೆ ಪಡೆದ ವೀರಕುಮಾರರ ತಲೆ ಮೇಲೆ ತೆಂಗಿನಕಾಯಿ ಹೊಡೆಯುವ ಮೂಲಕ ಗ್ರಾಮದಲ್ಲಿ ನಡೆಯಲಿದೆ. ವದಲಿ ರಾಮೇಶ್ವರ, ಅಪ್ಪಸಂದ್ರ ಬತ್ತೇಶ್ವರ, ತಾವರೆಕೆರೆರಾಮೇಶ್ವರ, ಸಿದ್ದೇಶ್ವರ ದೇವರ ಭಕ್ತರು ಪೂಜೆಯನ್ನು ಸಲ್ಲಿಸಿದರು. ಆರು ದೇವರ ಒಕ್ಕಲಿನವರು ಸೇರಿದಂತೆ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.



ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಶಾರದಾ ಪೂಜೆ

ಉತ್ತಮ ಫಲಿತಾಂಶದಿಂದ ಶಾಲೆಗೆ ಕೀರ್ತಿ

ಸೂಲಿಬೆಲೆ: ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯೆ ತುಂಬಾ ಅವಶ್ಯವಿದೆ. ಯಾರು ಕದಿಯಲಾಗದ ವಿದ್ಯೆಯನ್ನು ಆಸ್ತಿಯಂತೆ ಸಂಪಾಧಿಸಬೇಕು ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪಾಧ್ಯಕ್ಷ ಬಿ.ಎನ್.ಗೋಪಾಲಗೌಡ ಹೇಳಿದರು.

ಇಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾರಾಧಾ ಪೂಜೆ ಹಾಗೂ 10ನೇ ತರಗತಿ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾದಾನ ಮಹಾದಾನ ಶ್ರೇಷ್ಠದಾನವಾಗಿದೆಂದರು.

ಶಾಲಾ ಕಾಲೇಜುಗಳ ಅಭಿವೃದ್ಧಿ ಹಾಗೂ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಹೆಚ್ಚು ಕ್ರಿಯಾಶೀಲ ಕಾರ್ಯಕ್ರಮಗಳು ನೆಡೆಯುತ್ತಿದೆ. ಸರ್ಕಾರಿ ಶಾಲೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಬಡ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ತರುವ ಮೂಲಕ ಪೋಷಕರಿಗೆ ಶಾಲೆಗೆ ಕೀರ್ತಿ ತರುವ ಕೆಲಸ ಮಾಡಬೇಕು ಎಂದರು ಪ್ರಾಂಶುಪಾಲ ವೆಂಕಟೇಶ್ ಮಾತನಾಡಿ, ಮಾಜಿ ಸಚಿವ ಬಿ.ಎನ್.ಬಚ್ಚೇಗೌಡರು ಹೊಸಕೋಟೆ ತಾಲೂಕಿನಲ್ಲಿ ಶಾಶ್ವತವಾದ ಶಾಲಾ ಕಾಲೇಜುಗಳ ಪ್ರಾರಂಭ ಮಾಡಿದರು. ಇದನ್ನು ಶರತ್ ಬಚ್ಚೇಗೌಡರು ಪ್ರಗತಿಯ ಹಾದಿಯಲ್ಲಿ ಸಾಗಿಸುತ್ತಿದ್ದಾರೆ . ಶಿಕ್ಷಣವೇ ಶಕ್ತಿ ಹಾಗೂ ಆಯುಧವಾಗಿದೆ. ಎಲ್ಲರೂ ಶಿಕ್ಷಣವೆಂಬ ಹಾಲು ಕುಡಿದು ಸಿಂಹದಂತೆ ಘರ್ಜಿಸಬೇಕು ಎಂದು ಕರೆ ನೀಡಿದರು. ಗ್ರಾಪಂ ಮಾಜಿ ಅಧ್ಯಕ್ಷ ಜನಾರ್ದನರೆಡ್ಡಿ, ಅಭಿವೃದ್ದಿಸಮಿತಿಸದಸ್ಯರಾದಜಿಯಾವುಲ್ಲಾ, ಬೆಟ್ಟಹಳ್ಳಿ ಗೋಪಿನಾಥ್, ಸೈಯದ್ ಮಹಬೂಬ್, ನಯಾಜ್ ಖಾನ್, ಪ್ರಶಾಂತ್, ಅತ್ತಿಬೆಲೆ ಮಂಜುನಾಥ್, ಶಿಕ್ಷಕರಾದ ಅಚ್ಯುತ್, ಬಸವರಾಜ್, ರುತ್ ಜೆಸಂತ, ಲಕ್ಷ್ಮೀಭಟ್, ರಕ್ಷಿತಾ ಇತರರಿದ್ದರು.



[illegible]

ಸ್ವತ್ತು, ಉತ್ತರಕ್ಕೆ: ಧರಣಪ್ಪನವರ ಸ್ವತ್ತು, ದಕ್ಷಿಣಕ್ಕೆ: ಚಿಕ್ಕಬಸ್ತಿ ರಸ್ತೆ.
ದಿನಾಂಕ 27-02-2026ರಂದು ನನ್ನ ದಸ್ತಕತ್ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲ್ಪಟ್ಟಿದೆ.
ನ್ಯಾಯಾಲಯದ ಆದೇಶದ ಮೇರೆಗೆ: ಆಡಳಿತ ಶಿರಸ್ತೇದಾರರು, 3ನೇ ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾದೀಶರ ನ್ಯಾಯಾಲಯ, ಹಾಸನ.
ವಾದಿಯ ಪರ ವಕೀಲರು: ಪ್ರಕಾಶ್ ವೈ.ಎನ್. ವಕೀಲರು ಹಾಸನ.

[illegible]

ವಾರಸುದಾರರಾದ 3ಎ ಮತ್ತು 3ಬಿ ರವರಾಗಲೀ, ನಿಮ್ಮ ವಕೀಲರ ಮೂಲಕ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು ಎಂದು ತಿಳಿಸಲಾಗಿದೆ.
ಈ ನ್ಯಾಯಾಲಯದ ದಸ್ತಕ್ತಿನೊಂದಿಗೆ ದಿ: 10.02.2026 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ
ಜಿಲ್ಲಾಧಿಕಾರಿಗಳ ಪರವಾಗಿ, ಮಂಡ್ಯ ಜಿಲ್ಲೆ, ಮಂಡ್ಯ
ಅರ್ಜಿದಾರರ ಪರ ವಕೀಲರು: ಹೆಚ್.ಎಲ್. ರಶ್ಮಿ, ಮಂಡ್ಯ

BEFORE THE MOTOR ACCIDENT CLAIMS TRIBUNAL AT BANGALORE (SCCH-6)
MVC NO: 4391/2025

Arun Kumar N ... PETITIONER -V/s- Bajaj Allianz General Insurance Co. Ltd & Another ...RESPONDENTS

NOTICE TO THE SECOND RESPONDENT

M/S Nandi Transport Solutions, # 64, 1st Floor, 1st Cross, 1st main 7th cross road, Bank Colony, Mico layout, Karnataka PIN-560076, (RC owner of Maruthi Suzuki Car No: KA-51-AL-1710)

Whereas the petitioner has instituted the above claim petition against you claiming compensation of Rs. 75,00,000 (Seventy Five lakhs only) together With cost and interest for the injuries sustained in the motor vehicle accident occurred on 03/05/2025 at about 2.30 PM by Maruthi Suzuki Car No: KA-51-AL-1710, belonging to you Near Beside of Bhukti Dhaba on Chikkaballapur Road, Devanahalli. Hence take notice and appear before (SCCH-6) on 16/04/2026 at 11:00 A.M in person or by a pleader duly instructed and able to answer all material questions relating to the claim petition, in default of your appearance or the date aforementioned the petition will be heard in your absence placing you Exparte.

ಈ ಮೂಲಕ ಮೇಲ್ಕಂಡ ದಾವೆಗೆ ಸಂಬಂಧಪಟ್ಟಂತೆ ವಾದಿಯು 1) ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹರಪನಹಳ್ಳಿ ಗ್ರಾಮದ ಸರ್ವೆ ನಂ. 9ರ ವಿಸ್ತೀರ್ಣ 1 ಎಕರೆ 7 ಗುಂಟೆ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ : ರಂಗಪ್ಪ ಮತ್ತು ರಾಮರೆಡ್ಡಿರವರ ಸ್ವತ್ತು, ಪಶ್ಚಿಮಕ್ಕೆ : ದೊಡ್ಡಮುನಿಸ್ವಾಮಿ ರವರ ಸ್ವತ್ತು, ಉತ್ತರಕ್ಕೆ : ಗೌರಮ್ಮ ರವರ ಸ್ವತ್ತು, ದಕ್ಷಿಣಕ್ಕೆ : ಮುನಿರೆಡ್ಡಿ ಮತ್ತು ನರಸಿಂಹರೆಡ್ಡಿ ರವರ ಸ್ವತ್ತು, 2) ಜಿಗಣಿ ಗ್ರಾಮದ ಸರ್ವೆ ನಂ. 30/1 ರ ವಿಸ್ತೀರ್ಣ 7½ ಗುಂಟೆ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ : ಮುನಿರೆಡ್ಡಿ ರವರ ಸ್ವತ್ತು ಪಶ್ಚಿಮಕ್ಕೆ : ಗೌರಮ್ಮ ರವರ ಸ್ವತ್ತು, ಉತ್ತರಕ್ಕೆ : ನರಸಿಂಹರೆಡ್ಡಿ ರವರ ಸ್ವತ್ತು, ದಕ್ಷಿಣಕ್ಕೆ : ಚಿಕ್ಕಮುನಿರೆಡ್ಡಿ ರವರ ಸ್ವತ್ತು. 3) ಜಿಗಣಿ ಗ್ರಾಮದ ಖಾನೇಷುಮಾರಿ ನಂ. 33 ರ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಮುನಿರೆಡ್ಡಿ ರವರ ಸ್ವತ್ತು, ಪಶ್ಚಿಮಕ್ಕೆ : ಮನೆ ಸ್ವತ್ತಿನ ಸಂಖ್ಯೆ 28/1 ಮತ್ತು 32 ರ ಸ್ವತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ದೊಡ್ಡಮುನಿರೆಡ್ಡಿ ರವರ ಖಾಲಿ ನಿವೇಶನ. 4) ಜಿಗಣಿ ಗ್ರಾಮದ ಮನೆ ಸ್ವತ್ತಿನ ಖಾನೇಷುಮಾರಿ ನಂ. 28 ರ ಸ್ವತ್ತು ಚಕ್ಕುಬಂದಿ : ಪೂರ್ವಕ್ಕೆ : ದಾರಿ, ಪಶ್ಚಿಮಕ್ಕೆ : ಸಿಲೇಮಾನ್ ಸಾಬಿನ ರವರ ಸ್ವತ್ತು, ಉತ್ತರಕ್ಕೆ : ಮುನಿರೆಡ್ಡಿ ರವರ ಮನೆ, ದಕ್ಷಿಣಕ್ಕೆ : ಗೌರಮ್ಮ ರವರ ಸ್ವತ್ತು. 5) ಜಿಗಣಿ ಗ್ರಾಮದ ಖಾಲಿ ನಿವೇಶನದ ಖಾನೇಷುಮಾರಿ ನಂ. 32 ರ ಸ್ವತ್ತಿನ ಚಕ್ಕುಬಂದಿ : ಪೂರ್ವಕ್ಕೆ : ಖಾನೇಷುಮಾರಿ ನಂ. 32 ರ ಖಾಲಿ ನಿವೇಶನ, ಪಶ್ಚಿಮಕ್ಕೆ : ಮುನಿರೆಡ್ಡಿ ರವರ ಖಾಲಿ ನಿವೇಶನ, ಉತ್ತರಕ್ಕೆ : ಮನೆ ಸ್ವತ್ತಿನ ಖಾನೇಷುಮಾರಿ ನಂ. 28/1, ದಕ್ಷಿಣಕ್ಕೆ : ದೊಡ್ಡಮುನಿರೆಡ್ಡಿ ರವರ ಖಾಲಿ ನಿವೇಶನ. 6) ಜಿಗಣಿ ಗ್ರಾಮದ ಖಾಲಿ ನಿವೇಶನದ ಖಾನಷುಮಾರಿ ನಂ. 237ರ ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ಮುನಿರೆಡ್ಡಿ ರವರ ಖಾಲಿ ನಿವೇಶನ, ಪಶ್ಚಿಮಕ್ಕೆ : ಯರ್ರಪ್ಪ ರವರ ತೋಟ, ಉತ್ತರಕ್ಕೆ : ನರಸಿಂಹರೆಡ್ಡಿ ರವರ ಖಾಲಿ ನಿವೇಶನ ಮನೆ, ದಕ್ಷಿಣಕ್ಕೆ : ಗೌರಮ್ಮ ರವರ ಸ್ವತ್ತು, ಈ ಮೇಲ್ಕಂಡ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಾದಿಯು ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನದ ಪರಿಹಾರ ಕೋರಿ ಮೇಲ್ಕಂಡ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದು ನ್ಯಾಯಾಲಯದ ಮುಖಾಂತರ ಮೇಲ್ಕಂಡ ಸೇರ್ಪಡೆ ಪ್ರತಿವಾದಿ 8 ಆದ ನಿಮಗೆ ನ್ಯಾಯಾಲಯದಿಂದ ಸಮನ್ಸ್ / ನೋಟಿಸ್ ಬಂದಿರುತ್ತದೆ, ಆದರೆ ತಾವುಗಳು ಸ್ವೀಕರಿಸಿರುವುದಿಲ್ಲ. ಆದುದರಿಂದ ಪತ್ರಿಕಾ ಪ್ರಕಟಣೆಯ ಮುಖಾಂತರ ಮೇಲ್ಕಂಡ ನಿಮಗೆ ನ್ಯಾಯಾಲಯದಿಂದ ಸಮನ್ಸ್/ನೋಟಿಸನ್ನು ನೀಡಲಾಗಿದೆ.

ತಾವುಗಳು **ದಿನಾಂಕ : 23.03.2026 ರಂದು ಬೆಳಗ್ಗೆ 11.00 ಗಂಟೆಗೆ** ಸರಿಯಾಗಿ ನ್ಯಾಯಾಲಯಕ್ಕೆ ನೀವು ಖುದ್ದು ಹಾಜರಾಗಿ ಅಥವಾ ನಿಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರುಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ವಿಲೇವಾರಿ ಮಾಡಲಾಗುವುದು.

ಸದರಿ ಪ್ರಕಟಣೆಯನ್ನು ದಿನಾಂಕ : 25.02.2026 ರಂದು ನ್ಯಾಯಾಲಯದಲ್ಲಿ ಆದೇಶದಂತೆ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

By Order of the Court, Chief Ministerial Officer, Senior Civil Judge & JMFC Court, Anekal.

ಎಂ. ಯಾದವ್ ಮೂರ್ತಿ, ಎನ್. ಮುರುಗೇಶ್, ವಕೀಲರು
ಒಂದನೇ ಮಹಡಿ, ಕೃಷ್ಣಪ್ಪ ಬಿಲ್ಡಿಂಗ್, ಯಲ್ಲಮ್ಮ ದೇವಸ್ಥಾನ ಹತ್ತಿರ, ಆನೇಕಲ್ ಟೌನ್, ಆನೇಕಲ್.

CHANGE OF NAME

I, MITANSH HEGDE S/o Nithin Kumar Hegde, aged about 24 years, and Residing at No.201, M. Block, Purva Fairmount Apartment, Parangipalya, 24th Main, Sector-2, HSR Layout, Bengaluru South, Bengaluru - 560 102, have changed my name from **MITANSH NITHIN HEGDE** to **MITANSH HEGDE,** vide affidavit dated 6/3/2026 sworn to before Puttaramaiah Advocate and Notary Bangalore.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಕಂಗ್ರಾಳಿ ಕೆ. ಹೆಚ್. ರಸ್ತೆ, ಬೆಳಗಾವಿ – 590 010, ಜಿಲ್ಲೆ: ಬೆಳಗಾವಿ, ರಾಜ್ಯ: ಕರ್ನಾಟಕ. ದೂರವಾಣಿ : 0831 – 2478927,
ಇ–ಮೇಲ್ : apmcbelgaum@gmail.com

ಸಂಖ್ಯೆ : ಕೃ.ಮಾ.ಇ./ಕೃ.ಉ.ಮಾ.ಸ.(ಬೆ)/ಅಭಿಕೆ/2255/2025–26 | ದಿನಾಂಕ : 05–03–2026

ಇ-ಟೆಂಡರ್ ಪ್ರಕಟಣೆ

ಬೆಳಗಾವಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಅನುಮೋದನೆಯಾದ ಈ ಕೆಳಕಾಣಿಸಿದ ಕಾಮಗಾರಿಗೆ ಕೆ.ಪಿ.ಪಿ.ಪಿ. ಪೋರ್ಟಲ್‌ನ ಮೂಲಕ ಟೆಂಡರ್‌ನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್‌ಗಿಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ಲಕ್ಷ.ಗಳಲ್ಲಿ)	ಇ.ಎಂ.ಡಿ. ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್	ಟೆಂಡರ್ ತೆರೆಯುವ ದಿನಾಂಕ: ಆರ್ಥಿಕ ಬಿಡ್
01	Replacement of exiting deterorated L.T.U.G Cable System by providing over head System Using 9 mtrs RCC Poles with 3 phase, 5 wire L.T Aerial Bunched cable with LED Streetlights and Highmast light at main Market yard of Belagavi APMC (Under Action Plan 2025-26).	ರೂ. 91.23	ರೂ. 1,82,500.00	25–03–2026 ರ ಸಂಜೆ 5.30 ಗಂಟೆಗೆ	27–03–2026 ರ ಬೆಳಿಗ್ಗೆ 11.00 ಗಂಟೆಗೆ	02–04–2026 ರ ಸಂಜೆ 4.30 ಗಂಟೆಗೆ
02	ಕೃ.ಉ.ಮಾ.ಸ. ಬೆಳಗಾವಿ 2024–25 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮರಾಠ ಬ್ಯಾಂಕ್ ಎದುರುಗಡೆ ಇರುವ ದಿನಸಿ ಚಿಕ್ಕ ಮಳಿಗೆಗಳನ್ನು ಸುಧಾರಣೆ ಮಾಡುವುದು (09 ಸಂಖ್ಯೆ) ಕಾಮಗಾರಿ.	ರೂ. 8.46	ರೂ. 11,000.00	25–03–2026 ರ ಸಂಜೆ 5.30 ಗಂಟೆಗೆ	27–03–2026 ರ ಬೆಳಿಗ್ಗೆ 11.00 ಗಂಟೆಗೆ	02–04–2026 ರ ಸಂಜೆ 4.30 ಗಂಟೆಗೆ

ಟೆಂಡರ್ ಷರತ್ತು ಹಾಗೂ ನಿಬಂಧನೆಗಳು ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080 – 22501216 / 25501227 ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.
ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/2012/ಮಣಿಪಾಲ್/2025–26

ಸ್ಥಾಪನೆ : 1907

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18
ಕಛೇರಿ : 26678572 : 26600512 : 26609066 : 57765582, Web : bccbl.co.in, E -mail : recovery@bccbl.co.in

ಈ–ಹರಾಜು ಮುಖಾಂತರ ಸ್ಥಿರಾಸ್ತಿ ಸ್ವತ್ತುಗಳ ಮಾರಾಟದ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6) ರ ನಿಬಂಧನೆಯೊಂದಿಗೆ ಓದಲಾದ ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ 2002 ರ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ–ಹರಾಜು ಮಾರಾಟ ಸೂಚನೆ.

ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರಿಗೆ ಸೂಚನೆ ನೀಡುವುದೇನೆಂದರೆ, ಕೆಳಗೆ ವಿವರಿಸಿರುವ ಸ್ಥಿರ ಆಸ್ತಿಯನ್ನು, ಅಧಿಕೃತ ಅಧಿಕಾರಿಯು (ಕೆಳಗೆ ಉಲ್ಲೇಖಿಸಲಾದ ವಿವರಗಳು) ಸಾಂಕೇತಿಕವಾಗಿ/ರಚನಾತ್ಮಕವಾಗಿ/ಸ್ವಾಧೀನಪಡಿಸಿಕೊಂಡಿರುವ ಸುರಕ್ಷಿತ ಸಾಲಗಾರನಿಗೆ ಅಡಮಾನ ಇಡಲಾಗಿದೆ/ವಿಧಿಸಲಾಗಿದ್ದು, ಅದನ್ನು "ಎಲ್ಲಿ ಇದೆಯೋ ಹಾಗೆಯೇ", "ಇರುವಂತೆಯೇ" ಮತ್ತು "ಇರುವುದೇನೋ ಹಾಗೆಯೇ" ಆಧಾರದ ಮೇಲೆ **ದಿನಾಂಕ 26.03.2026 ಮತ್ತು 09.04.2026** ರಂದು ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಆಡಳಿತ ಕಚೇರಿಗೆ ಬಾಕಿ ಇರುವ ಹೆಚ್ಚಿನ ಬಡ್ಡಿ ಮತ್ತು ವೆಚ್ಚದೊಂದಿಗೆ ವಸೂಲಿ ಮಾಡಲು ಕೆಳಗೆ ತಿಳಿಸಲಾದ ಸಮಯದಲ್ಲಿ ಮಾರಾಟ ಮಾಡಲಾಗುತ್ತದೆ..

ವಿವರಗಳು ಕೆಳಕಂಡಂತಿವೆ: ಮೀಸಲು ಬೆಲೆ ಮತ್ತು ಅರ್ನೆಸ್ಟ್ ಮನಿ ಠೇವಣಿಗಳ ವಿವರಗಳು ಕೆಳಕಂಡಂತಿವೆ & ಅರ್ನೆಸ್ಟ್ ಮನಿ ಠೇವಣಿಯನ್ನು **ದಿನಾಂಕ 25.03.2026 ಮತ್ತು 08.04.2026** ರಂದು ಅಥವಾ ಅದಕ್ಕೂ ಮೊದಲು **ಸಂಜೆ 5:00 ಗಂಟೆಗೆ RTGS/NEFT** ನಂತಹ ಆನ್ಲೈನ್ ಪಾವತಿಗಳ ಮೂಲಕ ಖಾತೆ ಸಂಖ್ಯೆಗೆ ಕೆಳಗೆ ನೀಡಲಾಗಿದೆ ಅಥವಾ ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಆಡಳಿತ ಕಚೇರಿಯ ಹೆಸರಿನಲ್ಲಿ ಡಿಡಿ ಮೂಲಕ ಜಮಾ ಮಾಡಬೇಕು.

ಕ್ರ ಸಂ.	ಸಾಲಗಾರರ ಹೆಸರು, ವಿಳಾಸ ಮತ್ತು ಶಾಖೆ.	ಸ್ಥಿರಾಸ್ತಿಯ ವಿವರಗಳು ಎಲ್ಲೆ ಮತ್ತು ವಿಸ್ತೀರ್ಣ	ಕಾಯ್ದಿಟ್ಟ ಬೆಲೆ	ಇಡಗಂಟು ಠೇವಣಿ ಹಣ (ಇಎಂಡಿ)	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಹರಾಜು ಸಮಯ ಮತ್ತು ದಿನಾಂಕ
1.	ಶ್ರೀಮತಿ ಮೇರಿ. ಆರ್. ನಂ.129, ಶಕ್ತಿವೇಲು ಸ್ಲಂ ರಸ್ತೆ, 1 ನೇ ಸಿ ಕ್ರಾಸ್, ವಿನಾಯಕನ ನಗರ, ಆಡುಗೋಡಿ ಪೋಸ್ಟ್, ಬೆಂಗಳೂರು–30. ಶಾಖೆ:– ಶಾಂತಿನಗರ	ಹೊಸ ಸಂಖ್ಯೆ 14/1, ಹಳೆಯ ಸಂಖ್ಯೆ 14, (ಉತ್ತರ ಭಾಗ) ಹಿಂದಿನ ಸಂಖ್ಯೆ 91, ಔಟ್ ಆಫ್ ಸೈ. ನಂ. 34/1 & 35, 2ನೇ ಮುಖ್ಯರಸ್ತೆ, 6ನೇ ಕ್ರಾಸ್, ವಿನಾಯಕನಗರ, ಅಡುಗೋಡಿ ಪೋಸ್ಟ್, ಪ್ರಸ್ತುತ ಶಾಂತಿನಗರದ ಬಿಬಿಎಂಪಿ ವಾರ್ಡ್ ನಂ. 70 ರ ವ್ಯಾಪ್ತಿಯಲ್ಲಿ ಬರುತ್ತಿದೆ, ಶಾಂತಿನಗರದ ಹೊಸ ವಾರ್ಡ್ ನಂ. 117, ಪಿಐಡಿ ಸಂಖ್ಯೆ 70–104–14/1, ಬೆಂಗಳೂರು. **ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 15 ಅಡಿ** ಪೂರ್ವಕ್ಕೆ :– ರಸ್ತೆ ಪಶ್ಚಿಮಕ್ಕೆ :– ಆಸ್ತಿ ಸಂಖ್ಯೆ 102 ಉತ್ತರಕ್ಕೆ : ಆಸ್ತಿ ಸಂಖ್ಯೆ 92, ದಕ್ಷಿಣಕ್ಕೆ : ಒಂದೇ ಸಂಖ್ಯೆಯ ಆಸ್ತಿಯ ಉಳಿದ ಭಾಗ	ರೂ. 42,80,000/– (ಪದಗಳಲ್ಲಿ ನಲವತ್ತೆರಡು ಲಕ್ಷಗಳು ಎಂಭತ್ತು ಸಾವಿರ ಮಾತ್ರ)	ರೂ. 4,28,000/– (ಪದಗಳಲ್ಲಿ ನಾಲ್ಕು ಲಕ್ಷಗಳು ಇಪ್ಪತ್ತೆಂಟು ಸಾವಿರ ಮಾತ್ರ)	ರೂ. 28,79,577/– 05.03.2026 ಸೂಚನೆ ದಿನಾಂಕ 05.03.2026	26.03.2026 ಬೆಳಿಗ್ಗೆ :– 10 : 00 ರಿಂದ 11 : 00 ರವರೆಗೆ
2	ಶ್ರೀ. ರವಿಚಂದ್ರ, ಆರ್. ನಂ.123, ಚಳಕೆರೆ ಗ್ರಾಮ, ಪೋಲೋಟಿ ನಿಲಯಂ ಕಲ್ಯಾಣನಗರ ಹತ್ತಿರ, ಬೆಂಗಳೂರು–43. ಶಾಖೆ: ಸಂಜಯನಗರ	ಹಳೆಯ ಗ್ರಾಮ ತಾನಾ ಖಾತಾ ಸಂಖ್ಯೆ 96, ಹೊಸ ಸಂ.96/1, BBMP ಖಾತಾ ನಂ. 153/96/3, ಚಳಕೆರೆ ಗ್ರಾಮ, ಕೃಷ್ಣರಾಜಪುರ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಚಳಕೆರೆಯ ಬಿಬಿಎಂಪಿ ವಾರ್ಡ್ ನಂ. 25, ಬೆಂಗಳೂರು. **ಪೂರ್ವದಿಂದ ಪಶ್ಚಿಮಕ್ಕೆ: 18 ಅಡಿ & ಉತ್ತರದಿಂದ ದಕ್ಷಿಣಕ್ಕೆ: 18 ಅಡಿ** ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ : ಅದೇ ಆಸ್ತಿಯ ಉಳಿದ ಭಾಗವು ಸೇರಿದೆ ಪಾಪಣ್ಣ ಉತ್ತರಕ್ಕೆ: 5 ಅಡಿ ಸಾಮಾನ್ಯ ಹಾದಿ, ದಕ್ಷಿಣಕ್ಕೆ : ಆಸ್ತಿ ಜಯಚಂದ್ರ ಅವರಿಗೆ ಸೇರಿದ್ದು.	ರೂ. 20,70,000/– (ಪದಗಳಲ್ಲಿ ಇಪ್ಪತ್ತು ಲಕ್ಷ ಎಪ್ಪತ್ತು ಸಾವಿರ ಮಾತ್ರ)	ರೂ. 2,07,000/– (ಪದಗಳಲ್ಲಿ ಎರಡು ಲಕ್ಷಗಳು) ಏಳು ಸಾವಿರ ಮಾತ್ರ)	ರೂ. 39,05,424/– 05.03.2026 ನೋಟಿಸ್ ದಿನಾಂಕ 05.03.2026	26.03.2026 ಬೆಳಿಗ್ಗೆ :– 10 : 00 ರಿಂದ 11 : 00 ರವರೆಗೆ
3	ಶ್ರೀ/ಶ್ರೀಮತಿ ಬಿ. ನೀಲವೇಣಿ, ವಿಳಾಸ: ನಂ. 258, 5ನೇ ಮುಖ್ಯರಸ್ತೆ, 7ನೇ ಕ್ರಾಸ್, ಅರುಂದತಿನಗರ,ಗಂಗೊಂಡನ ಹಳ್ಳಿ, ಚಂದ್ರಾಲೇಔಟ್, ಬೆಂಗಳೂರು–39 ಶಾಖೆ ವಿಜಯನಗರ	ನಂ. 258, ಗಂಗೊಂಡನಹಳ್ಳಿ, ಅರುಂಧತಿನಗರ ಸ್ಲಂ, ಸಂ. ಸಂಖ್ಯೆ 8/10, PID ಸಂಖ್ಯೆ 39–305–258, ಚಂದ್ರಾಲೇಔಟ್, BBMP ವಾರ್ಡ್ ನಂ.39, ಬೆಂಗಳೂರು **ಅಳತೆ:ಪೂರ್ವದಿಂದ ಪಶ್ಚಿಮಕ್ಕೆ: 21 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 31.6 ಅಡಿ.** ಪೂರ್ವಕ್ಕೆ:– ಮನೆ ಸಂಖ್ಯೆ 259, ಪಶ್ಚಿಮಕ್ಕೆ:– ಮನೆ ಸಂಖ್ಯೆ 257, ಉತ್ತರಕ್ಕೆ:– ರಸ್ತೆ, ದಕ್ಷಿಣಕ್ಕೆ:– ರಸ್ತೆ.	ರೂ. 28,95,000/– (ಪದಗಳಲ್ಲಿ ಇಪ್ಪತ್ತೆಂಟು ಲಕ್ಷ ತೊಂಭತ್ತೈದು ಸಾವಿರ ಮಾತ್ರ)	ರೂ. 2,89,500/– (ಪದಗಳಲ್ಲಿ ಎರಡು ಲಕ್ಷಗಳು) ಎಂಭತ್ತೊಂಬತ್ತು ಸಾವಿರದ ಐದು ನೂರು ಮಾತ್ರ)	ರೂ. 8,93,437/– 04.03.2026 ಸೂಚನೆ ದಿನಾಂಕ 05.03.2026	09.04.2026 ಬೆಳಿಗ್ಗೆ :– 10 : 00 ರಿಂದ 11 : 00 ರವರೆಗೆ

ತಪಾಸಣೆಯ ದಿನಾಂಕ ಮತ್ತು ಸಮಯ : ಕ್ರ.ಸಂ. 1 ಕ್ಕೆ ದಿನಾಂಕ: 24.03.2026
ಕ್ರ.ಸಂ.2 ಕ್ಕೆ ದಿನಾಂಕ: 24.03.2026, ಕ್ರ.ಸಂ.3 ಕ್ಕೆ ದಿನಾಂಕ: 07.04.2026, ಬೆಳಿಗ್ಗೆ 10:00 ರಿಂದ ಸಂಜೆ 5:00 ರವರೆಗೆ.

ಇಎಂಡಿ ಠೇವಣಿ ಪಾವತಿಯ ಕೊನೆಯ ದಿನಾಂಕ : ಕ್ರ.ಸಂ. 1 ಕ್ಕೆ ದಿನಾಂಕ : 25.03.2026
ಕ್ರ.ಸಂ. 2 ಕ್ಕೆ ದಿನಾಂಕ : 25.03.2026, ಕ್ರ.ಸಂ. 3 ಕ್ಕೆ ದಿನಾಂಕ : 08.04.2026ಸಂಜೆ 5:00 ರ ವರೆಗೆ

ಬಿಡ್ ಗುಣಾಂಕ : ರೂ. 50,000/–

ಬ್ಯಾಂಕಿನ ಹೆಸರು ಮತ್ತು ಖಾತೆಯ ವಿವರಗಳು (ಇಎಂಡಿ ಪಾವತಿಗಾಗಿ)
ಬ್ಯಾಂಕಿನ ಹೆಸರು: ಇಂಡಸ್‌ಇಂಡ್ ಬ್ಯಾಂಕ್
ಶಾಖೆ ಹೆಸರು : ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಪ್ರಧಾನ ಕಛೇರಿ ಖಾತೆ ಸಂಖ್ಯೆ : 000220105013061
IFSC ಕೋಡ್ : INDB0BCCB02

ಸಾಲಗಾರರು/ ಅಡಮಾನದಾರರ ಗಮನಕ್ಕೆ ನಿಬಂಧನೆಗಳ ಉಪ–ವಿಭಾಗ (8) ರ ಸೆಕ್ಷನ್ 13ರ ಕಾಯಿದೆಯಲ್ಲಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಲು ತಿಳಿಸಲಾಗಿದೆ. (ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ ನೀಡುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು) ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವೆಬ್‌ಸೈಟ್ ನಲ್ಲಿನ ಲಿಂಕನ್ನು ನೋಡಿ ಅಂದರೆ, " ಅಡಮಾನ ಸ್ವತ್ತುಗಳ ಮಾರಾಟ " ಶೀರ್ಷಿಕೆಯ ಅಡಿಯಲ್ಲಿ www.bccbl.co.in, ಅನ್ನು ನೋಡಿ. ಈ– ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ **ದಿನಾಂಕ: 26.03.2026 & 09.04.2026** ರಂದು ಬೆಳಿಗ್ಗೆ : 10.00 ರಿಂದ 11.00 ರವರೆಗೆ **https://bankauctions.in** ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು **https://bankauctions.in** ನಲ್ಲಿ ನೊಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಉಚಿತವಾಗಿ ಪಡೆಯಬಹುದು ಮತ್ತು **E-auction (tentatively on 25.03.2026 & 08.04.2026) from M/s 4 Closure, Mr. Prakash Reddy ,Varun. B, No.22, 5th Cross, Gurumahal Extension, Opp. Indian Hotel, K.G. Halli, Jalahalli (West), Bengaluru-560015, Mobile No: 8142000064,8142000809, E-mail: prakash@bankauctions.in & karnataka@bankauctions.in** ಹೆಚ್ಚಿನ ಮಾಹಿತಿಗಾಗಿ : **recovery@bccbl.co.in Mobile Number : 080-26600512, 26609066**

ದಿನಾಂಕ: 06.03.2026
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ– ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಹಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಹೊಳಲ್ಕೆರೆ

ಓ.ಎಸ್. ನಂ : 117/2022

ವಾದಿಯರು: 1) ಕೃಷ್ಣಮೂರ್ತಿ ಬಿನ್ ಲೇಟ್ ಯಲ್ಲಪ್ಪ, ವಯಸ್ಸು 47 ವರ್ಷ, ವ್ಯವಸಾಯಗಾರರು, ಕೇಶವಾಪುರ ವಾಸ, ಹೊಳಲ್ಕೆರೆ ತಾಲ್ಲುಕು, ಚಿತ್ರದುರ್ಗ ಜಿಲ್ಲೆ.

ವಿರುದ್ಧ

ಪ್ರತಿವಾದಿಯರು : 1)ವಿಜಯಲಕ್ಷ್ಮಿ ಕೋಂ ವೆಂಕಟೇಶ, ವಯಸ್ಸು 42 ವರ್ಷ, ವ್ಯವಸಾಯಗಾರರು, 2)ರುದ್ರಮ್ಮಕೋಂಲೇಟ್ ತಿಮ್ಮಪ್ಪ,ವಯಸ್ಸುಸುಮಾರು70 ವರ್ಷ, ವ್ಯವಸಾಯಗಾರರು. 3)ಚಂದ್ರಪ್ಪ ಬಿನ್ ಹನುಮಂತಪ್ಪ, ವಯಸ್ಸುಸುಮಾರು 46 ವರ್ಷ, ವ್ಯವಸಾಯಗಾರರು, 4)ಸುಜಾತ ಆರ್ ಕೋಂ ಅಜ್ಜಯ್ಯ, ವಯಸ್ಸು ಸುಮಾರು 34 ವರ್ಷ, ವ್ಯವಸಾಯಗಾರರು, ಎಲ್ಲರೂ ಕೇಶವಾಪುರ ವಾಸಿಗಳು, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, **ಪ್ರಸ್ತಾಪಿತ ಪ್ರತಿವಾದಿ:** 5)ಮಹಂತೇಶ ಬಿನ್ ಹನುಮಂತಪ್ಪ, ವಯಸ್ಸು ಸುಮಾರು 49 ವರ್ಷ, ಶ್ರೀದುರ್ಗ ಕೃಪ, ಯಲ್ಲಮ್ಮ ದೇವಾಲಯ ಬಳಿ, ಹೆಬ್ಬಗೋಡಿ ಲೇಕ್, ವಾರ್ಡ್ ನಂ.14, ಬೊಮ್ಮಸಂದ್ರ, ಬೆಂಗಳೂರು–560009.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ ವಾದಿಯರು ಹೊಳಲ್ಕೆರೆ ಹಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಪ್ರತಿವಾದಿಯರು ವಿರುದ್ಧ ಘೋಷಣಾತ್ಮಕ ಪರಿಹಾರಕ್ಕಾಗಿ ಈ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ 5ನೇ ಪ್ರಸ್ತಾಪಿತ ಪ್ರತಿವಾದಿಗೆ ನ್ಯಾಯಾಲಯದಿಂದ ಅರ್ಜಿಯ ಮೇಲೆ ನೋಟೀಸ್ ಹೊರಡಿಸಿದ್ದು ಸದರಿ ನೋಟೀಸ್ ಪ್ರತಿವಾದಿಯರು ಮನೆಯನ್ನು ಮೇಲ್ಕಂಡ ವಿಳಾಸದಲ್ಲಿ ಇರುವುದಿಲ್ಲವೆಂದು ಷರಾ ಬಂದಿರುತ್ತದೆ. ಆದ್ದರಿಂದ ಅಂತಿಮವಾಗಿ ಈ ಪ್ರಕಟಣೆ ಮೂಲಕ ಪ್ರತಿವಾದಿಗಳಿಗೆ ತಿಳಿಯಪಡಿಸುವುದೇನೆಂದರೆ ಹೊಳಲ್ಕೆರೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ **ದಿನಾಂಕ : 27-04-2026 ರಂದು ಬೆಳಿಗ್ಗೆ 11-00 ಗಂಟೆಗೆ** ದಾವೆ ಇದ್ದು 5 ನೇ ಪ್ರಸ್ತಾಪಿತ ಪ್ರತಿವಾದಿ ಖುದ್ದಾಗಿಯಾಗಲೀ ಅಥವಾ ಅವರ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ದಾವೆಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ, ನನ್ನ ಸಹಿಯೊಂದಿಗೆ ದಿನಾಂಕ:25-02-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
ಕೆ.ಎಸ್.ಮಲ್ಲಿಕಾರ್ಜುನ
ವಕೀಲರು, ಹೊಳಲ್ಕೆರೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು,
ಕಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹೊಳಲ್ಕೆರೆ

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಸಿ.ವಿ. ರಾಮನ್‌ನಗರ ವಿಭಾಗ, 8ನೇ ಅಡ್ಡ ರಸ್ತೆ, 12ನೇ ಎ ಮುಖ್ಯ ರಸ್ತೆ, ಹೆಚ್‌ಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು – 560038

ಸಂಖ್ಯೆ: ಕಾಪಾಅ/ಸಿವಿರಾ/ಕೆಪಿಪಿಪಿ/10/2025–26 | ದಿನಾಂಕ: 06.03.2026

ದ್ವಿ–ಲಕೋಟೆ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ ಲಕೋಟೆ ಪದ್ಧತಿ) (ಗುಣಮಟ್ಟ ಹಾಗೂ ವೆಚ್ಚ ಆಧಾರಿತ ಆಯ್ಕೆ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್
https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಸರ್ ಸಿವಿ ರಾಮನ್ ನಗರ ವಿಭಾಗ), ಬೆಂಕೇಂನಪಾ, ಬೆಂಗಳೂರು ಇವರು, ಆಯುಕ್ತರು, ಬೆಂಕೇಂನಪಾ ಇವರ ಪರವಾಗಿ ಕೆಳಕಂಡ ಕಾಮಗಾರಿಗಳಾದ ಯೋಜನಾ ನಿರ್ವಹಣೆ ಸೇವೆಗಾಗಿ (ಪಿಎಂಸಿ) ಸಲಹಾ ಸೇವೆಗಳನ್ನು ನೀಡಲು ಪ್ರತಿಷ್ಠಿತ ಸಮಾಲೋಚಕರಿಂದ ಕೆಳಗಿನ ಸೇವೆಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1	ಜೀವನಭೀಮಾನಗರದಲ್ಲಿ ಕಂದಾಯ ಕಛೇರಿ ನಿರ್ಮಾಣ ಮತ್ತು ಜೀವನಭೀಮಾನಗರ ಉಪ ವಿಭಾಗದ ವಾರ್ಡ್ ಸಂಖ್ಯೆ. 112, 113, 114, 115 ಹಾಗೂ ಸಿವಿ ರಾಮನ್ ನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 108, 109, 110, 111 ಗಳಿಗೆ ಸಂಬಂಧಿಸಿದಂತೆ ರಸ್ತೆಗಳ, ಒಳಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸಿ ವಿ ರಾಮನ್ ನಗರದ ವಿಭಾಗದಲ್ಲಿ ಆಟದ ಮೈದಾನಗಳ ಅಭಿವೃದ್ಧಿಯ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಮಾಲೋಚಕರ ಸೇವಗಳು. ಯೋಜನಾ ವೆಚ್ಚ: ರೂ.25.00 ಕೋಟಿಗಳು. ಟೆಂಡರಿಗಿಟ್ಟ ಮೊತ್ತ: ರೂ. 20.02 ಲಕ್ಷಗಳು. ಇಎಂಡಿ ಮೊತ್ತ: 50,000.00
2	2025–26 ಸಾಲಿಗೆ ಜಿಬಿಕೆ ಅನುದಾನದಡಿಯಲ್ಲಿ (ಸಆ ಸಂಖ್ಯೆ. 1, 3, 4, 5, 8, 9, 11, 12, 13, 14, 15, 17, 18, 19, 20, 21, 22, 23, 25) ಸಿವಿ ರಾಮನ್ ನಗರ ವಿಭಾಗದಲ್ಲಿ ಡಾಂಬರು ರೀಸರ್ಫೇಸಿಂಗ್ & ಆರ್ಟೀರಿಯಲ್ & ಉಪ ಆರ್ಟೀರಿಯಲ್ ರಸ್ತೆಗಳ ಸುಧಾರಣೆ (ಒಟ್ಟು ಕಾಮಗಾರಿಗಳು–19). ಯೋಜನಾ ವೆಚ್ಚ: ರೂ.30.00 ಕೋಟಿಗಳು. ಟೆಂಡರಿಗಿಟ್ಟ ಮೊತ್ತ: ರೂ. 24.01 ಲಕ್ಷಗಳು. ಇಎಂಡಿ ಮೊತ್ತ: 50,000.00

ವೇಳಾ ಪಟ್ಟಿ : 1) ಬಿಡ್ ಪೂರ್ವ–ಭಾವಿ ಸಭೆಯನ್ನು 12.03.2026 ರಂದು 15.30 ಗಂಟೆಗೆ ಕಾರ್ಯಪಾಲಕ ಅಭಿಯಂತರರು, ಸರ್ ಸಿವಿ ರಾಮನ್ ನಗರ ವಿಭಾಗ, 8ನೇ ಅಡ್ಡ ರಸ್ತೆ, 12ನೇ ಎ ಮುಖ್ಯ ರಸ್ತೆ, ಹೆಚ್‌ಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು – 560038 ಇಲ್ಲಿ ಏರ್ಪಡಿಸಲಾಗಿದೆ. 2) ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 16–03–2026 ರಂದು 16.00 ಗಂಟೆಯವರೆಗೆ ಅಥವಾ ಮುಂಚಿತವಾಗಿ. 3) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ಕಾರ್ಯಪಾಲಕ ಅಭಿಯಂತರರು, ಸರ್ ಸಿವಿ ರಾಮನ್ ನಗರ ವಿಭಾಗ ಇವರ ಕಛೇರಿಯಲ್ಲಿ 17.03.2026 ರಂದು ಸಂಜೆ 16:30 ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಸರ್. ಸಿ ವಿ ರಾಮನ್ ನಗರ ವಿಭಾಗ

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಅಗ್ರಹಾರ ಟ್ಯಾಂಕ್ ಬಂಡ ರಸ್ತೆ, ಬಿನ್ನಿಪೇಟೆ, ಬೆಂಗಳೂರು–560023
ಜಿಲ್ಲೆ : ಬೆಂಗಳೂರು, ರಾಜ್ಯ : ಕರ್ನಾಟಕ

ಕ್ರ.ಸಂ: ಹಹೂಮತ(ವಿ)ಕೃಉಮಾಸ(ಬೆಂ)/3456/2025–26 ದಿನಾಂಕ: 04.03.2026

ಪ್ರಕಟಣೆ

ಸಮಿತಿಯ ಬಿನ್ನಿಪೇಟೆ ಬಾಳೆಕಾಯಿ ಮಾರುಕಟ್ಟೆ ಪ್ರಾಂಗಣ, ಭಾನುವಾರದ ಸಂತೆ ಕಟ್ಟಡ ಮತ್ತು ಹೂವಿನ ಮಾರುಕಟ್ಟೆ ಪ್ರಾಂಗಣಗಳಲ್ಲಿ ಖಾಲಿ ಇರುವ ಮಳಿಗೆಗಳನ್ನು ಜೇಷ್ಠತೆ ಮತ್ತು ಅರ್ಹತೆ (Seniority-cum-merit) ಮೇರೆಗೆ ಮಾಸಿಕ ಲೀವ್–ಅಂಡ್–ಲೈಸನ್ಸ್ ಆಧಾರದ ಮೇಲೆ ಗರಿಷ್ಠ 55 ತಿಂಗಳ ಅವಧಿಗೆ, 11 ತಿಂಗಳಿಗೊಮ್ಮೆ ನವೀಕರಿಸುವ, 33 ತಿಂಗಳಿಗೊಮ್ಮೆ ಪ್ರತಿಶತ 5 ರಷ್ಟು ಲೀವ್–ಅಂಡ್–ಲೈಸನ್ಸ್ ದರಗಳನ್ನು ಹೆಚ್ಚಿಸುವ ಷರತ್ತಿಗೊಳ್ಳಪಟ್ಟು ಆಸ್ತಿ ಹಂಚಿಕೆ ನಿಯಮಾವಳಿಗಳು 2004ರ ನಿಯಮ 13ರ ಪ್ರಕಾರ ಹಂಚಿಕೆ ಮಾಡಲು ಉದ್ದೇಶಿಸಿದ್ದು, ಈ ಸಮಿತಿಯಿಂದ ಲೈಸನ್ಸ್ ಪಡೆದು ಬಾಳೆಕಾಯಿ ಹಾಗೂ ಹೂವಿನ ವ್ಯಾಪಾರ ವಹಿವಾಟು ನಡೆಸುತ್ತಿರುವ ಪೇಟೆಕಾರ್ಯಕರ್ತರಿಂದ ನಿಗಧಿಪಡಿಸಿರುವ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಳಿಗೆಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ಮಳಿಗೆಗಳ ವಿವರ	ವಿಸ್ತೀರ್ಣ ಚ.ಅಡಿ ಗಳಲ್ಲಿ	ಸ.ಕಾ.ನಿ.ಅ., ಮಾಅಯೋ., ಇವರು ನಿಗಧಿಪಡಿಸಿರುವ ಲೀವ್ ಅಂಡ್ ಲೈಸನ್ಸ್ ಶುಲ್ಕ (ರೂ.ಗಳಲ್ಲಿ)	ಪಾವತಿಸಬೇಕಾದ ಪ್ರಾರಂಭಿಕ ಮುಂಗಡ 2 ತಿಂಗಳ ರೇವಣಿ (ರೂ.ಗಳಲ್ಲಿ)
1	2	3	4	5
	ಬಾಳೆಕಾಯಿ ಮಾರುಕಟ್ಟೆ ಪ್ರಾಂಗಣ (ಕರೆ–1)			
	ಸಾಮಾನ್ಯ ವರ್ಗ 1 ಸಂಖ್ಯೆ			
1	ಮಳಿಗೆ ಸಂಖ್ಯೆ 14	503.76	9,749	19,498
	ಭಾ. ಸಂತ ಕಟ್ಟಡದಲ್ಲಿರುವ ಮಳಿಗೆಗಳು (ಕರೆ–2)			
	ಸಾಮಾನ್ಯ ವರ್ಗ 1 ಸಂಖ್ಯೆ			
2	ಮಳಿಗೆ ಸಂಖ್ಯೆ 03	160.16	4,534	9,069
3	ಮಳಿಗೆ ಸಂಖ್ಯೆ 05	100.32	2,840	5.680
	ಪರಿಶಿಷ್ಟ ಜಾತಿ			
4	ಮಳಿಗೆ ಸಂಖ್ಯೆ 17	198.00	5,606	11,212
	ಪರಿಶಿಷ್ಟ ಪಂಗಡ			
5	ಮಳಿಗೆ ಸಂಖ್ಯೆ 20	121.00	3,426	6,852
	ಎಫ್.ಪಿ.ಓ			
6	ಮಳಿಗೆ ಸಂಖ್ಯೆ 07	97.68	2,765	5,530

ಹೂವಿನ ಮಾರುಕಟ್ಟೆ ಪ್ರಾಂಗಣದಲ್ಲಿರುವ ಮಳಿಗೆ ಸಂಖ್ಯೆ 15 ಮತ್ತು 27 ಅನ್ನು ಪರಿಶಿಷ್ಟ ಪಂಗಡಕ್ಕೆ ಹಾಗೂ ಮಳಿಗೆ ಸಂಖ್ಯೆ 20, 23 ಮತ್ತು 28 ಅನ್ನು ಎಫ್.ಪಿ.ಓ ಗಳಿಗೆ ಮೀಸಲಿಟ್ಟು ಮಳಿಗೆಗಳನ್ನು ಹಂಚಿಕೆ ಮಾಡುವ ಸಂಬಂಧ 02 ಬಾರಿ ಪ್ರಕಟಣೆ ಹೊರಡಿಸಿದ್ದು, ಯಾರು ಭಾಗವಹಿಸದ ಕಾರಣ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ ನಿಯಂತ್ರಣ) ನಿಯಮಾವಳಿ 2004ರ ನಿಯಮ 17ರ ತಿದ್ದುಪಡಿ ಅಧಿಸೂಚನೆದಿನಾಂಕ:24.12.2025ರನ್ವಯಸಾಮಾನ್ಯವರ್ಗಕ್ಕೆ ಮೀಸಲಿಡಲಾಗಿದೆ.

7	ಮಳಿಗೆ ಸಂಖ್ಯೆ 15	2.90 x 6.25	3.852	7.704
8	ಮಳಿಗೆ ಸಂಖ್ಯೆ 20	4.50 x 6.25	5,977	11,954
9	ಮಳಿಗೆ ಸಂಖ್ಯೆ 23	4.70 x6.25	6,242	12,484
10	ಮಳಿಗೆ ಸಂಖ್ಯೆ 27	4.50 x 6.25	5,977	11,954
11	ಮಳಿಗೆ ಸಂಖ್ಯೆ 28	2.65 x 6.25	3,520	7,040

ಷರತ್ತು ಮತ್ತು ನಿಬಂಧನೆಗಳು: (1) ಹಂಚಿಕೆ ಪಡೆಯಲು ಇಚ್ಛಿಸುವ ಪರವಾನಗಿ ಹೊಂದಿರುವ ಪೇಟೆಕಾರ್ಯಕರ್ತರು **ದಿನಾಂಕ: 16.03.2026 ರ ಸಂಜೆ 4 ಗಂಟೆಯೊಳಗೆ** ನೊಂದಣಿ ಶುಲ್ಕ **ರೂ. 500–00** (ರೂ. ಐದು ನೂರು ಮಾತ್ರ) ಗಳನ್ನು (ಮರುಪಾವತಿಸಲಾಗುವುದಿಲ್ಲ) Secretary, Fruits, Flowers and Vegetables Special Apmc Bangalore ಇವರ ಹೆಸರಿಗೆ ಡಿ.ಡಿ ಪಡೆದು ಈ ಕಛೇರಿಗೆ ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. **(2)** ಈ ಹಿಂದೆ ಸಮಿತಿಯಲ್ಲಿ ಹಂಚಿಕೆಗಾಗಿ ನೋಂದಾಯಿಸಿ ಕೊಂಡವರು ಅದರ ಪ್ರತಿಯನ್ನು ಸಮಿತಿಗೆ ಸಲ್ಲಿಸುವುದು, ಮತ್ತೊಮ್ಮೆ ನೋಂದಾಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. **(3)** ಹಂಚಿಕೆ ಪಡೆಯಲು ಇಚ್ಛಿಸುವ ನೋಂದಾಯಿತ ಅರ್ಹ ಪೇಟೆಕಾರ್ಯಕರ್ತರು ಶೇ.18 ರಂತೆ ಜಿ.ಎಸ್.ಟಿ. ಮೊತ್ತ ರೂ.180.00 ಗಳೊಂದಿಗೆ ಅರ್ಜಿ ಶುಲ್ಕ ರೂ.1000.00 ರಂತೆ ಒಟ್ಟಾರೆ ರೂ.1,180.00 (ರೂ. ಒಂದು ಸಾವಿರದ ನೂರ ಎಂಬತ್ತು ಮಾತ್ರ) ಗಳನ್ನು, Secretary, Fruits, Flowers and Vegetables Special Apmc Bangalore ಇವರ ಹೆಸರಿಗೆ ಡಿ.ಡಿ. ಪಡೆದು ಈ ಕಛೇರಿಗೆ ಪಾವತಿಸಿ ನಮೂನೆ–III ರಲ್ಲಿ ಭರ್ತಿ ಮಾಡಿದ ಅರ್ಜಿಯ ಜೊತೆಗೆ ನಿಗಧಿಪಡಿಸಿದ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸಲು ಕೊನೆಯ **ದಿನಾಂಕ: 25.03.2026 ರ ಸಂಜೆ 4 ಗಂಟೆಯವರೆಗೆ. (4)** ಹಂಚಿಕೆ ಕೋರಿ ಸಲ್ಲಿಸಿದ ಅರ್ಜಿಗಳನ್ನು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ಮಾರುಕಟ್ಟೆ ಪ್ರಾಂಗಣದಲ್ಲಿನ ಆಸ್ತಿ ಹಂಚಿಕೆ ನಿಯಂತ್ರಣ ನಿಯಮಗಳು 2004 ರ ನಿಯಮ 8 ರಲ್ಲಿ ನಿಗಧಿಪಡಿಸಿರುವಂತೆ ಲೈಸನ್ಸ್ ಅರ್ಹತೆ, ಹಂಚಿಕೆಗಾಗಿ ಪ್ರಯತ್ನ ಮತ್ತು ಬಳಕೆದಾರರ ಶುಲ್ಕ ಪಾವತಿಯ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. **(5)** ಅರ್ಜಿದಾರರು ಕಳೆದ ಮೂರು ವರ್ಷಗಳ ಅಂದರೆ, 2022–23, 2023–24 ಮತ್ತು 2024–25 ಸಾಲಿನಲ್ಲಿ ಸಮಿತಿಗೆ ಪಾವತಿಸಿರುವ ಬಳಕೆದಾರರ ಶುಲ್ಕದ ವಿವರಗಳನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಸಮಿತಿಯಿಂದ ದಲ್ಲಾಲರ ಪರವಾನಗಿ ಪಡೆದ ಹಾಗೂ ಉಪ ನಿರ್ದೇಶಕರಿಂದ ಖರೀದಿದಾರರ ಪರವಾನಗಿ ಪಡೆದ ಬಗ್ಗೆ ವಿವರಗಳೊಂದಿಗೆ ಲೈಸನ್ಸ್ ಪ್ರತಿಯನ್ನು ಲಗತ್ತಿಸತಕ್ಕದ್ದು. **(6)** ಹಂಚಿಕೆಗಾಗಿ ಅರ್ಜಿ ಸಲ್ಲಿಸುವ ಅರ್ಜಿದಾರರು ಸಮಿತಿಯಿಂದ ದಲ್ಲಾಲರ ಪರವಾನಗಿ ಹಾಗೂ ಉಪ ನಿರ್ದೇಶಕರಿಂದ ಖರೀದಿದಾರರ ಪರವಾನಗಿ ಪಡೆದು ಕನಿಷ್ಠ 03 ವರ್ಷಗಳ ಅವಧಿ ಕಳೆದಿರಬೇಕು ಹಾಗೂ ವ್ಯಾಪಾರ ವಹಿವಾಟನ್ನು ನಿರ್ವಹಿಸಿರಬೇಕು. **(7)** ಮಳಿಗೆ ಹಂಚಿಕೆಗಾಗಿ 2 ತಿಂಗಳಿಗೆ ಸಮನಾದ ಲೀವ್ ಅಂಡ್ ಲೈಸನ್ಸ್ ಶುಲ್ಕವನ್ನು ಈ ಪ್ರಕಟಣೆಯ ಕಾಲಂ 5 ರಲ್ಲಿ ನಮೂದಿಸಿರುವ ಮೊತ್ತಕ್ಕೆ ಇ.ಎಂ.ಡಿ ಮೊತ್ತವನ್ನು, Secretary, Fruits, Flowers and Vegetables Special Apmc Bangalore ಇವರ ಹೆಸರಿಗೆ ಡಿ.ಡಿ ಮೂಲಕ ನಿಗಧಿತ ಅರ್ಜಿ ನಮೂನೆಯೊಂದಿಗೆ ಲಗತ್ತಿಸತಕ್ಕದ್ದು. **(8)** ಹಂಚಿಕೆಗೆ ಪ್ರಸ್ತಾಪಿಸಿರುವ ಮಳಿಗೆ ಸಂಖ್ಯೆ ಹಾಗೂ ವಿಸ್ತೀರ್ಣಗಳಲ್ಲಿ ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. **(9)** ಅರ್ಜಿದಾರರು ಹಂಚಿಕೆಗೆ ಕೋರಿರುವ ಮಳಿಗೆ ಸಂಖ್ಯೆ ಹಂಚಿಕೆಗೆ ಲಭ್ಯವಾಗದಿದ್ದಲ್ಲಿ, ಅನ್ವಯಿಸುವ ಬೇರೆ ಮಳಿಗೆಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದು. ಈ ಕುರಿತು ಅರ್ಜಿದಾರರು ಅಫಿಡವಿಟ್ ಸಲ್ಲಿಸತಕ್ಕದ್ದು. **(10)** ಎಲ್ಲಾ ಮಳಿಗೆ ಹಂಚಿಕೆಯು ನಿಯಮಾನುಸಾರ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಅನುಮೋದನೆಯ ಷರತ್ತಿಗೊಳಪಟ್ಟು ಹಂಚಿಕೆ ಮಾಡಲಾಗುವುದು. **(11)** ಸಮಿತಿಯು ಮಳಿಗೆ ಹಂಚಿಕೆಯನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ವಿವರಗಳನ್ನು ಹಣ್ಣು, ಹೂವು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು ಇಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ | ಸಹಿ/– ಆಡಳಿತಾಧಿಕಾರಿಗಳು

ವಾಸಾಸಂಇ/ವಾ.ಪ್ರ/ಎಎಎ/6014/2025–26

ಕಿರುಸುದ್ದಿ

ಮಾರಕಾಸ್ತ್ರದಿಂದ ಹತ್ಯೆಗೆ ಯತ್ನ: ದೂರು



• **ಹಲಗೂರು:** ಕ್ಷುಲ್ಲಕ ವಿಚಾರಕ್ಕೆ ವ್ಯಕ್ತಿಯೊಬ್ಬರ ಮೇಲೆ ಮಾರಾಕಾಸ್ತ್ರದಿಂದ ಯುವಕನೊಬ್ಬನ ಮೇಲೆ ಹಲ್ಲೆ ಮಾಡಿ ಆರೋಪಿ ಪರಾರಿಯಾಗಿರುವ ಘಟನೆ ಸಮೀಪದ ಮರದೊಡ್ಡಿ ಬಳಿಯ ಕಾವೇರಿ ವೈನ್ಸ್ ಬಳಿ ನಡೆದಿದೆ.

ಮರದೊಡ್ಡಿ ಗ್ರಾಮದ ಮಂಜುನಾಥ್ ಹಲ್ಲೆಗೊಳಗಾದವರು. ತೊರೆಕಾಡನಹಳ್ಳಿ ಗ್ರಾಮದ ಪ್ರಶಾಂತ್ ಕಾವೇರಿ ವೈನ್ಸ್ ಬಳಿ ಪರಸ್ಪರ ಗಲಾಟೆ ಮಾಡಿಕೊಂಡಿದ್ದು, ಉದ್ರಿಕ್ತಗೊಂಡ ಪ್ರಶಾಂತ್ ಮಾರಕಾಸ್ತ್ರದಿಂದ ಮಂಜುನಾಥ್ ಮೇಲೆ ಹಲ್ಲೆ ನಡೆಸಿದ್ದಾನೆ. ತೀವ್ರ ಗಾಯಗೊಂಡ ಮಂಜುನಾಥ್ ಅವರನ್ನು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾನೆ. ಮಂಡ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ವಿ.ಜೆ.ಶೋಭರಾಣಿ ಗುರುವಾರ ರಾತ್ರಿ ಘಟನಾ ಸ್ಥಳಕ್ಕೆ ಭೇಟಿ, ಪರಿಶೀಲಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದ ಬಳಿಕ ಹಲಗೂರು ಠಾಣೆಗೆ ಭೇಟಿ ನೀಡಿ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡಿದರು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯ ಪ್ರಕರಣ ದಾಖಲಾಗಿದೆ.

ಲೈವ್‌ಸ್ಟ್ರೀಮಿಂಗ್‌ಗೆ ವಿಡಿಯೋ ಕಾನ್ಫರೆನ್ಸ್ ಸೌಲಭ್ಯ

• **ಬೆಂಗಳೂರು:** ಭೂ ವ್ಯಾಜ್ಯಗಳ ಇತ್ಯರ್ಥದಲ್ಲಿ ಪಾರದರ್ಶಕತೆ ಖಾತ್ರಿಪಡಿಸಲು ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿ(ಕೆಎಟಿ) ಮತ್ತು ಕರ್ನಾಟಕ ಭೂ-ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳ ಕಲಾಪವನ್ನು ಸಿಸಿಎಂಎಸ್ ಮತ್ತು ಆರ್‌ಸಿಸಿಎಂಎಸ್ ತಂತ್ರಾಂಶಗಳನ್ನು ಸಂಯೋಜಿಸಿ, ಎಲ್ಲ ಕಂದಾಯ ನ್ಯಾಯಾಲಯಗಳ ಕಲಾಪಗಳನ್ನು ಲೈವ್‌ಸ್ಟ್ರೀಮಿಂಗ್ ಮಾಡಲು ಮತ್ತು ವಿಡಿಯೋ ಕಾನ್ಫರೆನ್ಸ್ ಸೌಲಭ್ಯ ಒದಗಿಸಲು ಸರ್ಕಾರ ಉದ್ದೇಶಿಸಲಾಗಿದೆ. ಕರ್ನಾಟಕ ಲ್ಯಾಂಡ್‌ಸ್ಟಾಕ್ ಯೋಜನೆ ಅಡಿಯಲ್ಲಿ ಭೂಮಿ, ಮೋಜಿಣಿ, ಕಾವೇರಿ, ಇ-ಸ್ವತ್ತು, ಇ-ಆಸ್ತಿಯಲ್ಲಿರುವ ಜಮೀನು, ಆಸ್ತಿಯ ದತ್ತಾಂಶಗಳನ್ನು ಜಿಐಎಸ್-ಆಧಾರಿತ ಡಿಜಿಟಲ್ ವೇದಿಕೆಯಲ್ಲಿ ಸಮಗ್ರವಾಗಿ ಕ್ರೋಢೀಕರಿಸಿ ಏಕರೂಪದಲ್ಲಿ ದಾಖಲೆಗಳನ್ನು ನಿರ್ವಹಿಸಲಾಗುತ್ತದೆ. ಭೂಮಿ ತಂತ್ರಾಂಶವನ್ನು ಪ್ರಸ್ತುತ ತಂತ್ರಾಂಶಕ್ಕೆ ಅನುಗುಣವಾಗಿ ಆಧುನೀಕರಿಸುವುದರ ಮೂಲಕ 10ಕ್ಕೂ ಹೆಚ್ಚು ಇಲಾಖೆಗಳೊಂದಿಗೆ ಸಂಪರ್ಕ ಹೊಂದಿರುವ ಭೂಮಿ 8.ಓ ಸಾಫ್ಟ್‌ವೇರ್ ಅನ್ನು ಸುಮಾರು 50 ಕೋಟಿ ರೂ.ಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. ಜತೆಗೆ ಭೂ-ಮಾಪನ ಇಲಾಖೆಯ ಭೂ-ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗಳಲ್ಲಿ ನವೀಕೃತ ಅಭಿಲೇಖಾಲಯಗಳನ್ನು 72 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲಾಗುತ್ತದೆ.

ಪೊಲೀಸರ ಸಮಯೋಚಿತ ಕಾರ್ಯಾಚರಣೆ

• **ಬೆಂಗಳೂರು:** ನಗರದಲ್ಲಿ ಪೊಲೀಸರ ತ್ವರಿತ ಸ್ಪಂದನೆ ಮತ್ತು ಮಾನವೀಯ ಕಾಳಜಿಯಿಂದಾಗಿ ಎರಡು ಪ್ರತ್ಯೇಕ ಘಟನೆಯಲ್ಲಿ ಅಮೂಲ್ಯ ಜೀವವನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮಾ.5 ರಂದು ಮಧ್ಯಾಹ್ನದ ಸಮಯದಲ್ಲಿ ಸುಬ್ರಹ್ಮಣ್ಯನಗರದ ರೈಲು ಹಳಿಯ ಬಳಿ ವ್ಯಕ್ತಿಯೊಬ್ಬರು ವೈಯಕ್ತಿಕ ಕಾರಣದಿಂದ ಮನನೊಂದು ಆತ್ಮಹತ್ಯೆಗೆ ಯತ್ನಿಸುತ್ತಿದ್ದರು. ಈ ವಿಷಯ ತಿಳಿದ ಅವರ ಕುಟುಂಬದವರು ತಕ್ಷಣವೇ 112 ತುರ್ತು ಸಹಾಯವಾಣಿಗೆ ಕರೆ ಮಾಡಿದರು. ಮಾಹಿತಿ ಸಿಕ್ಕ ಕೇವಲ ಎರಡು ನಿಮಿಷದಲ್ಲಿ ಸ್ಥಳಕ್ಕೆ ಧಾವಿಸಿದ ಮಲ್ಲೇಶ್ವರ ಪೊಲೀಸ್ ಠಾಣೆಯ ಹೊಯ್ಸಳ-94 ಸಿಬ್ಬಂದಿಗಳಾದ ಎಎಸ್‌ಐ ಜಗದೀಶ್ ಎಸ್.ಪಿ ಮತ್ತು ಕಾನ್ಸ್‌ಟೇಬಲ್ ನಿಜಲಿಂಗ ಅವರು, ಮದ್ಯಪಾನ ಮಾಡಿ ಸಂಕಷ್ಟದಲ್ಲಿದ್ದ ಆ ವ್ಯಕ್ತಿಯನ್ನು ಸಮಾಧಾನಪಡಿಸಿ ಸುರಕ್ಷಿತವಾಗಿ ಕುಟುಂಬ ವರ್ಗದವರಿಗೆ ಹಸ್ತಾಂತರಿಸಿದರು. ಮತ್ತೊಂದು ಘಟನೆಯಲ್ಲಿ, ಮಾ.6 ರಂದು ಬೆಳಗಿನ ಜಾವ ನಾಗರಭಾವಿ ಉದ್ಯಾನವನದ ಬಳಿ 56 ವರ್ಷದ ಸುಧಾ ಪರಿಮಳಾ ಎಂಬ ಮಹಿಳೆ ಆಕಸ್ಮಿಕವಾಗಿ 25 ಅಡಿ ಆಳದ ಗುಂಡಿಗೆ ಬಿದ್ದು ಸಂಕಷ್ಟಕ್ಕೆ ಸಿಲುಕಿದ್ದರು. ಆಕೆಯ ಮಗ ನೀಡಿದ ಮಾಹಿತಿಯ ಮೇರೆಗೆ ಚಂದ್ರಲೇಔಟ್ ಪೊಲೀಸ್ ಠಾಣೆಯ ಹೊಯ್ಸಳ-61 ಸಿಬ್ಬಂದಿಗಳಾದ ಎಎಸ್‌ಐ ಶ್ರೀನಿವಾಸ್ ಮೂರ್ತಿ ಮತ್ತು ಹೆಡ್ ಕಾನ್ಸ್‌ಟೇಬಲ್ ವಿನೋದಾ ಅವರು ನಾಲ್ಕು ನಿಮಿಷದಲ್ಲಿ ಸ್ಥಳಕ್ಕೆ ತಲುಪಿದರು.

ಮಲ್ಲೇಶ್ವರ ಮತ್ತು ಚಂದ್ರಲೇಔಟ್ ನಲ್ಲಿ ಪ್ರತ್ಯೇಕ ಘಟನೆ: ಎರಡು ಜೀವಗಳ ರಕ್ಷಣೆ

ಆಯವ್ಯಯದಲ್ಲೂ ವಿಬಿ ಜಿ ರಾಮ್ ಜಿಗೆ ವಿರೋಧ | ಕಾನೂನು ಹೋರಾಟದ ಬಗ್ಗೆ ಸರಕಾರದ ಸುಳಿವು

ಗಾಂಧಿ ಸ್ಮರಿಸಿದ ಸಿಎಂ ಸಿದ್ದರಾಮಯ್ಯ

• **ಬೆಂಗಳೂರು:** ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಆಜೀವಿಕಾ ಮಿಷನ್ ಗ್ರಾಮೀಣ (ವಿಬಿ ಜಿ ರಾಮ್ ಜಿ) ಕಾಯ್ದೆಯನ್ನು ರಾಜ್ಯ ಸರ್ಕಾರ ಆರಂಭದಿಂದಲೂ ವಿರೋಧಿಸುತ್ತಲೇ



ಇದೆ. ಇದನ್ನು ವಿರೋಧಿಸಿ ಈಗಾಗಲೇ ವಿಧಾನ ಮಂಡಲದ ಉಭಯ ಸದನಗಳು ನಿರ್ಣಯ ಮಂಡಿಸಿ, ಅಂಗೀಕರಿಸಿವೆ. ಇದೀಗ ಈ ವಿರೋಧವೂ 2026-27ನೇ ಸಾಲಿನ ಆಯವ್ಯಯದಲ್ಲಿಯೂ ಉಲ್ಲೇಖವಾಗಿದೆ. ಅಗತ್ಯವಿದ್ದರೆ ಕಾನೂನು ಹೋರಾಟಕ್ಕೂ ಸಿದ್ಧ ಎಂಬ ಸುಳಿವನ್ನು ನೀಡಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕೇಂದ್ರ ಸರ್ಕಾರವು ವ್ಯವಸ್ಥಿತವಾಗಿ ದುರ್ಬಲಗೊಳಿಸಿರುವುದನ್ನು ಜನರ ಉದ್ಯೋಗದ ಹಕ್ಕುಗಳು ಮೊಟಕಾಗಲಿವೆ ಮತ್ತು ರಾಜ್ಯಗಳ ಆರ್ಥಿಕ



ಹೊರೆ ಇನ್ನಷ್ಟು ಹೆಚ್ಚಲಿದೆ. ಈ ಕಾರಣಗಳಿಂದ ರಾಜ್ಯದ ಹಿತಾಸಕ್ತಿಗಾಗಿ ಪಕ್ಷಾತೀತವಾಗಿ ಎಲ್ಲರೂ ಒಗ್ಗೂಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲೇಬೇಕಾಗಿದೆ ಎಂದು ಹೇಳಲಾಗಿದೆ.

ಗ್ರಾಮೀಣ ಕುಟುಂಬಗಳಿಗೆ ಜೀವನೋಪಾಯ ಭದ್ರತೆ ಯನ್ನು ಒದಗಿಸುವ ಮಹತ್ವಾಕಾಂಕ್ಷೆಯಿಂದ ಯುಪಿಎ ಸರ್ಕಾರ 2004ರಲ್ಲಿ ಜಾರಿಗೆ ತಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು (ಮನರೇಗಾ) ಗ್ರಾಮೀಣ ಭಾಗದಲ್ಲಿ ವಿಕೇಂದ್ರೀಕೃತ ಯೋಜನೆ ರೂಪಿಸುವುದಕ್ಕೆ ಉತ್ತೇಜನ ನೀಡಿತ್ತು. ಈ ಯೋಜನೆಯಲ್ಲಿ ರಾಜ್ಯದಲ್ಲಿ ಸುಮಾರು 182 ಕೋಟಿ ಮಾನವ ದಿನಗಳ ಉದ್ಯೋಗವು ಸೃಜನೆಯಾಗಿದೆ. ಒಟ್ಟಾರೆ 61,000 ಕೋಟಿ ರೂ. ವೇತನ ಪಾವತಿಸಲಾಗಿದ್ದು, ಸುಮಾರು 77 ಲಕ್ಷ ಆಸ್ತಿಗಳು ನಿರ್ಮಾಣವಾಗಿವೆ. ಪ್ರಸಕ್ತ ವರ್ಷದಲ್ಲೇ ಸುಮಾರು 71 ಲಕ್ಷ ಗ್ರಾಮೀಣ ಕುಟುಂಬಗಳು ಈ ಯೋಜನೆಯ ಪ್ರಯೋಜನ ಪಡೆದಿವೆ ಎಂದು ತಿಳಿಸಲಾಗಿದೆ.

ಇದೀಗ ಕೇಂದ್ರ ಸರ್ಕಾರವು ಈ ಯೋಜನೆಯನ್ನು ರದ್ದುಗೊಳಿಸಿ ವಿಬಿ ಜಿ ರಾಮ್ ಜಿ ಯೋಜನೆಯನ್ನು ಜಾರಿಗೆ ತಂದಿದೆ. ಇದು ಮನರೇಗಾ ಯೋಜನೆಯ ಮೂಲೋದ್ದೇಶವಾದ ಹಕ್ಕು ಆಧಾರಿತ ದೃಷ್ಟಿಕೋನವನ್ನು ದುರ್ಬಲಗೊಳಿಸುವ ಕ್ರಮವಾಗಿದೆ ಹಾಗೂ ಮಹಾತ್ಮ ಗಾಂಧಿ ಅವರ ಗ್ರಾಮ ಸ್ವರಾಜ್ ಪರಿಕಲ್ಪನೆಗೆ ವಿರುದ್ಧವಾಗಿದೆ ಎಂದು ಉಲ್ಲೇಖಿಸಲಾಗಿದೆ.

ವಿಬಿ ಜಿ ರಾಮ್ ಜಿ ಯೋಜನೆ ಜಾರಿಯಿಂದ ಬೇಡಿಕೆ ಆಧಾರಿತ ಉದ್ಯೋಗ ಖಾತರಿಯಿಂದ ದೂರ ಸರಿದು ಕೇಂದ್ರದಿಂದ ನಿರ್ಧರಿಸಲ್ಪಡುವ ಉದ್ಯೋಗ ಹಂಚಿಕೆ ವ್ಯವಸ್ಥೆಗೆ ಅವಕಾಶವಾಗುತ್ತದೆ. ಸಂವಿಧಾನದ 73ನೇ ತಿದ್ದುಪಡಿಯ ಮೂಲ ತತ್ತ್ವಕ್ಕೆ ವಿರುದ್ಧವಾಗಿದ್ದು, ಪಂಚಾಯತ್‌ಗಳ ನಿರ್ಧರಣಾಧಿಕಾರಕ್ಕೆ ಧಕ್ಕೆಯಾಗುವ ಸಾಧ್ಯತೆಯಿದೆ.

ಪಂಚಾಯತ್‌ಗೆ ಮಹಾತ್ಮ ಗಾಂಧಿ ನಾಮಕರಣ

ಮಹಾತ್ಮ ಗಾಂಧಿ ಅವರ ಹೆಸರನ್ನು ಚಿರಸ್ಥಾಯಿಗೊಳಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್



ಗಳನ್ನು ಮಹಾತ್ಮ ಗಾಂಧಿ ಗ್ರಾಮ ಪಂಚಾಯತ್ ಎಂದು ನಾಮಕರಣ ಮಾಡಲಾಗುತ್ತದೆ. ಗಾಂಧೀಜಿ ಅವರ ವಿಚಾರಧಾರೆಗಳನ್ನು ಯುವಜನರಿಗೆ ತಿಳಿಸಲು ಮತ್ತು ಜಿಲ್ಲಾ ಗಾಂಧಿ ಭವನಗಳನ್ನು ಪುನಶ್ಚೇತನಗೊಳಿಸಲು ಮಹಾತ್ಮ ಗಾಂಧಿ ಜನ ಶಿಕ್ಷಣ ಕೇಂದ್ರ ಯೋಜನೆ ರೂಪಿಸಿ ಜಾರಿಗೊಳಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಯವ್ಯಯದಲ್ಲಿ ತಿಳಿಸಿದ್ದಾರೆ.

ಹಿಂದಿನ ವ್ಯವಸ್ಥೆ ಮರುಸ್ಥಾಪನೆ

ಗ್ರಾಮ ಪಂಚಾಯತ್‌ಗಳನ್ನು ಸಬಲಗೊಳಿಸಿ ಗ್ರಾಮೀಣ ಜೀವನೋಪಾಯವನ್ನು ಬಲಪಡಿಸಿದ್ದ ಹಿಂದಿನ ವ್ಯವಸ್ಥೆಯನ್ನು ಮರುಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರವು ತೀವ್ರವಾಗಿ ಆಗ್ರಹಿಸುತ್ತದೆ. ಗ್ರಾಮೀಣ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಹಾಗೂ ವಿಕೇಂದ್ರೀಕೃತ ಆಡಳಿತದ ತತ್ತ್ವಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯವಾದ ಎಲ್ಲಾ ಕ್ರಮವನ್ನು ಕೈಗೊಳ್ಳಲು ಅಗತ್ಯವಿದ್ದಲ್ಲಿ ಕಾನೂನು ಹೋರಾಟವನ್ನು ಸಹ ಕೈಗೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದೆ.

ಬಿಎಂಟಿಸಿ ಬಸ್ ನಿರ್ವಾಹಕ ಶಿವಣ್ಣಗೆ ಬೀಳ್ಕೊಡುಗೆ

ಸಮಯಪ್ರಜ್ಞೆ ಎಲ್ಲರಿಗೂ ಮಾದರಿಯಾಗಲಿ

• **ಆನೇಕಲ್:** ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 31 ವರ್ಷ ಕಾಲ ನಿರ್ವಾಹಕರಾಗಿ ಸೇವೆ ಸಲ್ಲಿಸಿ ಸೇವೆಯಿಂದ ನಿವೃತ್ತರಾದ ಸಿ. ಶಿವಣ್ಣ ಅವರನ್ನು ಬಿಎಂಟಿಸಿ ಘಟಕ 38 ವ್ಯವಸ್ಥಾಪಕರಾದ ಆರ್. ಸರಸ್ವತಿ ಮತ್ತು ಸಿಬ್ಬಂದಿ ಸನ್ಮಾನಿಸಿ ಬಿಳ್ಕೊಟ್ಟರು,

ಕಾರ್ಯಕ್ರಮದಲ್ಲಿ ವ್ಯವಸ್ಥಾಪಕರಾದ ಆರ್.ಸರಸ್ವತಿ ಮಾತನಾಡಿ, ನಿರ್ವಾಹಕರಾದ ಶಿವಣ್ಣ ಅವರ ಕಾರ್ಯಕ್ಷಮತೆ ನಿಷ್ಠೆ ಸಮಯಪ್ರಜ್ಞೆ ಮುಂತಾದ ಉತ್ತಮ ಗುಣವನ್ನು ಸ್ಮರಿಸಿದ ಅವರ ಸೇವೆಯನ್ನು ಶ್ಲಾಘಿಸಿದರು. ಇನ್ನು ಘಟಕದ ಎಲ್ಲಾ ಕಾರ್ಮಿಕರು ಶಿವಣ್ಣ ಅವರ ಸಮಯ ಸಮಯ ಪ್ರಜ್ಞೆ ಮತ್ತು ಕರ್ತವ್ಯ ನಿಷ್ಠೆಯನ್ನು ಇತರ ನೌಕರರು ಅನುಕರಿಸುವಂತೆ ಕರೆ ನೀಡಿದರು.

ಶಿವಣ್ಣ ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಶುಭ ಹಾರೈಸಿದರು. ಘಟಕದವತಿಯಿಂದ ಸನ್ಮಾನಿಸಲು ತುಂಬಾ ಹೆಮ್ಮೆಯಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೌಕರವರ್ಗದವರು ಅವರ ಕುಟುಂಬದವರು ಹಿತೈಷಿಗಳು ಭಾಗವಹಿಸಿರುವುದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ ಎಂದು ತಿಳಿಸಿದರು

ಕಾರ್ಯಕ್ರಮದಲ್ಲಿ ಘಟಕ 38ರ ಸಂಚಾರಿ ನಿರೀಕ್ಷಕರಾದ ಸಾಕಮ್ಮ ಸಹಾಯಕ ಸಂಚಾರಿ ನಿರೀಕ್ಷಕರಾದ ನೀಲಕಂಠ ಏಡಬ್ಲ್ಯುಎಸ್ ಚಂದ್ರು, ಪಾರುಪತದಾರರಾದ ಆಶಾಪುಟ್ಟರಾಜು, ಡಾ.ಮಲ್ಲಿನಾಥ, ಪೊಲೀಸ್ ಪಾಟೀಲ್, ನಿರ್ವಾಹಕರಾದ ಧನಸಿಂಗ್ ರಾಥೋಡ್, ನಾಗಯ್ಯ, ಸಂತೋಷ್, ಮಾಂತೇಶ್, ಈರಣ್ಣ, ಮ್ಯಾನೇಜರ್ ಸಂಗಪ್ಪ, ಸಿ .ವೈ, ಕೃಷ್ಣ, ಅಮೃತ ಚೆನ್ನಪ್ಪ ಗೌಡ, ಮನೋಹರ್ ನಿವೃತ್ತ ಶಿಕ್ಷಕರಾದ ಕೆ. ಚಂದ್ರಪ್ಪ, ಟಿಸಿಯಾದ ರಾಜಶೇಖರ್, ವಿವಿಧ ಘಟಕಗಳ ಕೃಷ್ಣಕುಮಾರ್ ಇತರರು ಭಾಗವಹಿಸಿದ್ದರು.



ಕೌಶಲ, ಮಾನಸಿಕ ಒತ್ತಡ ನಿವಾರಣೆ ಕುರಿತು ಉಪನ್ಯಾಸ

ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಭಯ ಬೇಡ

• **ದೊಡ್ಡಬಳ್ಳಾಪುರ:** ಪರೀಕ್ಷೆಯು ವಿದ್ಯಾರ್ಥಿಗಳ ಸಾಮರ್ಥ್ಯ ಪ್ರದರ್ಶಿಸಲು ಸಿಕ್ಕಿರುವ ಒಂದು ಉತ್ತಮ ಅವಕಾಶ. ಆದ್ದರಿಂದ ಯಾವ ವಿದ್ಯಾರ್ಥಿಗಳಿಗೂ ಪರೀಕ್ಷೆ ಭಯ ಬೇಡ ಎಂದು ಕನ್ನಡ ವೈದ್ಯ ಬರಹಗಾರರ ಸಮಿತಿಯ ಅಧ್ಯಕ್ಷೆ ಡಾ.ಇಂದಿರಾ ತಿಳಿಸಿದರು.

ನಗರದ ಸರ್ಕಾರಿ ಡಾ.ಬಿ.ಆರ್ ಅಂಬೇಡ್ಕರ್ ಬಾಲಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಯದಲ್ಲಿ ವಿಶ್ವಜ್ಞಾನಿ ಸೇವಾ ಟ್ರಸ್ಟ್ ನಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯುವ ಕೌಶಲ ಮತ್ತು ಮಾನಸಿಕ ಒತ್ತಡ ನಿವಾರಣೆ ಎಂಬ ವಿಷಯ ಕುರಿತು ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಬದುಕಿನಲ್ಲಿ ಅನೇಕ ಕಷ್ಟವನ್ನು ಎದುರಿಸಿ ಸಾಧನೆ ಮಾಡಿದ ಸಾಧಕರಿದ್ದಾರೆ. ಛಲ ಬಿಡದೇ ಸಾಧನೆ ಮಾಡಿರುವ ವ್ಯಕ್ತಿಗಳೇ ನಮಗೆ ಸ್ಫೂರ್ತಿ ಮತ್ತು ಆದರ್ಶ ಆಗಬೇಕಾಗಿದೆ ಎಂದರು.

ಪರೀಕ್ಷೆ ಬಗ್ಗೆ ನಕಾರಾತ್ಮಕ ಆಲೋಚನೆಗಳಿಂದ ದೂರವಿದೆ. ಸಕಾರಾತ್ಮಕ ಆಲೋಚನೆ ಮಾಡುವುದರಿಂದ ಭಯ ತನ್ನಷ್ಟಕ್ಕೆ ತಾನೇ ಕಡಿಮೆಯಾಗುತ್ತದೆ. ಪರೀಕ್ಷೆಯನ್ನು ಭಯವಿಲ್ಲದೆ, ಪೂರ್ಣ ಆತ್ಮವಿಶ್ವಾಸದಿಂದ ಮತ್ತು ಸಂತೋಷದಿಂದ ಬರೆಯಬೇಕು. ವಿದ್ಯಾರ್ಥಿಗಳನ್ನು ಶೈಕ್ಷಣಿಕ ಕಾರ್ಯಕ್ಷಮತೆ ಉತ್ತಮಗೊಳ್ಳುತ್ತದೆ. ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ ಎಂದು ಹೇಳಿದರು.

ಅರಳುಮಲ್ಲಿಗೆ ಬಾಗಿಲು ಸರ್ಕಾರಿ ಪ್ರೌಢಶಾಲೆ ಹಿರಿಯ ಶಿಕ್ಷಕ ಎಚ್.ಎನ್.ಪ್ರಕಾಶ್ ಮಾತನಾಡಿ, ವಿದ್ಯಾರ್ಥಿಗಳು ಶಾಲೆಯಲ್ಲಿ



ಪಾಠವನ್ನು ಏಕಾಗ್ರತೆ ಕೇಳಬೇಕು. ಪಠ್ಯಪುಸ್ತಕವನ್ನು ಶ್ರದ್ಧೆಯಿಂದ ಓದಬೇಕೆಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಆತ್ಮವಿಶ್ವಾಸ ಬೆಳೆಸಿಕೊಂಡು ಕಠಿಣ ಪರಿಶ್ರಮ ಮತ್ತು ಸತತ ಅಭ್ಯಾಸ ಮಾಡಿದರೆ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಸಾಧ್ಯ. ಪರೀಕ್ಷೆ ಬಗ್ಗೆ ಯಾವುದೇ ಆತಂಕ ಮತ್ತು ಭಯ ಪಡಬಾರದು. ಹಬ್ಬದ ಆಚರಣೆ ಮಾದರಿಯಲ್ಲಿ ಪರೀಕ್ಷೆಯನ್ನು ಸಂತಸದಿಂದ ಎದುರಿಸಬೇಕು ಎಂದರು.

ವಿಶ್ವಜ್ಞಾನಿ ಸೇವಾ ಟ್ರಸ್ಟ್ ಅಧ್ಯಕ್ಷ ಪಿ.ನಾರಾಯಪ್ಪ, ಕಾರ್ಯದರ್ಶಿ ರಾಜೇಂದ್ರ, ಖಜಾಂಚಿ ಎಂ.ನಾರಾಯಣಪ್ಪ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಪಿ.ಗೋವಿಂದರಾಜು, ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರಾದ ರಾಧಾಮಣಿ, ಶಿವಪ್ಪ, ರೂಬಿಯಾ, ನರಸಪ್ಪ, ಸತೀಶ್ ಮುಂತಾದವರಿದ್ದರು.

ನ್ಯಾಯಾಲಯದ ಆದೇಶ ಉಲ್ಲಂಘನೆ: ಜಮೀನು ತೆರವಿಗೆ ಖಂಡನೆ

ರೈತರ ಮೇಲೆ ಅರಣ್ಯ ಇಲಾಖೆ ದೌರ್ಜನ್ಯ

• **ಕೋಲಾರ:** ಸರ್ಕಾರ ಹಾಗೂ ನ್ಯಾಯಾಲಯವು 3 ಎಕರೆಯೊಳಗೆ ಇರುವ ಪಟ್ಟ ಜಮೀನುಗಳ ರೈತರನ್ನು ಒಕ್ಕಲೆಬ್ಬಿಸಬಾರದೆಂಬ ಅಧಿಕೃತ ಆದೇಶವನ್ನು ಧಿಕ್ಕರಿಸಿ ಅರಣ್ಯ ಇಲಾಖೆಯ ಅಧಿಕಾರಿಗಳು ಸರ್ವಾಧಿಕಾರಿ ಧೋರಣೆ ಅನುಸರಿಸಿದ್ದು ಖಂಡನೀಯ ಭೂ ಸಂತ್ರಸ್ತರ ಹೋರಾಟ ಸಮಿತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಆರ್. ಶ್ರೀನಿವಾಸ್ ಪ್ರತಿಪಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 2015ರಲ್ಲಿ ಅರಣ್ಯ ಒತ್ತುವರಿ ಮತ್ತು ಪಟ್ಟ ಜಮೀನು ಸೇರಿ ಮೂರು ಎಕರೆಗಿಂತ ಕಡಿಮೆ ಇದ್ದರೆ ಅರಣ್ಯ ಇಲಾಖೆಯು ಒಕ್ಕಲೆಬ್ಬಿಸಬಾರದು ಎಂಬ ಸ್ಪಷ್ಟ ಆದೇಶವಿದ್ದರೂ ಸಹ ಒಂದು ಎಕರೆ ಇರುವವರನ್ನು ಬಿಡದಂತೆ ರೈತರ ಬೆಳೆ ನಾಶಪಡಿಸಿ ರಾತ್ರೋ ರಾತ್ರಿ ಬಡಪಾಯಿ ರೈತರಿಗೆ ನೂರಾರು ಸಂಖ್ಯೆಯಲ್ಲಿ ಪೊಲೀಸ್ ಇಲಾಖೆಯವರೊಂದಿಗೆ ಸೇರಿಕೊಂಡು ದೌರ್ಜನ್ಯದಿಂದ ಕಸಿದು ಕೊಂಡಿದೆ. ಇದಕ್ಕೆ ಕಾರಣರಾದ ಜಿಲ್ಲಾ ಅರಣ್ಯಾಧಿಕಾರಿಗಳನ್ನು ಏಕೆ ಅಮಾನತ್ತು ಮಾಡಬಾರದು ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರವು ಕಳೆದ 1924 ರಿಂದ 51ರವರೆಗೆ ಕಿರು ಅರಣ್ಯ ಪ್ರದೇಶಗಳ ನೋಟೀಫಿಕೇಷನ್ ಜಿಲ್ಲಾಧಿಕಾರಿಗಳ ಮೂಲಕ ಜಾರಿ ಮಾಡಲಾಗಿತ್ತು. ಅದರಂತೆ ಕೆಲವು ಜಿಲ್ಲೆಗಳಲ್ಲಿ ಇದು ಜಾರಿಯಾಗಿದೆ. ಇವು 3 ರಿಂದ 5ವರ್ಷಕ್ಕೆ ಮಾತ್ರ ಸೀಮಿತಗೊಳಿಸಿದೆ. ಅಂತಹ



ನೋಟಿಫಿಕೇಷನ್‌ಗಳು ಹಾಗೆಯೇ ಇದೆ. ಅವುಗಳಿಗೆ ಸಂಬಂಧ ಪಟ್ಟ ಯಾವುದೇ ದಾಖಲೆಗಳು ಅರಣ್ಯ ಇಲಾಖೆಯ ಬಳಿ ಇರುವುದಿಲ್ಲ ಎಂದರು.

ರೈತರಿಂದ ಕಸಿದು ಕೊಂಡಿರುವ ಜಮೀನುಗಳಿಗೆ ಅರಣ್ಯ ಇಲಾಖೆ ಬಳಿ ಯಾವುದೇ ದಾಖಲೆಗಳಿಲ್ಲ. ಕಂದಾಯ ಇಲಾಖೆಯ ನಕಾಶೆಗಳಲ್ಲಿ, ಖಾತೆಗಳಲ್ಲಿ, ಪಹಣಿಗಳಲ್ಲಿ ಯಾವುದೇ ದಾಖಲೆಗಳು ಅರಣ್ಯ ಇಲಾಖೆಯ ಹೆಸರಿನಲ್ಲಿ ಇಲ್ಲ ಎಂದರು.

ಕಂದಾಯ ಇಲಾಖೆಯು ಭೂಮಿಯನ್ನು ಅರಣ್ಯ ಇಲಾಖೆಗೆ ನೀಡಿರುವಂತ ದಾಖಲೆಗಳು ಯಾವುಂದು ಇಲ್ಲ. ಅವರ ಬಳಿ ಯಾವುದಾದರೂ ದಾಖಲೆಗಳು ಇದ್ದರೆ ಸಾಬೀತುಪಡಿಸಲಿ. ಮಹಾರಾಜರು ಅರಣ್ಯ ಇಲಾಖೆಗೆ ಅಭಿವೃದ್ಧಿಪಡಿಸಲು ಕಳೆದ 84-85 ವರ್ಷದ ಹಿಂದೆ ನೀಡಿದ್ದ ಭೂಮಿಯ ನೋಟಿಫಿಕೇಷನ್ ರದ್ದಾಗಿದೆ. ಕಂದಾಯ ಇಲಾಖೆಯ ಮೂಲಕ ಹಂಚಿಕೆಯಾಗಿದ್ದರೂ ಸಹ ಈಗಾ ಅದನ್ನು ಹಿಡಿದುಕೊಂಡು ಅರಣ್ಯ ಇಲಾಖೆಗೆ ಮಹಾರಾಜರು ನೀಡಿದ್ದರು ಎಂದು ಸರ್ಕಾರವನ್ನು ಮತ್ತು ರೈತರನ್ನು ಯಾಮಾರಿಸುತ್ತಿದ್ದಾರೆ ಎಂದರು.

ಕೋಲಾರದ ಯಾವ ರೈತರ ಜಮೀನನ್ನು ಎಸ್‌ಐಟಿ ತಂಡಕ್ಕೆ ಒಳಪಡುವುದಿಲ್ಲ. ಯಾವ ರೈತರು ಸಹ ಅರಣ್ಯ ಇಲಾಖೆಯ ಒಂದಿಂಚು ಭೂಮಿಯನ್ನು ಒತ್ತುವರಿ ಮಾಡಿಲ್ಲ. ಬರಡು ಜಿಲ್ಲೆಯ ರೈತರಿಗೆ ಮಂಜೂರಾತಿ ಮಾಡಿರುವ ಜಮೀನು ವಾಪಸ್ ಪಡೆಯಲು ಯಾರಿಗೂ ಅಧಿಕಾರವಿಲ್ಲ. ಈಗಾಗಲೇ ಎಂಎಲ್‌ಸಿ ಎಂ.ಎಲ್.ಅನಿಲ್ ಕುಮಾರ್ ಅಧಿವೇಶದಲ್ಲಿ ಪ್ರಸ್ತಾಪಿಸಿ ಅರಣ್ಯ ಇಲಾಖೆ ನೀಡಿರುವ ದಾಖಲೆಗಳಲ್ಲಿ ಯಾವುದೇ ವಾಸ್ತವಾಂಶವಿಲ್ಲ ಎಂದಿದ್ದಾರೆ ಎಂದರು. ಗೋಷ್ಠಿಯಲ್ಲಿ ಡಿ.ಪ್ರಕಾಶ್, ಹಾಗೂ ಮಂಜುನಾಥ್, ಡಾ.ಗೋವಿಂದ್ ಹಾಗೂ ನವೀನ್ ಮಾತನಾಡಿದರು. ಕೆಪಿಆರ್‌ಎಸ್ ಸೂರಿ ಮತ್ತು ವೆಂಕಟೇಶ್ ಉಪಸ್ಥಿತರಿದ್ದರು.

ಅಡಿಗಾಸ್‌ನಿಂದ ಕೈಲಾಸ ಮಾನಸ ಸರೋವರ ಯಾತ್ರೆ

• **ಬೆಂಗಳೂರು:** ನೀವು ಭವ್ಯ ದಿವ್ಯ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಮಾಡಲು ಆಲೋಚಿಸುತ್ತಿದ್ದೀರಾ? ಹಾಗಾದರೆ ಇಲ್ಲಿದೆ ಸಿಹಿ ಸುದ್ದಿ! ಕೇಂದ್ರ ಸರ್ಕಾರದ 'ಅನುಭವಿ ಸೇವಾ ಪೂರೈಕೆದಾರ' ಎಂಬ ಮಾನ್ಯತೆ ಗಳಿಸಿರುವ ಅಡಿಗಾಸ್ ಯಾತ್ರಾ ಟ್ರಾವೆಲ್ ಸಂಸ್ಥೆಯು ಈ ಯಾತ್ರೆಯನ್ನು ಆಯೋಜಿಸಿದೆ.

ಕೈಲಾಸ ಮಾನಸ ಸರೋವರ ಯಾತ್ರೆ, 2026ರ ಮೇ ತಿಂಗಳಿನಿಂದ ಆರಂಭವಾಗುತ್ತದೆ. ವಿಮಾನ ಮತ್ತು ಹೆಲಿಕಾಪ್ಟರ್ ಮೂಲಕ ಪ್ರಯಾಣ ಕಲ್ಪಿಸಿರುವುದರಿಂದ 10 ದಿನಗಳಲ್ಲಿ ಸುಲಭ ಮತ್ತು ಸುರಕ್ಷಿತ ಯಾತ್ರೆ ಕೈಗೊಳ್ಳಬಹುದು. ಭಾರತದ ಗಡಿಯಿಂದ 50 ಕಿಲೋಮೀಟರ್ ದೂರದಲ್ಲಿ ಚೀನಾ-ಟಿಬೆಟ್ ಗಡಿಯನ್ನು ದಾಟಿದರೆ ಕೈಲಾಸ ಮಾನಸ ಸರೋವರಕ್ಕೆ ತಲುಪಬಹುದು.

ಬೆಂಗಳೂರಿನಿಂದ ಲಖನೌ ತನಕ ವಿಮಾನದಲ್ಲಿ ಪ್ರಯಾಣ: ಲಖನೌದಿಂದ ನೇಪಾಳ ಗಂಝ್‌ಗೆ 180 ಕಿಲೋಮೀಟರ್ ತನಕ ರಸ್ತೆ ಪ್ರಯಾಣ ಮಾಡಿ ಮೊದಲ ದಿನ ರಾತ್ರಿ ಅಲ್ಲಿ ತಂಗಲಾಗುವುದು. ಎರಡನೇ ದಿನ ನೇಪಾಳ ಗಂಜ್‌ನಿಂದ ಸೆಮಿಕೋಟ್ ತನಕ ವಿಮಾನ ಪ್ರಯಾಣ. ಸೆಮಿಕೋಟ್‌ನಿಂದ ಟಿಬೆಟ್-ನೇಪಾಳ ಗಡಿ ಭಾಗದ ಹಿಲ್ಸಾ ಎಂಬಲ್ಲಿಗೆ ಹೆಲಿಕಾಪ್ಟರ್ ಮೂಲಕ ಯಾತ್ರೆ. ಹೀಗೆ ಲಖನೌದಿಂದ ಟಿಬೆಟ್-ನೇಪಾಳ ಗಡಿಭಾಗಕ್ಕೆ ಒಂದೇ ದಿನದಲ್ಲಿ ತಲುಪಲಾಗುವುದು.

ಹಿಲ್ಸಾ ಬಿಟ್ಟ ನಂತರ ಎರಡನೇ ರಾತ್ರಿ ಪುರಾಂಗ್ ಎಂಬಲ್ಲಿ ಪ್ರವಾಸಿಗರು ವಾಸ್ತವ್ಯ ಹೂಡುತ್ತಾರೆ. ಅಲ್ಲಿನ ಹವಾಮಾನಕ್ಕೆ ಹೊಂದಿಕೊಳ್ಳಲು ಮತ್ತೊಂದು ದಿನ ಅಲ್ಲಿಯೇ ತಂಗಲಾಗುವುದು. ನಾಲ್ಕನೇ ದಿನ ಪುರಾಂಗ್‌ನಿಂದ ಪವಿತ್ರ ಮಾನಸ ಸರೋವರಕ್ಕೆ ಪ್ರಯಾಣ. ಇದು ಅತಿ ಎತ್ತರ ಪ್ರದೇಶದಲ್ಲಿರುವ ಸಿಹಿ ನೀರಿನ ಸರೋವರ ಆಗಿದೆ. ಕೈಲಾಸ ಪರ್ವತದ ದಕ್ಷಿಣ ಭಾಗದಲ್ಲಿದೆ. ಅಲ್ಲಿ ಒಂದು ರಾತ್ರಿ ಪ್ರವಾಸಿಗರು ತಂಗುತ್ತಾರೆ. ಮಾನಸ ಸರೋವರದ ಪಕ್ಕದಲ್ಲೇ ರಾಕ್ಷಸ ಸರೋವರ್ ಎಂಬ ಉಪ್ಪಿನ ನೀರಿನ ಸರೋವರವಿದೆ. ಇದನ್ನೆಲ್ಲ ವೀಕ್ಷಿಸಿದ ಬಳಿಕ ಕೈಲಾಸ ಪರ್ವತದ ಬುಡದಲ್ಲಿರುವ ದಾರ್ಚೆನ್ ಎಂಬಲ್ಲಿಗೆ ತೆರಳಿ ವಾಸ್ತವ್ಯ ಮಾಡಲಾಗುವುದು.

ಬಳಿಕ ಮೂರು ದಿನಗಳ ಕೈಲಾಸ ಪರ್ವತದ ಪರಿಕ್ರಮ ಆರಂಭವಾಗುತ್ತದೆ. ಪರಿಕ್ರಮದ ಮೊದಲ ದಿನ ಕೈಲಾಸ ಪರ್ವತದ ಪ್ರವೇಶ ಸ್ಥಳವಾದ ಯಮದ್ವಾರದ ತನಕ ರಸ್ತೆ ಮಾರ್ಗದಲ್ಲಿ ವಾಹನಗಳಲ್ಲಿ ತೆರಳಲಾಗುತ್ತದೆ. ಯಮದ್ವಾರದಿಂದ ದೇರಾಪುಕ್ ತನಕ 12ಕಿಲೋಮೀಟರ್ ನಡಿಗೆ ಇರುತ್ತದೆ. ದೇರಾಪುಕ್‌ನಲ್ಲಿ ರಾತ್ರಿ ವಾಸ್ತವ್ಯಕ್ಕೆ ವ್ಯವಸ್ಥೆ. ದೇರಾಪುಕ್‌ನಿಂದ ಎರಡನೇ ದಿನದ ಪರಿಕ್ರಮ ಜುತುಲ್‌ಪುಕ್ ತನಕ ಪ್ರಯಾಣ ಬೆಳೆಸಬೇಕಾಗುತ್ತದೆ. ಮೂರನೇ ದಿನ ಮತ್ತೆ ದಾರ್ಚೆನ್‌ಗೆ ತಲುಪಲಾಗುತ್ತದೆ. ಅಲ್ಲಿಗೆ ಕೈಲಾಸ ಪರ್ವತದ ಪರಿಕ್ರಮ ಮುಕ್ತಾಯವಾಗುತ್ತದೆ.

18-70 ವರ್ಷ ವಯೋಮಾನದವರು ಕೈಲಾಸ ಮಾನಸ ಸರೋವರ ಯಾತ್ರೆ ಮಾಡಬಹುದು. ಪಾಸ್‌ಪೋರ್ಟ್ ಇರಬೇಕು. ಕಳೆದ 32 ವರ್ಷಗಳಿಂದಲೂ 3ಲಕ್ಷಕ್ಕೂ ಹೆಚ್ಚು ಪ್ರವಾಸಿಗರಿಗೆ ಪ್ರವಾಸ ಕಾರ್ಯಕ್ರಮವನ್ನು ಅಡಿಗಾಸ್ ಆಯೋಜಿಸಿದೆ.

ಸಸ್ಯಾಹಾರಿ ಊಟೋಪಚಾರ, ನುರಿತ ಮಾರ್ಗದರ್ಶನ, ಡೀಲಕ್ಸ್ ಬಸ್, ಸ್ಟ್ಯಾಂಡರ್ಡ್ ರೂಮ್, ಟ್ರಾವೆಲ್ ವಿಮೆಯನ್ನುಒದಗಿಸಲಾಗುತ್ತಿದೆ. ಹೆಚ್ಚಿನ ವಿವರಗಳಿಗೆ ಮೊಬೈಲ್- 70222 59008, 9449478944 /080-26616678 ಹಾಗೂ ವೆಬ್‌ಸೈಟ್ www.adigasyatranews.com ಸಂಪರ್ಕಿಸಬಹುದೆಂದು ನಿರ್ದೇಶಕಿ ಆಶಾ ಅಡಿಗ ತಿಳಿಸಿದ್ದಾರೆ.

124 ಬಾಂಗ್ಲಾದೇಶಿಗರ ವಶ : ಪೊಲೀಸರ ಬೃಹತ್ ಕಾರ್ಯಾಚರಣೆ

ವಿದೇಶಿ ಅಕ್ರಮ ವಾಸಿಗಳ ಪತ್ತೆ ಚುರುಕು

• **ಬೆಂಗಳೂರು:** ನಗರದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಲು ಪೊಲೀಸ್ ಇಲಾಖೆಯು ಬೃಹತ್ ಕಾರ್ಯಾಚರಣೆ ಹಮ್ಮಿಕೊಂಡಿದ್ದು, ಶುಕ್ರವಾರ ಒಂದೇ ದಿನ 124 ಬಾಂಗ್ಲಾದೇಶಿ ನಾಗರಿಕರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ನಗರಪೊಲೀಸ್ ಆಯುಕ್ತರಸೂಚನೆಯಮೇರೆಗೆಕಳೆದ ಕೆಲವು ದಿನಗಳಿಂದ ನಗರದಾದ್ಯಂತ ವಿಶೇಷ ತಪಾಸಣೆ ನಡೆಸಲಾಗುತ್ತಿದೆ. ಈ ನಿರಂತರ ಕಾರ್ಯಾಚರಣೆಯ ಫಲವಾಗಿ ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಒಟ್ಟು 200 ವಿದೇಶಿ ಪ್ರಜೆಗಳನ್ನು ಈವರೆಗೆ ವಶಕ್ಕೆ ಪಡೆಯಲಾಗಿದೆ.

ಮುಂಜಾನೆ ನಡೆದ ದಿಢೀರ್ ದಾಳಿ: ಮಾ.6 ರಂದು ಮುಂಜಾನೆ ಕೇಂದ್ರ ಅಪರಾಧ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನೊಳಗೊಂಡ 4 ವಿಶೇಷ ತಂಡಗಳು ನಗರದ ಕಾಡುಗೋಡಿ ಮತ್ತು ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾಳಿ ನಡೆಸಿದ್ದವು. ಈ ವೇಳೆ ಅಕ್ರಮವಾಗಿ ಶೆಡ್‌ಗಳನ್ನು ನಿರ್ಮಿಸಿಕೊಂಡು ವಾಸವಿದ್ದ 48 ಪುರುಷರು, 42 ಮಹಿಳೆಯರು ಮತ್ತು 34 ಮಕ್ಕಳು ಸೇರಿದಂತೆ ಒಟ್ಟು 124 ಬಾಂಗ್ಲಾದೇಶಿ ಪ್ರಜೆಗಳನ್ನು ಪತ್ತೆಹಚ್ಚಿ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.





ಇಲಾಖೆಯಿಂದ ಗಡಿಪಾರಿಗೆ ಸಿದ್ಧತೆ

ವಶಕ್ಕೆ ಪಡೆದ ಪ್ರಜೆಗಳನ್ನು ಸದ್ಯ ವಿಚಾರಣೆಗೆ ಒಳಪಡಿಸಲಾಗಿದೆ. ಇವರುಗಳನ್ನು ಅಧಿಕೃತವಾಗಿ ಅವರ ದೇಶಕ್ಕೆ ವಾಪಸ್ ಕಳುಹಿಸುವ ಪ್ರಕ್ರಿಯೆಗಾಗಿ ಮುಂದಿನ ಕಾನೂನು ಕ್ರಮಕ್ಕೆ ಫಾರಿನ್ ರೀಜನಲ್ ರಿಜಿಸ್ಟ್ರೇಷನ್ ಆಫೀಸ್ (ಎಫ್‌ಆರ್‌ಆರ್‌ಓ) ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ. ಈ ವಿಶೇಷ ಕಾರ್ಯಾಚರಣೆಯನ್ನು ಪೊಲೀಸ್ ಇಲಾಖೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಬಿಎ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಕಾರದೊಂದಿಗೆ ಯಶಸ್ವಿಯಾಗಿ ನಿರ್ವಹಿಸಿದೆ. ನಗರದಲ್ಲಿ ಇಂತಹ ಅಕ್ರಮ ವಲಸಿಗರ ಪತ್ತೆ ಕಾರ್ಯವು ಮುಂದುವರಿಯಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ವಿಮಾನ ಹೈಜಾಕ್ ಅಣಕು ಪ್ರದರ್ಶನ

ಪ್ರಯಾಣಿಕರ ಸುರಕ್ಷತೆ ಕುರಿತು ಅರಿವು

• **ದೇವನಹಳ್ಳಿ:** ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ವಿಮಾನ ನಿಲ್ದಾಣದಲ್ಲಿ ವಿಮಾನ ಹೈಜಾಕ್ ಅಣುಕು ಪ್ರದರ್ಶನವನ್ನು ಯಶಸ್ವಿಯಾಗಿ ನಡೆಸಿತು.

ಅಣುಕು ಕಾರ್ಯಾಚರಣೆಯಂತೆ ರಾಯ್ಪುರ ವಿಮಾನ ನಿಲ್ದಾಣದಿಂದ ಮಂಗಳೂರು ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುತ್ತಿದ್ದ ಅಪೆಕ್ಸ್ ವಿಸ್ಟಾ ಏರ್ಲೈನ್ಸ್‌ಗೆ ಸೇರಿದ ಫ್ಲೈಟ್ ಸಂಖ್ಯೆ (ಎಕ್ಸ್‌ವಿ-ಎಬಿಸಿ) ಏರ್‌ಬಸ್ 321 ವಿಮಾನವನ್ನು ಅಪಹರಣಕಾರರು ಅಪಹರಿಸಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಲ್ದಾಣದಲ್ಲಿ ಇಳಿಸಲು ಸೂಚಿಸುವರು. ಅಪಹರಣಕಾರರು ವಿವಿಧ ಬೇಡಿಕೆಗಳು ಈಡೇರಿಸುವಂತೆ ಸಿಬ್ಬಂದಿ ಮುಂದೆ ಬೇಡಿಕೆ ಇಟ್ಟಿದ್ದರು. ಅದನ್ನು ಒಪ್ಪಿಸುವ ಹಾಗೂ ತುರ್ತು ಪ್ರತಿಕ್ರಿಯೆ ಕಾರ್ಯಾಚರಣೆಯ ಭಾಗವಾಗಿ, ಮುನ್ನೆಚ್ಚರಿಕೆ ಕ್ರಮವಾಗಿ ವಿಮಾನ ನಿಲ್ದಾಣದ ಎರಡೂ ರನ್‌ವೇಯನ್ನು ವಿಮಾನ ಸಂಚಾರಕ್ಕಾಗಿ ತಾತ್ಕಾಲಿಕವಾಗಿ ಮುಚ್ಚಲಾಗಿತ್ತು. ಹೈಜಾಕ್ ಆಗಿದ್ದ ವಿಮಾನದಲ್ಲಿ 30 ಪ್ರಯಾಣಿಕರು ಮತ್ತು 5 ವಿಮಾನ ಸಿಬ್ಬಂದಿ ಇದ್ದರು.

ದುರದೃಷ್ಟವಶಾತ್, ಅಪಹರಣಕಾರರು ಒಬ್ಬ ಪ್ರಯಾಣಿಕನನ್ನು ಕೊಂದಿದ್ದರು. ಉಳಿದ



ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ದೃಢಪಟ್ಟಿದೆ. ವಿಮಾನ ನಿಲ್ದಾಣದ ತುರ್ತು ನಿರ್ವಹಣಾ ಸಮಿತಿಯು ಅಪಹರಣದ ಪರಿಸ್ಥಿತಿಯನ್ನು ಬಗೆಹರಿಸಲು ವಿವಿಧ ಭದ್ರತಾ ಏಜೆನ್ಸಿಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಅಪಹರಣಕಾರರೊಂದಿಗೆ ಸಂವಹನ ನಡೆಸಲು ಮತ್ತು ಅವರ ಬೇಡಿಕೆ ಬಗ್ಗೆ ಮಾತುಕತೆ ನಡೆಸಲು ಸಂಧಾನಕಾರರನ್ನು ನಿಯೋಜಿಸಲಾಗಿತ್ತು. ಇದೀಗ ಅಪಹರಣಕಾರರು ಪ್ರಯಾಣಿಕರನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿದ್ದಾರೆ ಎಂದು ನಾವು ಖಚಿತಪಡಿಸುತ್ತೇವೆ. ಈ ಘಟನೆ ಕುರಿತು ಸಮಗ್ರ ತನಿಖೆ ನಡೆಸಲು ತನಿಖಾ ತಂಡವನ್ನು ನಿಯೋಜಿಸಲಾಗಿದೆ.

7ನೇ ದಿನವೂ ಕಡಿಮೆಯಾಗದ ಯುದ್ಧದ ತೀಕ್ಷ್ಣತೆ

ಇರಾನಿ ಡ್ರೋನ್ ವಾಹಕ ನೌಕೆ ಮೇಲೆ ಅಮೆರಿಕ ದಾಳಿ

ಟೆಹ್ರಾನ್: ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳ ವಿರುದ್ಧ ಇರಾನ್ ಮತ್ತೊಂದು ಪ್ರತೀಕಾರದ ದಾಳಿಯನ್ನು ಪ್ರಾರಂಭಿಸಿದಾಗ ಇಸ್ರೇಲಿ ಯುದ್ಧ ವಿಮಾನಗಳು ಶುಕ್ರವಾರ ಬೈರುತ್ ಮತ್ತು ಟೆಹ್ರಾನ್ ಮೇಲೆ ದಾಳಿ ನಡೆಸಿದವು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನೊಂದಿಗಿನ ಮಾತುಕತೆಗಳನ್ನು ತಳ್ಳಿಹಾಕಿ ಅದರ ಬೇಷರತ್ತಾದ ಶರಣಾಗತಿಗೆ ಕರೆ ನೀಡಿದ್ದರಿಂದ, ಏಳನೇಯ ದಿನವೂ ಯುದ್ಧದ ತೀಕ್ಷ್ಣತೆ ಕಡಿಮೆಯಾದಂತ್ತಿಲ್ಲ. ಯುದ್ಧವು ಮಧ್ಯಪ್ರಾಚ್ಯ ಮತ್ತು ಅದರಾಚೆಗಿನ ಹನ್ನೆರಡಕ್ಕೂ ಹೆಚ್ಚು ದೇಶಗಳ ಮೇಲೆ ಪರಿಣಾಮ ಬೀರಿದೆ. ದೇಶದ ನೌಕಾಪಡೆಯ ವಿರುದ್ಧ ನಿರಂತರ ಕಾರ್ಯಾಚರಣೆಯನ್ನು ನಡೆಸಿದ್ದರಿಂದ ಸಮುದ್ರದಲ್ಲಿ ಇರಾನಿನ ಡ್ರೋನ್ ವಾಹಕ ನೌಕೆಯ ಮೇಲೆ ದಾಳಿ ನಡೆಸಿದೆ ಎಂದು ಅಮೆರಿಕ ಹೇಳಿದೆ. ಇರಾನಿನ ನೌಕಾಪಡೆಯ ಹಡಗನ್ನು ಅಮೆರಿಕ ಪಡೆಗಳು ಗುರುವಾರ ನಾಶಪಡಿಸಿವೆ ಎಂದು ಅಮೆರಿಕ ಸೆಂಟ್ರಲ್ ಕಮಾಂಡ್ ತಿಳಿಸಿದೆ.



ಸಮುದ್ರ ಮಧ್ಯೆ ಸಿಲುಕಿದ ತೈಲ ಪೂರೈಕೆಗೆ ವಿನಾಯಿತಿ

ಸಮುದ್ರದಲ್ಲಿ ಈಗಾಗಲೇ ಸಿಲುಕಿರುವ ತೈಲಕ್ಕೆ ಸಂಬಂಧಿಸಿದ ವ್ಯವಹಾರಗಳಿಗೆ ಮಾತ್ರ ಈ ಅನುಮತಿ ನೀಡಲಾಗಿದೆ. ಇರಾನ್ ಜಾಗತಿಕ ಇಂಧನವನ್ನು ಬಾಂಧಕವಾಗಿಸಲು ಮಾಡಿದ ಪ್ರಯತ್ನದಿಂದ ಉಂಟಾದ ಒತ್ತಡವನ್ನು ಈ ತಾತ್ಕಾಲಿಕ ಕ್ರಮ ಕಡಿಮೆ ಮಾಡುತ್ತದೆ ಎಂದು ಬೆಸೆಂಟ್ ಎಕ್ಸ್‌ನಲ್ಲಿ ಹೇಳಿದ್ದಾರೆ. ವರದಿಗಳ ಪ್ರಕಾರ ಭಾರತದ ಬಳಿ ಸುಮಾರು 25 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲ ಮತ್ತು ಅನಿಲ ಸಂಗ್ರಹ ಮಾತ್ರ ಇದೆ. ತೈಲದ ವಿಷಯಕ್ಕೆ ಬಂದರೆ, ಭಾರತ ತನ್ನ ಕಚ್ಚಾ ತೈಲದ ಸುಮಾರು ಶೇ.90ರಷ್ಟು ಆಮದು ಮಾಡಿಕೊಳ್ಳುತ್ತದೆ.

145 ದಶಲಕ್ಷ ಬ್ಯಾರೆಲ್ ರಷ್ಯಾ ತೈಲ ಭಾರತಕ್ಕೆ?

ವಾಣಿಜ್ಯ ಒಪ್ಪಂದಗಳು ಅಂತಿಮಗೊಂಡರೆ, ಸಮುದ್ರದಲ್ಲಿ ಪೂರೈಕೆಯಾಗದೆ ಉಳಿದಿರುವ ಸುಮಾರು 145 ಮಿಲಿಯನ್ ಬ್ಯಾರೆಲ್ ರಷ್ಯಾ ಕಚ್ಚಾ ತೈಲವನ್ನು ಭಾರತೀಯ ಬಂದರುಗಳಿಗೆ ಮರುನಿರ್ದೇಶಿಸಬಹುದು ಎಂದು ಕ್ಲೆಪರ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಸುಮಿತ್ ರಿಟೋಲಿಯಾ ಹೇಳಿದ್ದಾರೆ.

ಭಾರತಕ್ಕೆ ಲಾಭಗಳೇನು?

- ಸಾಕಷ್ಟು ತೈಲ ಸಿಗುವುದರಿಂದ ಇಂಧನ ಭದ್ರತೆ
- ತೈಲ ಬೆಲೆ ಏರಿಕೆ, ಸಾಗಣೆ ವೆಚ್ಚ ಮತ್ತು ಹಣದುಬ್ಬರದ ಒತ್ತಡ ಇಳಿಕೆ
- ಭಾರತದ ವಿದೇಶಿ ವಿನಿಮಯ ಖಾತೆ ಠೇವಣಿ ಮತ್ತು ವಿತ್ತೀಯ ಸ್ಥಿರತೆಯಲ್ಲಿ ಸುಧಾರಣೆ
- ಹೂಡಿಕೆದಾರರ ಆತ್ಮವಿಶ್ವಾಸ ಹೆಚ್ಚಳ
- ಅಮೆರಿಕ, ರಷ್ಯಾ ಮತ್ತು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಸಂಬಂಧ ಗಟ್ಟಿ

ತೈಲ ಬೆಲೆಗಳ ಹೆಚ್ಚಳಕ್ಕೆ ಕಾರಣ

ಯುದ್ಧವು ಈಗಾಗಲೇ ತೈಲ ಬೆಲೆಗಳ ಹೆಚ್ಚಳಕ್ಕೆ ಕಾರಣವಾಗಿದೆ, ಮತ್ತು ಕತಾರ್ ಇಂಧನ ಸಚಿವರು ಇದು ವಿಶ್ವದ ಆರ್ಥಿಕತೆಯನ್ನು ಕೆಳಗಿಳಿಸಬಹುದು ಎಂದು ಎಚ್ಚರಿಸಿದ್ದಾರೆ. ಕತಾರ್‌ನ ಅತಿದೊಡ್ಡ ದ್ರವೀಕೃತ ನೈಸರ್ಗಿಕ ಅನಿಲ ಸ್ಥಾವರದ ಮೇಲೆ ಇರಾನಿನ ಡ್ರೋನ್ ದಾಳಿಯ ನಂತರ ಯುದ್ಧವು ತಕ್ಷಣವೇ ಕೊನೆಗೊಂಡರೂ ಸಾಮಾನ್ಯ ರಫ್ತುಗಳನ್ನು ಪುನರಾರಂಭಿಸಲು ವಾರಗಳಿಂದ ತಿಂಗಳುಗಳವರೆಗೆ ತೆಗೆದುಕೊಳ್ಳಬಹುದು ಎಂದಿದ್ದಾರೆ.

ವಿಶ್ವ ಆರ್ಥಿಕತೆಯನ್ನು ಕೆಳಮಟ್ಟಕ್ಕೆ ತರಲಿದೆ

ಇರಾನ್‌ನೊಂದಿಗೆ ಹೆಚ್ಚುತ್ತಿರುವ ಸಂಘರ್ಷವು ಕೆಲವೇ ವಾರಗಳಲ್ಲಿ ಕೊಲ್ಲಿಯಿಂದ ಇಂಧನ ರಫ್ತುಗಳನ್ನು ಸ್ಥಗಿತಗೊಳಿಸಬಹುದು. ಜಾಗತಿಕ ಆರ್ಥಿಕ ಆಘಾತವನ್ನು ಉಂಟುಮಾಡಬಹುದು ಎಂದು ಕತಾರ್ ಎಚ್ಚರಿಸಿದೆ. ಇಂಧನ ಸಚಿವ ಸಾದ್ ಅಲ್-ಕಾಬಿ ಇದು ವಿಶ್ವದ ಆರ್ಥಿಕತೆಯನ್ನು ಕೆಳಮಟ್ಟಕ್ಕೆ ತರುತ್ತದೆ ಎಂದು ಎಚ್ಚರಿಸಿದ್ದಾರೆ. ಯುದ್ಧವು ಮುಂದುವರಿದರೆ, ಗಲ್ಫ್ ಇಂಧನ ಉತ್ಪಾದಕರು ರಫ್ತು ನಿಲ್ಲಿಸಬೇಕಾಗಬಹುದು. ಇದು ಕಚ್ಚಾ ತೈಲದ ಬೆಲೆಯನ್ನು ಬ್ಯಾರೆಲ್‌ಗೆ 150 ಡಾಲರ್‌ಗೆ ಹೆಚ್ಚಿಸಬಹುದು ಮತ್ತು ಅಂತಾರಾಷ್ಟ್ರೀಯ ತೈಲ ಮತ್ತು ಅನಿಲ ಮಾರುಕಟ್ಟೆಗಳಲ್ಲಿ ಗಲ್ಫ್ ರಾಷ್ಟ್ರಗಳು ಪ್ರಮುಖ ಪಾತ್ರ ವಹಿಸುವುದರಿಂದ ಜಾಗತಿಕ ಇಂಧನ ಪೂರೈಕೆಯನ್ನು ಅಡ್ಡಿಪಡಿಸಬಹುದು ಎಂದು ಕಾಬಿ ಹೇಳಿದರು.

ಒಪ್ಪಂದ ಮಾತಿಲ್ಲ

ಪುಟ ೧➡ ತೀವ್ರತೆ ಇನ್ನಷ್ಟು ಹೆಚ್ಚಾಗಲಿದೆ ಎಂದು ಅಮೆರಿಕ ಎಚ್ಚರಿಕೆ ನೀಡಿದೆ. ಇರಾನ್ ಸಹ ತನ್ನ ಪ್ರತಿದಾಳಿ ಮುಂದುವರಿಸಿದೆ. ಬಿ2 ಸ್ಟೆಲ್ತ್ ಬಾಂಬರ್ ಯುದ್ಧ ವಿಮಾನದಿಂದ 2000 ಪೌಂಡ್‌ನಷ್ಟು ಬಾಂಬ್‌ಗಳಿಂದ ದಾಳಿ ನಡೆಸಿ ಇರಾನ್ ಕ್ಷಿಪಣಿ ಉಡಾವಣಾ ವ್ಯವಸ್ಥೆಯನ್ನು ನಾಶ ಮಾಡಲಾಗಿದೆ.



ಶುಕ್ರವಾರ ಲೆಬನಾನ್ ಮೇಲೆ ಇಸ್ರೇಲ್ 11 ವೈಮಾನಿಕ ದಾಳಿಗಳನ್ನು ನಡೆಸಿದ್ದು, ದಾಳಿ ತೀವ್ರತೆಯನ್ನು ಹೆಚ್ಚಿಸಿದೆ.

ಹೊಸ ನಾಯಕನ ಆಯ್ಕೆಗೆ ಇರಾನ್ ಚರ್ಚೆ: ಹೊಸ ಸರ್ವೋಚ್ಚ ನಾಯಕನ ಆಯ್ಕೆಗಾಗಿ ನಾಯಕನ ಆಯ್ಕೆ ಸಮಿತಿ ಶುಕ್ರವಾರ ಸಭೆ ಸೇರಿ ಚರ್ಚಿಸಿದೆ.

ಯುಎಇ ಮೇಲೆ 9 ಕ್ಷಿಪಣಿ, 109 ಡ್ರೋನ್ ದಾಳಿ: ಒಟ್ಟು 9 ಖಂಡಾಂತರ ಕ್ಷಿಪಣಿಗಳನ್ನು ಧ್ವಂಸ ಮಾಡಿದ್ದೇವೆ. 112 ಡ್ರೋನ್‌ಗಳಲ್ಲಿ 109 ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ. ಉಳಿದ 3 ಡ್ರೋನ್‌ಗಳು ಗಡಿಯಲ್ಲಿ ನೆಲಕ್ಕಪ್ಪಳಿಸಿದ್ದವು ಎಂದು ಎಂದು ಯುಎಇ ರಕ್ಷಣಾ ಸಚಿವಾಲಯ ಶುಕ್ರವಾರ ತಿಳಿಸಿದೆ.

ಖಮೇನಿ ಬಂಕರ್‌ಗಳಿಗೆ ಹಾನಿ: ಖಮೇನಿ ಸಾವಿನ ಬಳಿಕವೂ ಇರಾನ್ ಅಧಿಕಾರಿಗಳು ಟೆಹ್ರಾನ್‌ನಲ್ಲಿರುವ ಅವರ ಭೂಗತ ಅಡಗುದಾಣಗಳನ್ನು ಬಳಸುತ್ತಿದ್ದು, ಅವುಗಳ ಮೇಲೆ 50 ಯುದ್ಧ ವಿಮಾನಗಳಿಂದ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ.

ಯುದ್ಧನೌಕೆಗಳ ಮೇಲೆ ಇಸ್ರೇಲ್ ದಾಳಿ

ಇಸ್ಲಾಮಿಕ್ ರಾಷ್ಟ್ರ ಇರಾನ್‌ನ ಡ್ರೋನ್ ದಾಳಿ ಸಾಮರ್ಥ್ಯದ ಐರಿಸ್ ಶಾಹಿದ್ ಬಘೇರಿ ಯುದ್ಧನೌಕೆಗಳ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿದೆ. ಇರಾನ್‌ನ ಹಲವು ವಾಯು ರಕ್ಷಣಾ ವ್ಯವಸ್ಥೆ ಮತ್ತು ಕ್ಷಿಪಣಿ ಉಡಾವಣಾ ವ್ಯವಸ್ಥೆಗಳನ್ನು ನಾಶಪಡಿಸಿದ್ದಾಗಿ ಇಸ್ರೇಲ್ ಹೇಳಿಕೊಂಡಿದೆ. ಇರಾನ್‌ನಲ್ಲಿ 1,230 ಸಾವು: ಇರಾನಿಯನ್ನರ ಸಾವಿನ ಸಂಖ್ಯೆ 1,230 ತಲುಪಿದೆ. ಲೆಬನಾನ್‌ನಲ್ಲಿ 120 ಮತ್ತು ಇಸ್ರೇಲ್‌ನಲ್ಲಿ 12 ಮಂದಿ ಮೃತಪಟ್ಟಿದ್ದಾರೆ.

ಅತಿ ದೊಡ್ಡ ರಷ್ಯಾ ತೈಲ ಖರೀದಿದಾರ ಭಾರತ

ಉಕ್ರೇನ್ ಮೇಲೆ ಮಾಸ್ಕೋ ದಾಳಿ ನಡೆಸಿದ ನಂತರ ರಷ್ಯಾ ಕಚ್ಚಾ ತೈಲದ ಅತಿ ದೊಡ್ಡ ಖರೀದಿದಾರರಲ್ಲಿ ಭಾರತ ಪ್ರಮುಖ ದೇಶವೆಂದು ಪರಿಗಣಿಸಲಾಗಿದೆ. ಅಮೆರಿಕವು ವ್ಯಾಪಾರ ಒಪ್ಪಂದದ ಒತ್ತಡ ಹಿನ್ನೆಲೆಯಲ್ಲಿ ಭಾರತ ಈ ವರ್ಷ ಆರಂಭದಿಂದ ರಷ್ಯಾ ತೈಲ ಖರೀದಿ ಕಡಿಮೆಗೊಳಿಸಿತ್ತು. ರಷ್ಯಾ ಮತ್ತು ಅಮೆರಿಕ ರಾಷ್ಟ್ರಗಳೊಂದಿಗೆ ಭಾರತ ಸಮತೋಲನದಲ್ಲಿ ವ್ಯವಹರಿಸುತ್ತಿದೆ.

ಖಮೇನಿ ಕೊಲ್ಲಲು ಬ್ಲೂ ಸ್ಪ್ಯಾರೋ ಕ್ಷಿಪಣಿ ಬಳಕೆ?

ಟೆಹ್ರಾನ್: ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಸಾವಿನ ಬಳಿಕ ಬ್ಲೂ ಸ್ಪ್ಯಾರೋ ಎಂಬ ಕ್ಷಿಪಣಿ ವಿಶ್ವದ ಗಮನಸೆಳೆಯುತ್ತಿದೆ. ಖಮೇನಿ ಅವರನ್ನು ಕೊಲ್ಲಲು ಅಮೆರಿಕ ಸೇನೆ ಬ್ಲೂ ಸ್ಪ್ಯಾರೋ ಕ್ಷಿಪಣಿಯನ್ನು ಬಳಸಿದೆ ಎಂದು ವರದಿಯಾಗಿದೆ.

ಫೆ.28ರಂದು ಇರಾನ್ ಕಾಲಮಾನ ಬೆಳಗ್ಗೆ 7.30ರ ವೇಳೆಗೆ ಇಸ್ರೇಲ್‌ನಿಂದ ಬ್ಲೂ ಸ್ಪ್ಯಾರೋ ಕ್ಷಿಪಣಿ ದಾಳಿ ನಡೆಸಲಾಗಿದೆ ಎಂದು ತಿಳಿದುಬಂದಿದೆ. ಬ್ಲೂ ಸ್ಪ್ಯಾರೋ, ಇಸ್ರೇಲಿ ನಿರ್ಮಿತ ಖಂಡಾಂತರ ಟಾರ್ಗೆಟ್ ಕ್ಷಿಪಣಿಯಾಗಿದೆ. ಇದನ್ನು ಇಸ್ರೇಲ್‌ನ ರಾಫೆಲ್ ಅಡ್ವಾನ್ಸ್ಡ್ ಡಿಫೆನ್ಸ್ ಸಿಸ್ಟಮ್ಸ್ ಕಂಪನಿ ಅಭಿವೃದ್ಧಿಪಡಿಸಿದೆ. ಸ್ಪ್ಯಾರೋ ಕ್ಷಿಪಣಿ ಸರಣಿಗೆ ಸೇರಿದ ಅತ್ಯಾಧುನಿಕ ಕ್ಷಿಪಣಿ ಇದಾಗಿದೆ. ಇವುಗಳಲ್ಲಿ ಬ್ಲ್ಯಾಕ್ ಸ್ಪ್ಯಾರೋ ಮತ್ತು ಸಿಲ್ವರ್ ಸ್ಪ್ಯಾರೋ ಎಂಬ ಆವೃತ್ತಿಗಳಿವೆ.

ಇದೇ ತಂತ್ರಜ್ಞಾನ ಬಳಸಲಿದೆ ಭಾರತ!

ಸ್ಪ್ಯಾರೋ ಕ್ಷಿಪಣಿಗಳಲ್ಲಿನ ತಂತ್ರಜ್ಞಾನ ಬಳಸಿರುವ ರಾಕ್ಸ್ ಮತ್ತು ಗೋಲ್ಡನ್ ಹಾರಿಜಾನ್ ಕ್ಷಿಪಣಿಗಳನ್ನು ಭಾರತೀಯ ವಾಯುಪಡೆ (ಐಎಎಫ್) ಪ್ರಸ್ತುತ ಪರೀಕ್ಷೆ ನಡೆಸುತ್ತಿದೆ. ಭಾರತವೂ ಸ್ಪ್ಯಾರೋ ಕ್ಷಿಪಣಿಗಳನ್ನು ಪರೀಕ್ಷೆ ನಡೆಸುವ ದಿನಗಳು ದೂರವಿಲ್ಲ.

ಬ್ಲೂ ಸ್ಪ್ಯಾರೋ ವಿಶೇಷತೆಗಳು

- ಎಫ್-15 ಅಥವಾ ಎಫ್-35ನಂತಹ ಯುದ್ಧ ವಿಮಾನ ಅತಿ ಎತ್ತರದಲ್ಲಿದ್ದಾಗ ಉಡಾವಣೆ.
- ರಾಕೆಟ್ ಬೂಸ್ಟರ್ ನೆರವಿನಿಂದ ವೇಗ ಪಡೆಯುವ ಕ್ಷಿಪಣಿ.
- ವಾಯು ಮಂಡಲದ ಮೇಲ್ಭಾಗ ಸಂಚರಿಸಿ ಖಂಡಾಂತರ ಪಥದಲ್ಲಿ ಮುನ್ನುಗ್ಗುತ್ತದೆ .
- ಮುಖ್ಯ ಕ್ಷಿಪಣಿಯಿಂದ ರೀ-ಎಂಟ್ರಿ ಭಾಗ ಬೇರ್ಪಡುವುದು.
- ಬೇರ್ಪಟ್ಟ ಭಾಗವು ಗುರಿಯತ್ತ ವೇಗದಲ್ಲಿ ಚಲಿಸುವುದು.

6.5 ಮೀ. ಉದ್ದ | **1,900** ಕೆ.ಜಿ. ಭಾರ | **2,000** ಕಿ.ಮೀ. ವ್ಯಾಪ್ತಿ

ಉಡಾವಣಾ ಯುದ್ಧ ವಿಮಾನ: ಎಫ್-15 ಈಗಲ್ ಅಥವಾ ಎಫ್-35ನಂತಹ ಯುದ್ಧ ವಿಮಾನಗಳು ಬ್ಲೂ ಸ್ಪ್ಯಾರೋ ಹೇಗೆ ದಾಳಿ ನಡೆಸುತ್ತದೆ?



ರಷ್ಯಾ ತೈಲ ಖರೀದಿಗೆ ಅಮೆರಿಕ ಸಹಮತ

ಹೊಸದಿಲ್ಲಿ: ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಏ.3ರವರೆಗೆ 30 ದಿನಗಳ ತಾತ್ಕಾಲಿಕ ವಿನಾಯಿತಿ ನೀಡಿದ್ದಾಗಿ ಅಮೆರಿಕದ ವಿತ್ತೀಯ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಶುಕ್ರವಾರ ಘೋಷಿಸಿದ್ದಾರೆ. ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆ ಜಾಗತಿಕ ತೈಲ ಮಾರುಕಟ್ಟೆಯಲ್ಲಿನ ಅಸ್ಥಿರತೆಯನ್ನು ಸರಿದೂಗಿಸುವ ಉದ್ದೇಶದಿಂದ ಭಾರತದ ಮೇಲಿನ ನಿರ್ಬಂಧಗಳನ್ನು ಅಮೆರಿಕ ಸಡಿಲಗೊಳಿಸಿದೆ.

ಹಾರ್ಮುಜ್ ಜಲಸಂಧಿಯ ಸಮೀಪ ಸುಮಾರು 145 ದಶಲಕ್ಷ ಬ್ಯಾರೆಲ್ ತೈಲ ಮತ್ತು ಅನಿಲ ಸಾಗಣೆ ಬಾಕಿಯಾಗಿದೆ. ಇದು ಪರ್ಷಿಯನ್ ಕೊಲ್ಲಿಯ ಕಿರಿದಾದ ಸಮುದ್ರ ಮಾರ್ಗವಾಗಿದ್ದು, ಭಾರತದ ಕಚ್ಚಾ ತೈಲ ಮತ್ತು ಅನಿಲ ಆಮದುಗಳ ಅರ್ಧದಷ್ಟು ಈ ಮಾರ್ಗದ ಮೂಲಕ ಸಾಗುತ್ತದೆ. ಅಮೆರಿಕ ಮತ್ತು ಇಸ್ರೇಲ್ ಯುದ್ಧ ಆರಂಭಿಸಿದ ಬಳಿಕ ಈ ಮಾರ್ಗದಿಂದ ಸಾಗಲು ಯತ್ನಿಸುವ ಹಡಗುಗಳ ಮೇಲೆ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿತ್ತು.

ಕಿರುಸುದ್ದಿ

ಎರಡನೇ ಮಗು ಪಡೆದ ದಂಪತಿಗೆ 25 ಸಾವಿರ ರೂ.

ಅಮರಾವತಿ: ರಾಜ್ಯದಲ್ಲಿ ಜನನ ಪ್ರಮಾಣವನ್ನು ಹೆಚ್ಚಿಸಲು ಎರಡನೇ ಮಗು ಪಡೆಯುವ ದಂಪತಿಗೆ 25,0000 ರೂ. ಪ್ರೋತ್ಸಾಹ ಧನ ನೀಡುವುದಾಗಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಘೋಷಿಸಿದ್ದಾರೆ. ವಿಧಾನಸಭೆಯನ್ನುದ್ದೇಶಿಸಿ ಮಾತನಾಡಿದ ನಾಯ್ಡು, ಆಂಧ್ರಪ್ರದೇಶದ ಒಟ್ಟು ಫಲವತ್ತತೆ ದರವನ್ನು (ಟಿಎಫ್ ಆರ್) ಪ್ರಸ್ತುತ 1.5ರಿಂದ 2.1ಕ್ಕೆ ಹೆಚ್ಚಿಸುವ ಗುರಿಯನ್ನು ಸರ್ಕಾರ ಹೊಂದಿದೆ.ಹೆರಿಗೆಯ ಸಮಯದಲ್ಲಿಯೇ ಎರಡನೇ ಮಗು ಅಥವಾ ಅದಕ್ಕಿಂತ ಹೆಚ್ಚಿನ ಮಗುವನ್ನು ಹೊಂದಿರುವ ಪೋಷಕರಿಗೆ ನಾವು 25,000 ರೂ.ಗಳನ್ನು ನೀಡುತ್ತೇವೆ ಎಂದಿದ್ದಾರೆ. ಇದು ತಮ್ಮ ಜನಸಂಖ್ಯಾ ನಿರ್ವಹಣಾ ಯೋಜನೆ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಬದಲಾವಣೆ ತರಲಿದೆ ಎಂದರು.

ಫೈಟರ್ ಜೆಟ್ ಅಪಘಾತ ಇಬ್ಬರು ಪೈಲಟ್‌ಗಳ ಸಾವು

ಗುವಾಹಟಿ: ಅಸ್ಸಾಂನ ಕರ್ಬಿ ಆಂಗ್ಲಾಂಗ್ ಜಿಲ್ಲೆಯಲ್ಲಿ ಗುರುವಾರ ರಾತ್ರಿ ಸುಖೋಯ್ ಸು-30 ಎಂಕೆಐ ಫೈಟರ್ ಜೆಟ್ ಅಪಘಾತಕ್ಕೀಡಾಗಿ ಭಾರತೀಯ ವಾಯುಪಡೆಯ (ಐಎಎಫ್) ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದಾರೆ. ಅವಳಿ ಆಸನಗಳ ಯುದ್ಧ ವಿಮಾನವು ಜೋರ್ಹತ್ ವಾಯುಪಡೆ ನಿಲ್ದಾಣದಿಂದ ವಾಡಿಕೆಯ ಹಾರಾಟಕ್ಕಾಗಿ ಹೊರಟು ಸಂಜೆ 7.42 ರ ಸುಮಾರಿಗೆ ತನ್ನ ಸಂಪರ್ಕ ಕಳೆದುಕೊಂಡಿತು. ಅದರ ನಂತರ, ವಿಮಾನವನ್ನು ಟ್ರ್ಯಾಕ್ ಮಾಡಲು ಸಾಧ್ಯವಾಗಲಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಜೋರ್ಹತ್‌ನಿಂದ ಸುಮಾರು 60 ಕಿಮೀ ದೂರದಲ್ಲಿರುವ ಕರ್ಬಿ ಆಂಗ್ಲಾಂಗ್ ಜಿಲ್ಲೆಯ ದೂರದ ಗುಡ್ಡಗಾಡು ಪ್ರದೇಶದಲ್ಲಿ ಯುದ್ಧ ವಿಮಾನವು ಅಪಘಾತಕ್ಕೀಡಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೇಪಾಳ ಚುನಾವಣೆ: ಹೊಸ ಪಕ್ಷಕ್ಕೆ ಮುನ್ನಡೆ

ಕಠ್ಮಂಡು: ಮಾಜಿ ರ್‍ಯಾಪರ್ ಬಲೇಂದ್ರ ಶಾ ನೇತೃತ್ವದ ಹೊಸದಾಗಿ ರೂಪುಗೊಂಡ ರಾಷ್ಟ್ರೀಯ ಸ್ವತಂತ್ರ ಪಕ್ಷ (ಆರ್‌ಎಸ್‌ಪಿ), ನೇಪಾಳ ಲೋಕಸಭಾ ಚುನಾವಣೆಯಲ್ಲಿ ಮುಂಚೂಣಿಯಲ್ಲಿದ್ದು, ಆರಂಭಿಕ ಮತ ಎಣಿಕೆ ಮುಂದುವರೆದಂತೆ ರಾಷ್ಟ್ರವ್ಯಾಪಿ 137 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ನೇಪಾಳಿ ಕಾಂಗ್ರೆಸ್ ಇದುವರೆಗೆ ಒಂದು ಸ್ಥಾನವನ್ನು ಗಳಿಸಿದ್ದು, 10 ಹೆಚ್ಚುವರಿ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ಸಿಪಿಎನ್-ಯುಎಂಎಲ್ ಏಳು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದೆ. ನೇಪಾಳಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಒಂಬತ್ತು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದಾರೆ ಎಂದು ಕಠ್ಮಂಡು ಪೋಸ್ಟ್ ವರದಿ ಮಾಡಿದೆ.

ತಿಂಗಳಾಂತ್ಯಕ್ಕೆ ನಕ್ಸಲ್ ಮುಕ್ತ ಭಾರತ ಖಚಿತ

ಹೊಸದಿಲ್ಲಿ: ತಿಂಗಾಳತ್ಯಕ್ಕೆ ದೇಶವು ಮಾವೋವಾದಿ ಮುಕ್ತವಾಗಲಿದೆ ಎಂದು ರಾಷ್ಟ್ರಕ್ಕೆ ಭರವಸೆ ನೀಡುತ್ತೇನೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ನೇತೃತ್ವದಲ್ಲಿ ನಕ್ಸಲಿಸಂ ಅನ್ನು ದೇಶದಿಂದ ಬೇರು ಸಮೇತ ಕಿತ್ತುಹಾಕುವುದು ದೇಶದ ಭದ್ರತಾ ಪಡೆಗಳಿಗೆ ದೊಡ್ಡ ಸಾಧನೆಯಾಗಲಿದೆ ಎಂದು ಶಾ ಹೇಳಿದರು. ನಮ್ಮ ಭದ್ರತಾ ಪಡೆಗಳು ನಿರೀಕ್ಷೆಗಳನ್ನು



ತಲುಪಿವೆ. ದೇಶವು ಈಗ ಮಾವೋವಾದಿಗಳನ್ನು ನಿರ್ಮೂಲನೆ ಮಾಡುವ ಅಂಚಿನಲ್ಲಿದೆ ಎಂದು ಅವರು ಹೇಳಿದರು. ಕಟಕ್ ಜಿಲ್ಲೆಯ ಮುಂಡಾಲಿಯಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್)ಯ 57ನೇ ಸಂಸ್ಥಾಪನಾ ದಿನದ ಅಂಗವಾಗಿ ನಡೆದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಸಿಐಎಸ್‌ಎಫ್ ಪ್ರಮುಖ ಸಂಸ್ಥೆಗಳಿಗೆ ಭದ್ರತೆಯನ್ನು ಒದಗಿಸುವ ಮೂಲಕ ದೇಶದ ಆರ್ಥಿಕ ಬೆಳವಣಿಗೆಗೆ ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಹೇಳಿದರು. 2047ರ ವೇಳೆಗೆ ವಿಕಸಿತ ಭಾರತ್ ಗುರಿಯನ್ನು ಸಾಧಿಸುವ ಸಲುವಾಗಿ, ಪ್ರಧಾನ ಮಂತ್ರಿಯವರ ಗುರಿಯಂತೆ, ಸಿಐಎಸ್‌ಎಫ್ ಆಂತರಿಕ ಭದ್ರತೆಯನ್ನು ಖಾತ್ರಿಪಡಿಸಿಕೊಂಡಿವೆ. ಇದು ರಾಷ್ಟ್ರದ ಬೆಳವಣಿಗೆಗೆ ಅತ್ಯಂತ ಪ್ರಮುಖ ಅಂಶವಾಗಿದೆ ಎಂದು ಶಾ ಹೇಳಿದರು.

9 ರಾಜ್ಯ, ಕೇಂದ್ರಾಡಳಿತದ ರಾಜ್ಯಪಾಲರ ಬದಲಾವಣೆ

ಹೊಸದಿಲ್ಲಿ: ರಾಷ್ಟ್ರಪತಿ ಭವನವು ದಿಲ್ಲಿ, ಲಡಾಖ್, ತೆಲಂಗಾಣ, ಮಹಾರಾಷ್ಟ್ರ, ಬಿಹಾರ, ಪಶ್ಚಿಮ ಬಂಗಾಳ, ತಮಿಳುನಾಡು, ಹಿಮಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್ ಸೇರಿದಂತೆ ಹಲವಾರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡ ಪ್ರಮುಖ ರಾಜ್ಯಪಾಲರ ಪುನರ್‌ರಚನೆಯನ್ನು ಪ್ರಕಟಿಸಿದೆ. ರಾಷ್ಟ್ರಪತಿಗಳ ಕಚೇರಿಯ ಅಧಿಕೃತ ಪ್ರಕಟಣೆ ಪ್ರಕಾರ, ಆಯಾ ನೇಮಕಾತಿದಾರರು ತಮ್ಮ ಕಚೇರಿಗಳ ಉಸ್ತುವಾರಿಯನ್ನು ವಹಿಸಿಕೊಳ್ಳುವ ದಿನಾಂಕದಿಂದ ಈ ನೇಮಕಾತಿಗಳು ಜಾರಿಗೆ ಬರುತ್ತವೆ. ದಿಲ್ಲಿಯ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರನ್ನು ಲಡಾಖ್‌ಗೆ ವರ್ಗಾಯಿಸಲಾಗಿದೆ. ಅಮೆರಿಕದ ಮಾಜಿ ಭಾರತೀಯ ರಾಯಭಾರಿ ತರನ್‌ಜೀತ್ ಸಿಂಗ್ ಸಂಧು ಅವರನ್ನು ದಿಲ್ಲಿಯ ನೂತನ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಲಾಗಿದೆ. ಇನ್ನು ಹಿಮಾಚಲಪ್ರದೇಶದ ರಾಜ್ಯಪಾಲ ಶಿವಪ್ರತಾಪ್ ಶುಕ್ಲಾ ಅವರನ್ನು ತೆಲಂಗಾಣಕ್ಕೆ ವರ್ಗಾಯಿಸಲಾಗಿದೆ. ಅಂತೆಯೇ ತೆಲಂಗಾಣದ ಈಗಿನ ರಾಜ್ಯಪಾಲ ಜಿಷ್ಣು ಶರ್ಮಾ ಅವರನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಗಿದೆ. ಇನ್ನುಳಿದಂತೆ ನಂದಕಿಶೋರ್ ಯಾದವ್ ಅವರನ್ನು ನಾಗಾಲ್ಯಾಂಡ್ ರಾಜ್ಯಪಾಲರಾಗಿ ನೇಮಿಸಲಾಗಿದ್ದು, ನಿವೃತ್ತ ಸೇನಾ ಮುಖ್ಯಸ್ಥ ಸಯ್ಯದ್ ಅತಾ ಹಸನೈನ್ ಅವರನ್ನು ಬಿಹಾರದ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ. ತಮಿಳುನಾಡಿನ ರಾಜ್ಯಪಾಲರಾದ ಆರ್.ಎನ್.ರವಿ ಅವರನ್ನು ಪಶ್ಚಿಮಬಂಗಾಳದ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಪ್ರಸ್ತುತ ಕೇರಳದ ರಾಜ್ಯಪಾಲರಾಗಿರುವ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ತ.ನಾಡಿನ ರಾಜ್ಯಪಾಲರ ಕಾರ್ಯಗಳನ್ನು ನಿರ್ವಹಿಸಲಿದ್ದಾರೆ. ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಕವಿಂದರ್ ಗುಪ್ತಾ ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ನೇಮಿಸಲಾಗಿದೆ.

ಬಜೆಟ್ ಅಧಿವೇಶನ: ಕೈ ಸಂಸದರಿಗೆ ವಿಪ್

ಹೊಸದಿಲ್ಲಿ: ಮಾ.9ರಿಂದ 11ರವರೆಗೆ ಸಂಸತ್ತಿನ ಬಜೆಟ್ ಅಧಿವೇಶನದಎರಡನೇಹಂತಆರಂಭವಾಗಲಿದ್ದು,ಸೋಮವಾರವೇ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆ ಕುರಿತು ಚರ್ಚೆಯಾಗುವ ಸಾಧ್ಯತೆಯಿದೆ. ಈ ಹಿನ್ನೆಲೆ ಲೋಕಸಭೆ ಅಧಿವೇಶನದಲ್ಲಿ ಸಂಸದರೆಲ್ಲರೂ ಕಡ್ಡಾಯ ಹಾಜರಾಗಬೇಕೆಂದು ಭಾರತೀಯ ಜನತಾ ಪಕ್ಷ (ಬಿಜೆಪಿ) ಮತ್ತು ವಿರೋಧ ಪಕ್ಷ ಕಾಂಗ್ರೆಸ್ ತಮ್ಮ ಸಂಸದರಿಗೆ ಶುಕ್ರವಾರ ಮೂರು ಸಾಲಿನ ವಿಪ್ ಜಾರಿ ಮಾಡಿವೆ. ಮಾ.9ರಂದು ಬಜೆಟ್ ಅಧಿವೇಶನದ ಎರಡನೇ ಹಂತ ಆರಂಭವಾಗಲಿದ್ದು, ಸ್ಪೀಕರ್ ಓಂ ಬಿರ್ಲಾ ಅವರನ್ನು



ಪದಚ್ಯುತಿಗೊಳಿಸಬೇಕೆಂಬ ವಿರೋಧ ಪಕ್ಷದ ಸಂಸದರು ಸಲ್ಲಿಸಿರುವ ನೋಟಿಸ್ ಕುರಿತು ಚರ್ಚೆಯಾಗುವ ನಿರೀಕ್ಷೆಯಿದೆ.

ಬಹುಮತ ಸಿಕ್ಕರೆ ಬಿರ್ಲಾ ಪದಚ್ಯುತಿ: ಸದನದಲ್ಲಿ ಸರಳ ಬಹುಮತದಿಂದ ಅವಿಶ್ವಾಸ ನಿರ್ಣಯ ಅಂಗೀಕಾರವಾದರೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಹುದ್ದೆಯಿಂದತೆಗೆದುಹಾಕಲಾಗುವುದು. ಮೊದಲ ಹಂತದ ಬಜೆಟ್ ಅಧಿವೇಶನವು ಫೆ.13ರಂದು ಕೊನೆಗೊಂಡಿದ್ದು, ಭಾರತ-ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದ ಹಾಗೂ ಮಾಜಿ ಸೇನಾ ಮುಖ್ಯಸ್ಥ ಮನೋಜ್ ಮುಕುಂದ್ ನರಾವಣೆ ಅವರ ಪುಸ್ತಕದ ವಿವಾದ ಕುರಿತಾದ ತೀವ್ರ ಚರ್ಚೆಗಳಿಂದ ಕೂಡಿತ್ತು. ಜ.28ರಂದು ಲೋಕಸಭೆ ಮತ್ತು ರಾಜ್ಯಸಭೆಗಳು ಎರಡರಲ್ಲೂ ದ್ರೌಪದಿ ಮುರ್ಮು ಅವರ ರಾಷ್ಟ್ರಪತಿ ಭಾಷಣದೊಂದಿಗೆ ಬಜೆಟ್ ಅಧಿವೇಶನ ಆರಂಭಗೊಂಡಿತ್ತು.

ಯುಪಿಎಸ್‌ಸಿ ಫಲಿತಾಂಶ ಪ್ರಕಟ

958 ಅಭ್ಯರ್ಥಿಗಳು ಉತ್ತೀರ್ಣ

ಹೊಸದಿಲ್ಲಿ: ಅನುಜ್ ಅಗ್ನಿಹೋತ್ರಿ ಅವರು ನಾಗರೀಕ ಸೇವಾ ವಲಯದ 2025ನೇ ಸಾಲಿನ ಪರೀಕ್ಷೆಯಲ್ಲಿ ಮೊದಲನೇ ಸ್ಥಾನ ಪಡೆದಿದ್ದಾರೆ. ಶುಕ್ರವಾರದಂದು ಯುನಿಯನ್ ಪಬ್ಲಿಕ್ ಸರ್ವಿಸ್ ಕಮೀಶನ್(ಯುಪಿಎಸ್‌ಸಿ) ಫಲಿತಾಂಶಗಳು ಪ್ರಕಟವಾಗಿವೆ. ರಾಜೇಶ್ವರಿ ಸುವೆ, ಅಕಾಂಶ್ ಧುಲ್ ಕ್ರಮವಾಗಿ ಎರಡನೇ ಹಾಗೂ ಮೂರನೇ ಸ್ಥಾನ ಪಡೆದಿದ್ದಾರೆ. ಒಟ್ಟು 958 ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರಣರಾಗಿದ್ದಾರೆ. ಈ ಅಭ್ಯರ್ಥಿಗಳನ್ನು ವಿವಿಧ ಹುದ್ದೆಗಳಿಗೆ ನೇಮಕ ಮಾಡಲಾಗುವುದು ಎಂದು ಆಯೋಗ ತಿಳಿಸಿದೆ. ಯುಪಿಎಸ್‌ಸಿ ಪರೀಕ್ಷೆಗಳನ್ನು ಮೂರು ಹಂತದಲ್ಲಿ ಆಯೋಜಿಸಲಾಗುತ್ತದೆ. ಪ್ರಿಲಿಮಿನರಿ, ಮೈನ್ ಹಾಗೂ ಇಂಟರ್‌ವ್ಯೂ. ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುವವರನ್ನು ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ವಿದೇಶಾಂಗ ಸೇವೆ(ಐಎಫ್ ಎಸ್) ಮತ್ತು ಭಾರತೀಯ ಆರಕ್ಷಣಾ ಸೇವೆ (ಐಪಿಎಸ್) ಹುದ್ದೆಗಳಿಗೆ ನೇಮಕ ಮಾಡಲಾಗುತ್ತದೆ. ಈ ಹಿಂದೆ ಒಟ್ಟು 1,087 ಹುದ್ದೆಗಳು ಭರ್ತಿಯಾಗಬೇಕಿವೆ ಎಂದು ಆಯೋಗ ಈ ಹಿಂದೆ ಹೇಳಲಾಗಿತ್ತು.

ಬೂತ್ ನಿರ್ವಹಣೆಗೆ 5,100 ಮಹಿಳೆಯರು

ಟೋಲ್‌ಗಳಲ್ಲಿ ಮಹಿಳಾ ಶಕ್ತಿ

ಹೊಸದಿಲ್ಲಿ: ದೇಶದ 1,140 ಪ್ಲಾಜಾಗಳಲ್ಲಿ ಬೂತ್ ಕಾರ್ಯಾಚರಣೆಗಳನ್ನು ನಿರ್ವಹಿಸಲು ಹಗಲಿನ ಪಾಳಿಯಲ್ಲಿ 5,100ಕ್ಕೂ ಹೆಚ್ಚು ಮಹಿಳಾ ಸಿಬ್ಬಂದಿಯನ್ನು ನಿಯೋಜಿಸಿರುವುದಾಗಿ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್ ಎಐ) ಶುಕ್ರವಾರ ಹೇಳಿದೆ. ರಾಷ್ಟ್ರೀಯ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ವೇಗಳಲ್ಲಿನ ಟೋಲ್ ಪ್ಲಾಜಾಗಳಲ್ಲಿ ಮಹಿಳಾ ಉದ್ಯೋಗಿಗಳನ್ನು ಹೆಚ್ಚಿಸುವ ಮಹತ್ತರ ಯೋಜನೆಯ ಭಾಗವಾಗಿ ಈ ಬೆಳವಣಿಗೆ ನಡೆದಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಮಹಿಳೆಯರು ಸೇರುವ ನಿರೀಕ್ಷೆಯಿದೆ.



ಈ ಯೋಜನೆಯು ಲಿಂಗ ಸಮಾನತೆ ಮತ್ತು ಸಾಮಾಜಿಕ ಸಬಲೀಕರಣವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಜತೆಗೆ ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಟೋಲ್ ಪ್ಲಾಜಾಗಳಲ್ಲಿ ಸೇವಾ ವಿತರಣೆಯನ್ನು ಸುಧಾರಿಸುತ್ತದೆ ಎಂದು ಎನ್‌ಎಚ್ ಎಐ ಹೇಳಿದೆ.

ಶುಲ್ಕ ಪ್ಲಾಜಾ ನಿರ್ವಾಹಕರು ಮತ್ತು ರಾಷ್ಟ್ರೀಯ ಹೆದ್ದಾರಿ ಬಿಲ್ಡರ್ ಫೆಡರೇಶನ್ (ಎನ್‌ಎಚ್‌ಬಿಎಫ್), ಹೈವೇ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಚ್‌ಒಎಐ) ಮತ್ತು ಅಖಿಲ ಭಾರತ ಬಳಕೆದಾರ ಶುಲ್ಕ ಗುತ್ತಿಗೆದಾರರ ಒಕ್ಕೂಟ (ಎಐಯುಸಿಎಫ್) ಸೇರಿದಂತೆ ವಿವಿಧ ಪಾಲುದಾರರೊಂದಿಗೆ ಚರ್ಚಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಟೋಲ್ ಪ್ಲಾಜಾಗಳಲ್ಲಿ ಬಳಕೆದಾರರ ಶುಲ್ಕ ಸಂಗ್ರಹಕ್ಕಾಗಿ ಹಗಲಿನ ಪಾಳಿಯಲ್ಲಿ ಮಹಿಳಾ ಸಿಬ್ಬಂದಿಯನ್ನು ನಿಯೋಜಿಸಲು ಎಲ್ಲಾ ಟೋಲ್ ನಿರ್ವಾಹಕರು ಸರ್ವಾನುಮತದಿಂದ ಒಪ್ಪಿಕೊಂಡಿದ್ದಾರೆ. ಈ ಯೋಜನೆ ಮಹಿಳೆಯರಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸಲು ಸಹಕಾರಯಾಗಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶ ಮತ್ತು ಸಣ್ಣ ನಗರಗಳಲ್ಲಿ ಮೂಲಸೌಕರ್ಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದಕ್ಕೆ ಇದು ಸಹಕಾರಿಯಾಗಿದೆ.

ಸಂಪನ್ನ-ಹವಾಮಾನ ವಲಯ ಹೊಂದಿದ್ದೇವೆ : ಪ್ರಧಾನಿ ಮೋದಿ

ದೇಶೀಯ ಕೃಷಿ ಉತ್ಪನ್ನ ಜಾಗತಿಕ ಮಟ್ಟದ್ದು

ಹೊಸದಿಲ್ಲಿ: ಕೃಷಿ ರಂಗದಲ್ಲಿ ಉತ್ಪಾದಕತೆ ಮತ್ತು ರಫ್ತು ಬಲವನ್ನು ಹೆಚ್ಚಿಸುವಲ್ಲಿ ಭಾರತದ ವಿಭಿನ್ನ ಹವಾಮಾನ ವ್ಯವಸ್ಥೆಯನ್ನು ಬಳಸಿಕೊಳ್ಳುವಂತೆ ದೇಶದ ರೈತರಿಗೆ ಪ್ರಧಾನಿ ನರೇಂದ್ರ ಮೋದಿಯವರು ಶುಕ್ರವಾರ ಕರೆ ನೀಡಿದ್ದಾರೆ.

ಅವರು ಬಜೆಟೋತ್ತರದಲ್ಲಿ 'ಕೃಷಿ ಮತ್ತು ಗ್ರಾಮೀಣ ಪರಿವರ್ತನೆ 'ಎಂಬ ವಿಷಯದ ಮೇಲಿನ ವೆಬಿನಾರ್‌ನಲ್ಲಿ ಮಾತನಾಡಿದ ಮೋದಿಯವರು, ಜಾಗತಿಕ ಗುಣಮಟ್ಟ ಮತ್ತು ಬ್ರ್ಯಾಂಡಿಂಗ್ ಗುಣಮಟ್ಟಗಳನ್ನು ತಲುಪುವಲ್ಲಿ ತಜ್ಞರು, ಕೈಗಾರಿಕೆಗಳು ಮತ್ತು ರೈತರ ನಡುವೆ ಸಮನ್ವಯವೊಂದರ ಅಗತ್ಯವಿದೆ ಎಂದರು. ಸ್ಥಳೀಯ ರೈತರನ್ನು ಜಾಗತಿಕ ಮಾರುಕಟ್ಟೆಗಳೊಂದಿಗೆ ಸಂಪರ್ಕಿಸುವ ಸ್ಪಷ್ಟ ಗುರಿಗಳನ್ನು ರೂಪಿಸುವ ಅಗತ್ಯವನ್ನು ಕೂಡ ಅವರು ಎತ್ತಿ ತೋರಿದರು.

ಇಂದು ವಿಶ್ವ ಮಾರುಕಟ್ಟೆಗಳು ತೆರೆದುಕೊಂಡು ಮುಕ್ತವಾಗಿವೆ .



ಹಾಗೆಯೇ ಜಾಗತಿಕ ಬೇಡಿಕೆಗಳು ಕೂಡ ಬದಲಾಗಿವೆ. ನಮ್ಮ ಕೃಷಿ ರಂಗವನ್ನು ರಫ್ತು ಕೇಂದ್ರಿತವನ್ನಾಗಿ ಮಾಡುವಲ್ಲಿ ಹೆಚ್ಚಿನ ಚರ್ಚೆ, ಸಮಾಲೋಚನೆಗಳ ಅಗತ್ಯವಿದೆ. ನಾವು ವಿಶಿಷ್ಟ ಹವಾಮಾನ ವ್ಯವಸ್ಥೆಯೊಂದನ್ನು ಹೊಂದಿದ್ದು, ಇದರ ಸಂಪೂರ್ಣ ಲಾಭವನ್ನು ನಾವು ಪಡೆಯಬೇಕಾಗಿದೆ. ನಾವು ಸಂಪನ್ನ ಕೃಷಿ-ಹವಾಮಾನ ವಲಯಗಳನ್ನು ಹೊಂದಿರುವುದು ನಮಗೆ ಅನುಕೂಲಕರವಾಗಿದೆ ಎಂದರು.

ರಫ್ತು ಕೇಂದ್ರಿತ ಉತ್ಪಾದನೆಯು,ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಳ ಮೂಲಕ ಗ್ರಾಮೀಣ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ ಎಂಬುದರತ್ತ ಮೋದಿಯವರು ಬೊಟ್ಟು ಮಾಡಿದರು. 2026-27ನೇ ಸಾಲಿನ ಬಜೆಟ್, ಗೇರುಬೀಜ, ಕೋಕೋ, ಶ್ರೀಗಂಧದಂತಹ ಹೆಚ್ಚಿನ ಮೌಲ್ಯದ ಕೃಷಿ ಉತ್ಪನ್ನಗಳತ್ತ ಮತ್ತು ಮೌಲ್ಯವರ್ಧನೆಗೆ ಇರುವ ಅವಕಾಶಗಳತ್ತ ಗಮನ ಕೇಂದ್ರೀಕರಿಸಿದೆ.

ಇಂದು ವಿಶ್ವದಲ್ಲಿ ಆರೋಗ್ಯದ ಬಗ್ಗೆ ಹೆಚೆಚ್ಚು ಜಾಗೃತಿ ಉಂಟಾಗುತ್ತಿದ್ದು, ಆರೋಗ್ಯದ ಬಗ್ಗೆ ಕಾಳಜಿ ಮತ್ತು ಸಾವಯವ ಆಹಾರದ ಬಗ್ಗೆ ಬಲವಾದ ಒತ್ತು ನೀಡಲಾಗುತ್ತಿದೆ ಎಂಬುದನ್ನು ಎತ್ತಿತೋರಿದ ಮೋದಿಯವರು, ರಾಸಾಯನಿಕ ಮುಕ್ತ ಮತ್ತು ನೈಸರ್ಗಿಕ ಕೃಷಿಗೆ ಒತ್ತು ನೀಡಿದಲ್ಲಿ ಇದು ಜಗತ್ತಿನಾದ್ಯಂತ ಇರುವ ಮಾರುಕಟ್ಟೆಗಳನ್ನು ತಲುಪಲು ನಮಗೆ ರಾಜಮಾರ್ಗ ತೆರೆದುಕೊಳ್ಳಲಿದೆ.



ಬೆಂಗಳೂರು ಕೇವಲ ಒಂದು ನಗರವಷ್ಟೇ ಅಲ್ಲ. ಇದು ಅಸಂಖ್ಯಾತ ಕನಸುಗಳ ನೆಲೆಬೀಡು. ನಾಡಪ್ರಭು ಕೆಂಪೇಗೌಡರ ಆಡಳಿತದಿಂದ ಹಿಡಿದು ಇಂದಿನ ಸ್ಟಾರ್ಟ್ ಅಪ್ ಕ್ರಾಂತಿಯವರೆಗೆ ಈ ನಗರವು ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿದೆ. ಬೆಂಗಳೂರನ್ನು ವಿಶ್ವದ ಅತ್ಯುತ್ತಮ ವಾಸಯೋಗ್ಯ ನಗರವನ್ನಾಗಿ ಮಾಡುವುದು ನಮ್ಮ ಸರ್ಕಾರದ ಮುಖ್ಯ ಉದ್ದೇಶ.

■ **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಅಭಿವೃದ್ಧಿಗೆ ಮುನ್ನುಡಿ

ಟನಲ್ ರಸ್ತೆ	ಹೊರ ವರ್ತುಲ ರಸ್ತೆ	ಉಪನಗರ ರೈಲು
40,000 ಕೋಟಿ ರೂ.	450 ಕೋಟಿ ರೂ.	500 ಕೋಟಿ ರೂ.

■ ಆರೋಗ್ಯ ಬೆಂಗಳೂರು-ಬದಲಾದ ಆಸ್ಪತ್ರೆ ಹೆಸರು



ಬೆಂಗಳೂರಿನ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ಆವರಣದಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಿಂದ 1,000 ಹಾಸಿಗೆಗಳ ಚಾರಿಟಬಲ್ ಸೂಪರ್ ಸ್ಪೆಷಾಲಿಟಿ ಟರ್ಷಿಯರಿ ಆರೈಕೆ ಮತ್ತು ಅಂಗಾಂಗ ಕಸಿ ಆಸ್ಪತ್ರೆಯನ್ನು ನಿರ್ಮಾಣ ಮಾಡಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಬೆಂಗಳೂರಿನ ಗೋವಿಂದರಾಜನಗರದ ಜಿಬಿಎ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಪ್ರಾದೇಶಿಕ ಕೇಂದ್ರವನ್ನು 15 ಕೋಟಿ ರೂ. ವೆಚ್ಚದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಹಯೋಗದೊಂದಿಗೆ ಸ್ಥಾಪಿಸಲಾಗುವುದು. ನಗರದ ವಾಣಿ ವಿಲಾಸ್ ಆಸ್ಪತ್ರೆಯಲ್ಲಿ ಐವಿಎಫ್ ಕೇಂದ್ರವನ್ನು ಸ್ಥಾಪಿಸಲು ಒಂದು ಕೋಟಿ ರೂ. ನೀಡಲಾಗುವುದೆಂದು ಬಜೆಟ್‌ನಲ್ಲಿ ಭರವಸೆ ನೀಡಲಾಗಿದೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯನ್ನು ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಎಂದು ಮರು ನಾಮಕರಣಗೊಳಿಸಲಾಗುವುದು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೧೪ ಶನಿವಾರ, 7 ಮಾರ್ಚ್ 2026
ಬೆಂಗಳೂರು

ನಗರಾಭಿವೃದ್ಧಿಗೆ ₹7,000 ಕೋಟಿ | ಟನಲ್ ರೋಡ್‌ಗೆ ₹40,000 ಕೋಟಿ ಅನುದಾನ

ಬ್ರ್ಯಾಂಡ್ ಬೆಂಗಳೂರಿಗೆ ಬಲ

◆ **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ 2026-27ರ ಬಜೆಟ್‌ನಲ್ಲಿ ಡಿ.ಕೆ.ಶಿವಕುಮಾರ್ ಅವರ ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಗೆ ಬಲ ತುಂಬಿದೆ. ರಸ್ತೆಗಳ ವೈಟ್ ಟಾಪಿಂಗ್, ಮೂಲ ಸೌಕರ್ಯ ಸುಧಾರಣೆ, ಸಂಚಾರ ದಟ್ಟಣೆ ನಿವಾರಣೆ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಹಾಗೂ ಕೆರೆಗಳ ಜೀರ್ಣೋದ್ಧಾರ ಸೇರಿದಂತೆ ರಾಜಧಾನಿಯ ಸಮಗ್ರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಪ್ರಾಧಾನ್ಯತೆ ನೀಡಲಾಗಿದೆ. ಅದರಲ್ಲೂ ಟನಲ್ ರಸ್ತೆ, ಮೆಟ್ರೋ ವಿಸ್ತರಣೆ, ರಾಜಕಾಲುವೆ ಅಭಿವೃದ್ಧಿ ಹೆಚ್ಚಿನ ಒತ್ತು ನೀಡಲಾಗಿದೆ.


2025-26ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿಗೆ ರಾಜ್ಯ ಸರ್ಕಾರ ನೀಡುತ್ತಿದ್ದ 3,000 ಕೋಟಿ ರೂ. ಅನುದಾನವನ್ನು 7,000 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿತ್ತು. ಪ್ರಸಕ್ತ ಸಾಲಿನಲ್ಲಿಯೂ ಈ ಅನುದಾನವನ್ನು ಮುಂದುವರೆಸುವುದಾಗಿ ಬಜೆಟ್‌ನಲ್ಲಿ ಹೇಳಲಾಗಿದ್ದು, 7,000 ಕೋಟಿ ರೂ. ಮೀಸಲಿಟ್ಟಿದೆ.

ಟನಲ್ ರಸ್ತೆಗೆ ಅಸ್ತು: ಹೆಬ್ಬಾಳ ಜಂಕ್ಷನ್ ನಿಂದ ಎಚ್.ಎಸ್. ಆರ್ ಲೇಔಟ್ ಸಿಲ್ಕ್ ಬೋರ್ಡ್ ವರೆಗಿನ ಉತ್ತರ-ದಕ್ಷಿಣ ಕಾರಿಡಾರ್ ಯೋಜನೆ ಹಾಗೂ ಕೆ.ಆರ್.ಪುರಂ ನಿಂದ ಮೈಸೂರು ರಸ್ತೆಯವರೆಗಿನ ಪೂರ್ವ-ಪಶ್ಚಿಮ ಕಾರಿಡಾರ್ ಯೋಜನೆಯ ಒಟ್ಟಾರೆ 40 ಕಿ.ಮಿ. ಉದ್ದದ ಸುರಂಗ ಮಾರ್ಗವನ್ನು 40,000 ಕೋಟಿ ರೂ. ಅಂದಾಜು ಮೊತ್ತದಲ್ಲಿ ಬೂಟ್ ಮಾದರಿಯಲ್ಲಿ ನಿರ್ಮಿಸಲು ಅನುಮೋದನೆ ನೀಡಲಾಗಿದೆ.

ಮೊದಲ ಹಂತದಲ್ಲಿ 17,780 ಕೋಟಿ ರೂ. ವೆಚ್ಚದಲ್ಲಿ 17 ಕಿ.ಮೀ ಉದ್ದದ ಉತ್ತರ-ದಕ್ಷಿಣ ಕಾರಿಡಾರ್ ಯೋಜನೆಗೆ ಟೆಂಡರ್ ಕರೆಯಲಾಗಿದೆ. ಹೆಬ್ಬಾಳ ಜಂಕ್ಷನ್‌ನಿಂದ ಮೇಖ್ರಿ ಸರ್ಕಲ್ ವರೆಗೆ ಸುರಂಗ ಮಾರ್ಗ ಹಾಗೂ ಮೇಲು ಸೇತುವೆ ರಸ್ತೆಯನ್ನು 2,250 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಲಾಗುವುದೆಂದು ಘೋಷಿಸಲಾಗಿದೆ.

ಹೊರ ವರ್ತುಲ ರಸ್ತೆ ಅಭಿವೃದ್ಧಿಗೆ ₹450 ಕೋಟಿ

ನಗರದ ರಸ್ತೆಗಳ ಗುಣಮಟ್ಟ ಹೆಚ್ಚಿಸಲು ಮುಂದಾಗಿರುವ ಸರ್ಕಾರ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಮೀಸಲಿಟ್ಟಿದೆ. ರಸ್ತೆಗಳ ದೀರ್ಘ ಕಾಲದ ಬಾಳಿಕೆಗಾಗಿ ಮುಂದಿನ ಮೂರು ವರ್ಷಗಳಲ್ಲಿ 450 ಕಿ.ಮೀ ಗೂ ಹೆಚ್ಚು ಉದ್ದದ ರಸ್ತೆಗಳನ್ನು 3,000 ಕೋಟಿ ರೂ.ಗಳ ವೆಚ್ಚದಲ್ಲಿ ವೈಟ್ ಟಾಪಿಂಗ್ ಮಾಡಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನ ಐದು ನಗರ ಪಾಲಿಕೆಗಳಲ್ಲಿ ವಾರ್ಡ್ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗೆ 1,255 ಕೋಟಿ ರೂ.ಗಳ ಮೊತ್ತದ ಘೋಷಣೆ ಮಾಡಲಾಗಿದೆ. 158 ಕಿ.ಮೀ.ಉದ್ದದ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಗೆ 1,700 ಕೋಟಿ ರೂ.ಗಳನ್ನು ನೀಡಲಾಗಿದೆ. ನಗರದ ಮುಖ್ಯ ಮತ್ತು ಉಪಮುಖ್ಯ ರಸ್ತೆಗಳ ಅಭಿವೃದ್ಧಿಗೆ 1,936 ಕೋಟಿ ರೂ.ಗಳನ್ನು ನೀಡಲಾಗಿದೆ ಎಂದು ಸಿಎಂ ತಿಳಿಸಿದ್ದಾರೆ. ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರಂ ಮೆಟ್ರೋ ನಿಲ್ದಾಣದವರೆಗೂ ಹೊರ ವರ್ತುಲ ರಸ್ತೆಯನ್ನು ಅಭಿವೃದ್ಧಿಪಡಿಸಲು 450 ಕೋಟಿ ರೂ.ಗಳ ಯೋಜನೆಯನ್ನು ಸಿದ್ದರಾಮಯ್ಯ ಘೋಷಿಸಿದ್ದಾರೆ. 273 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ರಾಜಕಾಲುವೆಗಳ ಮೇಲ್ದರ್ಜೆಗೇರಿಸುವುದು ಮತ್ತು ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗುವುದು ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.



ಬೆಂಗಳೂರಿಗೆ ಬಜೆಟ್ ಪ್ರಮುಖಾಂಶ

- 7,000 ಕೋಟಿ ರೂ.-ಬೆಂಗಳೂರು ಅಭಿವೃದ್ಧಿಗೆ ವಾರ್ಷಿಕ ಅನುದಾನ ಮುಂದುವರಿಕೆ.
- 6,939 ಕೋಟಿ ರೂ.-ಕಾವೇರಿ 6ನೇ ಹಂತದ ಯೋಜನೆ (ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ)
- 41 ಕಿ.ಮೀ ನಮ್ಮ ಮೆಟ್ರೋ ಹೊಸ ಮಾರ್ಗಗಳ ವಿಸ್ತರಣೆ (2026-27ರಲ್ಲಿ)
- 1,255 ಕೋಟಿ ರೂ.ವಾರ್ಡ್ ಮಟ್ಟದ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ
- 2027ರ ಅಂತ್ಯದೊಳಗೆ ಬೆಂಗಳೂರಿಗೆ ಹೊಸ ಪರಿಷ್ಕೃತ ಮಾಸ್ಟರ್ ಪ್ಲಾನ್ -2041 ಜಾರಿ
- ಸಮಗ್ರ ಮೊಬಿಲಿಟಿ ಯೋಜನೆ 6 ತಿಂಗಳೊಳಗೆ ರೂಪಿಸಲಾಗುವುದು
- ಮೂರು ವರ್ಷಗಳಲ್ಲಿ 450 ಕಿ.ಮೀ ಗೂ ಹೆಚ್ಚು ಉದ್ದದ ವೈಟ್ ಟಾಪಿಂಗ್ ರಸ್ತೆ ಕಾಮಗಾರಿಗೆ 3,000 ಕೋಟಿ ರೂ.
- ವಸತಿ ಪ್ರದೇಶಗಳಲ್ಲಿ ಸೆರೆಹಿಡಿದ ಚಿರತೆಗಳ ಪುನರ್‌ವಸತಿಗಾಗಿ ಬನ್ನೇರುಘಟ್ಟದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಚಿರತೆ ಪುನರ್ವಸತಿ ಕೇಂದ್ರ ಸ್ಥಾಪನೆ







ಮಿನಿ ಬಜೆಟ್

ಸಂಚಾರ ದಟ್ಟಣೆಗೆ ದಿಟ್ಟ ಕ್ರಮ



ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ತುಮಕೂರು ರಸ್ತೆಯಿಂದ ಹೊಸೂರು ರಸ್ತೆಯವರೆಗೆ 73 ಕಿ.ಮೀ ಉದ್ದದ ಬೆಂಗಳೂರು ಬಿಸಿನೆಸ್ ಕಾರಿಡಾರ್ ಭಾಗ-1 ನಿರ್ಮಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ತ್ವರಿತಗತಿಯಲ್ಲಿ ನಡೆಯುತ್ತಿದ್ದು, ರೈತರಿಗೆ ಸಮರೋಪಾದಿಯಲ್ಲಿ ಪರಿಹಾರ ವಿತರಿಸಲಾಗುತ್ತಿದೆ. ನೆಲಮಂಗಲ-ತಾವರೆಕೆರೆ-ಬಿಡದಿ ಮಧ್ಯಂತರ ವರ್ತುಲ ರಸ್ತೆಯನ್ನು ಬಿಎಂಆರ್‌ಡಿಎ ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಆರ್ಥಿಕ ಸಂಪನ್ಮೂಲಗಳಿಂದ ನಿರ್ಮಿಸಲಾಗುವುದು ಎಂದು ಬಜೆಟ್‌ನಲ್ಲಿ ಭರವಸೆ ನೀಡಲಾಗಿದೆ.

ಹಸಿರು ಬೆಂಗಳೂರು ನಿರ್ಮಾಣ



ಉದ್ಯಾನ ನಗರಿ ಬೆಂಗಳೂರಿನ ಹೆಸರಘಟ್ಟ ಹುಲ್ಲುಗಾವಲಿನ ಒಟ್ಟು 5,676 ಎಕರೆ ವಿಸ್ತೀರ್ಣದ ಪ್ರದೇಶವನ್ನು ಗ್ರೇಟರ್ ಹೆಸರ ಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಎಂದು ಘೋಷಿಸಿದ್ದು, ಈ ಪ್ರದೇಶದ ಆವಾಸಸ್ಥಾನ ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು. ಬೆಂಗಳೂರು ಉತ್ತರ ತಾಲೂಕಿನ ಮಾದಪ್ಪನಹಳ್ಳಿಯ 153ಎಕರೆ ಪ್ರದೇಶವನ್ನು ಶ್ವಾಸತಾಣವನ್ನಾಗಿ ಪರಿವರ್ತಿಸಿ, ಸಾಂಸ್ಕೃತಿಕ ನಾಯಕ ಬಸವಣ್ಣ ಜೈವಿಕ ವೈವಿಧ್ಯ ಉದ್ಯಾನವನ್ನು ನಿರ್ಮಿಸಲಾಗುವುದೆಂದು ಬಜೆಟ್‌ನಲ್ಲಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಕೆಇಬಿಪಿ ಅನುಷ್ಠಾನ



ವಿಶ್ವಬ್ಯಾಂಕ್ ನೆರವಿನೊಂದಿಗೆ 2,000 ಕೋಟಿ ರೂ.ಗಳ ಮೊತ್ತದ ಕೆಇಬಿಪಿ ಅನುಷ್ಠಾನಗೊಳಿಸಲಾಗುವುದು. ಇದರಡಿ ಬಿಎಂಟಿಸಿ ಸಂಸ್ಥೆಯ 32 ಎಲೆಕ್ಟ್ರಿಕ್ ಬಸ್ ಡಿಪೋಗಳನ್ನು ಅಭಿವೃದ್ಧಿಪಡಿಸಲಾಗುವುದು. ದೇಶದ 3ನೇ ಅತಿ ದೊಡ್ಡ ವಿಮಾನ ನಿಲ್ದಾಣವಾಗಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ದಟ್ಟಣೆಯನ್ನು ತಗ್ಗಿಸಲು ಬೆಂಗಳೂರಿನಲ್ಲಿ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸಲು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ತಾಂತ್ರಿಕ ಅಭಿಪ್ರಾಯ ಪಡೆದು ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಲಾಗುವುದು ಎಂದರು.

ಉಪನಗರ ರೈಲಿಗೆ ₹500 ಕೋಟಿ



ಬೆಂಗಳೂರು ಉಪನಗರ ರೈಲು ಯೋಜನೆಯ ನಾಲ್ಕು ಕಾರಿಡಾರ್‌ಗಳ ಪೈಕಿ ಕಾರಿಡಾರ್-2ಕ್ಕೆ (ಬೆನ್ನಿಗಾನಹಳ್ಳಿ-ಚಿಕ್ಕಬಾಣಾವರ) ಅಗತ್ಯವಿರುವ ಶೇ.100ರಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಕಾರಿಡಾರ್-4ಕ್ಕೆ (ಹೀಲಲಿಗೆ-ರಾಜಾನುಕುಂಟೆ) ಅಗತ್ಯವಿರುವ ಭೂಮಿಯ ಭೂಸ್ವಾಧೀನ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಡಿಸೆಂಬರ್ 2030ರ ಅಂತ್ಯಕ್ಕೆ ಎರಡು ಕಾರಿಡಾರ್‌ಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕಾಮಗಾರಿಗಳಿಗೆ 500 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ನಗರಾಭಿವೃದ್ಧಿಗೆ ಯೋಜನೆ

◆ **ಬೆಂಗಳೂರು:** ನಗರದ ಸಮಗ್ರ ಅಭಿವೃದ್ಧಿಗೆ ಒತ್ತು ಕೊಟ್ಟಿರುವ ಸರ್ಕಾರ, ಪ್ರಮುಖ ಯೋಜನೆಗಳ ಜತೆಗೆ ಪೂರಕ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿದೆ. ಬೆಂಗಳೂರು ನಗರ ಪಾಲಿಕೆಗಳ ಸ್ವಂತ ಸಂಪನ್ಮೂಲದಲ್ಲಿ ಮುಂದಿನ ಮೂರು ವರ್ಷಗಳಲ್ಲಿ 175 ಜಂಕ್ಷನ್‌ಗಳ ಸೌಂದರ್ಯೀಕರಣ, 500 ಕಿ.ಮೀ. ಉದ್ದದ ಪಾದಚಾರಿ ಮಾರ್ಗವನ್ನು ಮೇಲ್‌ದರ್ಜೆಗೇರಿಸಲು ಮತ್ತು 100 ಸ್ಕೈವಾಕ್‌ಗಳ ನಿರ್ಮಾಣ ಮಾಡಲು ಬಜೆಟ್‌ನಲ್ಲಿ ಉದ್ದೇಶಿಸಲಾಗಿದೆ. ವಿಶ್ವಬ್ಯಾಂಕ್ ನೆರವಿನ ಜಲಭದ್ರತೆ ಮತ್ತು ವಿಪತ್ತು ನಿರೋಧಕ ಕಾರ್ಯಕ್ರಮದ ಕ್ರಿಯಾಯೋಜನೆಯಡಿ ರಾಜಕಾಲುವೆಗಳ ಅಭಿವೃದ್ಧಿ, ಮೇಲ್ದರ್ಜೆಗೇರಿಸುವ ಕಾಮಗಾರಿಗಳನ್ನು ಒಟ್ಟು 2,000 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಟೆಂಡರ್ ಕರೆದು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ

ಬೆಂಗಳೂರು ನಗರದ ಹೃದಯ ಭಾಗವಾದ ಕೆಂಪೇಗೌಡ ವೃತ್ತದಲ್ಲಿ ಇಲಾಖೆಗೆ ಸೇರಿದ ಬಂಡಿಶೇಷಮ್ಮ ಛತ್ರದ ಜಾಗದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯ ಕಲ್ಪಿಸಲು ವಿದ್ಯಾರ್ಥಿ ನಿಲಯ ಹಾಗೂ ವಾಣಿಜ್ಯ ಸಂಕೀರ್ಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ಪಿಪಿಪಿ ನಿರ್ಮಿಸಲು ಯೋಜನೆ ರೂಪಿಸಲಾಗಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

6ನೇ ಹಂತದ ಕಾವೇರಿ ಕುಡಿಯುವ ನೀರಿನ ಯೋಜನೆ

ಬೆಂಗಳೂರು ನಗರದ ಸುಮಾರು 1.40 ಕೋಟಿ ಜನರಿಗೆ ಕುಡಿಯುವ ನೀರು ಪೂರೈಸಲು ಕಾವೇರಿ ನೀರು ಸರಬರಾಜು ಯೋಜನೆಯ 1 ರಿಂದ 5ನೇ ಹಂತಗಳ ಮೂಲಕ ಒಟ್ಟು 2,225 ಎಮ್‌ಎಲ್‌ಡಿ ನೀರು ಪೂರೈಸಲಾಗುತ್ತಿದೆ. ಇದೀಗ ಜೆಐಸಿಎ ನೆರವಿನಿಂದ 6,939 ಕೋಟಿ ರೂ.ಗಳ ವೆಚ್ಚದಲ್ಲಿ ಹೆಚ್ಚುವರಿಯಾಗಿ ಆರು ಟಿ.ಎಂ.ಸಿ. ನೀರನ್ನು ಪೂರೈಸಲು ಕಾವೇರಿ 6ನೇ ಹಂತದ ಯೋಜನೆಯನ್ನು ಸರ್ಕಾರದಿಂದ ರೂಪಿಸಲಾಗಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಶಾಂತವೇರಿ ಗೋಪಾಲಗೌಡ ಆಸ್ಪತ್ರೆ

◆ **ಬೆಂಗಳೂರು:** ಕರ್ನಾಟಕ ಬಜೆಟ್ 2026ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನ ಐತಿಹಾಸಿಕ ವಿಕ್ಟೋರಿಯಾ ಆಸ್ಪತ್ರೆಯನ್ನು ಮುಂದೆ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಎಂದು ಮರುನಾಮಕರಣ ಮಾಡುವುದಾಗಿ ಘೋಷಿಸಿದ್ದಾರೆ.



ಈ ಹೆಸರು ಬದಲಾವಣೆಯು ರಾಜ್ಯದ ಗೌರವಾನ್ವಿತ ವ್ಯಕ್ತಿಗೆ ಸಲ್ಲಿಸಲಾದ ಗೌರವವಾಗಿದೆ ಎಂದು ಅಭಿಪ್ರಾಯ ವ್ಯಕ್ತವಾಗುತ್ತಿದೆ. ದಕ್ಷಿಣ ಭಾರತದ ಅತಿದೊಡ್ಡ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದಾದ ವಿಕ್ಟೋರಿಯಾ ಆಸ್ಪತ್ರೆ ತನ್ನ 125 ವರ್ಷಗಳ ಸುದೀರ್ಘ ಹಾಗೂ ಐತಿಹಾಸಿಕ ಪಯಣವನ್ನು ಮುಂದುವರಿಸಿಕೊಂಡು ಬಂದಿದೆ. ಬೆಂಗಳೂರಿನ ಹೃದಯಭಾಗದಲ್ಲಿದ್ದ ಈ ಆಸ್ಪತ್ರೆ ಕೇವಲ ಚಿಕಿತ್ಸಾ ಕೇಂದ್ರವಾಗಿರದೇ, ನಗರದ ಬೆಳವಣಿಗೆಯ ಪ್ರಮುಖ ಸಾಕ್ಷಿಯಾಗಿಯೂ ಗುರುತಿಸಿಕೊಂಡಿದೆ.

ವಿಕ್ಟೋರಿಯಾ ಆಸ್ಪತ್ರೆಯ ಇತಿಹಾಸ: 1897ರಲ್ಲಿ ರಾಣಿ ವಿಕ್ಟೋರಿಯಾ ಅವರ ಪಟ್ಟಾಭಿಷೇಕದ ವಜ್ರ ಮಹೋತ್ಸವದ ನೆನಪಿಗಾಗಿ ಈ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ಮೈಸೂರು ಮಹಾರಾಣಿ ಕೆಂಪನಂಜಮ್ಮಣ್ಣಿ ವಾಣಿ ವಿಲಾಸ ಸನ್ನಿಧಾನ ಅವರು ನೆರವೇರಿಸಿದ್ದರು. 1900ರಲ್ಲಿ ಉದ್ಘಾಟನೆಗೊಳ್ಳಬೇಕಿದ್ದರೂ, 1898ರಲ್ಲಿ ಬೆಂಗಳೂರನ್ನು ಕಾಡಿದ ಭೀಕರ ಪ್ಲೇಗ್ ಸಾಂಕ್ರಾಮಿಕದ ಹಿನ್ನೆಲೆ ಕಾಮಗಾರಿಯನ್ನು ವೇಗವಾಗಿ ಪೂರ್ಣಗೊಳಿಸಿ, ಸಂತ್ರಸ್ತರಿಗೆ ಚಿಕಿತ್ಸೆ ನೀಡಲು ಮುಂಚಿತವಾಗಿಯೇ ಸಿದ್ಧಪಡಿಸಲಾಗಿತ್ತು. ನಂತರ 1900ರ ಡಿಸೆಂಬರ್ 8ರಂದು ವೈಸರಾಯ್ ಲಾರ್ಡ್ ಕರ್ಜನ್ ಅವರಿಂದ ಆಸ್ಪತ್ರೆ ಅಧಿಕೃತವಾಗಿ ಉದ್ಘಾಟನೆಗೊಂಡಿತ್ತು.

ಆಸ್ಪತ್ರೆ ಹೆಗ್ಗಳಿಕೆ: ಈ ಆಸ್ಪತ್ರೆ 1897ರಲ್ಲಿ ಕರ್ನಾಟಕದಲ್ಲೇ ಮೊದಲ ದೂರವಾಣಿ ಸಂಪರ್ಕ ಪಡೆದ ಹೆಗ್ಗಳಿಕೆಯನ್ನು ಪಡೆದಿದೆ. 140 ಹಾಸಿಗೆಯಿಂದ ಆರಂಭವಾದ ಈ ಸಂಸ್ಥೆ ಬಳಿಕ 1,000ಕ್ಕೂ ಅಧಿಕ ಹಾಸಿಗೆಗಳ ಬೃಹತ್ ಆಸ್ಪತ್ರೆಯಾಗಿ ಬೆಳೆದಿದೆ. ವೈದ್ಯಕೀಯ ಕ್ಷೇತ್ರದಲ್ಲಿಯೂ ವಿಕ್ಟೋರಿಯಾ ಆಸ್ಪತ್ರೆ ಹಲವು ಸಾಧನೆಯನ್ನು ಮಾಡಿದೆ. 2025ರಲ್ಲಿ ಆಸ್ಪತ್ರೆಯ 125ನೇ ವರ್ಷದ ಸಂಭ್ರಮದಲ್ಲಿ 108 ಅಡಿ ಎತ್ತರದ ಧ್ವಜಸ್ತಂಭವನ್ನು ಸ್ಥಾಪಿಸಲಾಗಿತ್ತು. ಇದೀಗ ಬೆಂಗಳೂರಿನ ಐತಿಹಾಸಿಕ ವಿಕ್ಟೋರಿಯಾ ಆಸ್ಪತ್ರೆಯನ್ನು ಇನ್ನು ಮುಂದೆ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಎಂದು ಮರುನಾಮಕರಣ ಮಾಡಲಾಗುವುದು ಎಂದು ಬಜೆಟ್‌ನಲ್ಲಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸಂಪನ್ಮೂಲಕ್ಕಾಗಿ ಮುನ್ಸಿಪಲ್ ಬಾಂಡ್ ಪರಿಚಯ



ಸಂಪನ್ಮೂಲ ಸಂಗ್ರಹಕ್ಕೆ ಮುನ್ಸಿಪಲ್ ಬಾಂಡ್ ಪರಿಚಯ ಬೆಂಗಳೂರಿನ ನಾಗರಿಕರಿಗೆ ಪಾರದರ್ಶಕ ಆಡಳಿತ ನೀಡಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ, ಐದು ಮಹಾನಗರ ಪಾಲಿಕೆಯನ್ನು ಸ್ಥಾಪಿಸಲಾಗಿದೆ. ಈ ಐದು ಪಾಲಿಕೆಗೆ ಆರ್ಥಿಕ ಕ್ರೂಢೀಕರಣಕ್ಕೆ ಬಜೆಟ್‌ನಲ್ಲಿ ಹೊಸ ಅವಕಾಶ ನೀಡಲಾಗಿದೆ. ಪಾಲಿಕೆಗಳು ತಮ್ಮ ಬ್ಯಾಲೆನ್ಸ್ ಶೀಟ್ ಆಧಾರದಲ್ಲಿ ಮುನ್ಸಿಪಲ್ ಬಾಂಡ್‌ಗಳನ್ನು ಹೊರಡಿಸುವ ಮೂಲಕ ಅಭಿವೃದ್ಧಿ ಕಾಮಗಾರಿಗಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸಬಹುದಾಗಿದೆ. ಇದರಿಂದ ಪಾಲಿಕೆಗಳು ತಮ್ಮ ವ್ಯಾಪ್ತಿಯಲ್ಲಿ ಅಭಿವೃದ್ಧಿಕಾರ್ಯ ನಡೆಸಬಹುದಾಗಿದೆ.



ವಿತ್ತೀಯ ಶಿಸ್ತಿನ ನಿಯಮವನ್ನು ಪಾಲಿಸುತ್ತಿದ್ದೇವೆ ಎಂಬ ಕಾರಣಕ್ಕೆ ಸಿಎಂ ಅವರು ಅಂಕಿ ಸಂಖ್ಯೆ ಬದಲಿಸುವ ಜಾದೂಗಾರನಂತೆ ಈ ಬಜೆಟ್ ಅನ್ನು ಮಂಡಿಸಿದ್ದಾರೆ.

■ **ಛಲವಾದಿ ನಾರಾಯಣಸ್ವಾಮಿ**, ವಿಧಾನ ಪರಿಷತ್, ವಿಪಕ್ಷ ನಾಯಕ

ಹಲವಾರು ಯೋಜನೆಗಳು ಅಗತ್ಯವಾದರೂ, 40 ಸಾವಿರ ಕೋಟಿ ರೂ. ವೆಚ್ಚದ ಟನಲ್ ರಸ್ತೆ, 3,000 ಕೋಟಿ ರೂ. ವೆಚ್ಚದ ವೈಟ್-ಟಾಪಿಂಗ್ ಯೋಜನೆಗಳು ಪಾರದರ್ಶಕತೆ ಕುರಿತು ಪ್ರಶ್ನೆಯನ್ನು ಎಬ್ಬಿಸುತ್ತವೆ.

■ **ಶ್ರೀಕಾಂತ್ ನರಸಿಂಹನ್**, ಬಿಎನ್‌ಎಎಪಿ ಸ್ಥಾಪಕ

ಕರ್ನಾಟಕ ರಾಜ್ಯವು ರೈತರ ಆತ್ಮಹತ್ಯೆಯಲ್ಲಿ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ, ಆದರೆ, ಇದನ್ನು ತಡೆಗಟ್ಟಲು ಬಜೆಟ್‌ನಲ್ಲಿ ಯಾವುದೇ ಹೊಸ ಯೋಜನೆಗಳಿಲ್ಲ.

■ **ಕುರುಬೂರು ಶಾಂತಕುಮಾರ್**, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ

ದಲಿತ ಉದ್ದಿಮೆದಾರರಿಗೆ ಕೈಗಾರಿಕಾ ನಿವೇಶನಕ್ಕಾಗಿ 600 ಕೋಟಿ ಅನುದಾನ, ವಿದ್ಯುತ್ ಮಗ್ಗಕ್ಕೆ ಯೂನಿಟ್‌ಗೆ ಶೇ.50 ಸಹಾಯಧನ ಘೋಷಿಸಿರುವುದು ಸ್ವಾಗತಾರ್ಹ.

■ **ಸಿ.ಜಿ. ಶ್ರೀನಿವಾಸನ್**, ಕಾರ್ಯಾಧ್ಯಕ್ಷ, ಕರ್ನಾಟಕ ದಲಿತ ಉದ್ದಿಮೆದಾರರ ಸಂಘ.

ಗ್ಯಾರೆಂಟಿ ಯೋಜನೆಗಳ ಜಾರಿಗಾಗಿ ಸುಮಾರು 51,599 ಕೋಟಿ ಮೀಸಲಿಟ್ಟು, ರಸ್ತೆ, ಮೂಲ ಸೌಕರ್ಯ, ಕೃಷಿ, ನೀರಾವರಿ ಹಾಗೂ ಕೈಗಾರಿಕೆ ಸೇರಿದಂತೆ ಅನುದಾನ ನೀಡಿಲ್ಲ.

■ **ರವಿಕುಮಾರ್**, ವಿಧಾನ ಪರಿಷತ್ ವಿಪಕ್ಷ ಸಚೇತಕ

ಏರ್ ಬಸ್ ಇಂಡಿಯಾ ಟೆಕ್ನಾಲಜಿ ಸೆಂಟರ್‌ಗೆ ಚಾಲನೆ

ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಳವಣಿಗೆ

◆ **ಬೆಂಗಳೂರು:** ರಾಜ್ಯದಲ್ಲಿ ವೈಮಾಂತರಿಕ್ಷ ಮತ್ತು ರಕ್ಷಣೆ ಹಾಗೂ ಮಾಹಿತಿ ತಂತ್ರಜ್ಞಾನ ವಲಯಗಳ ಬೆಳವಣಿಗೆಗೆ ಮೌಲಿಕ ಕೊಡುಗೆ ನೀಡಲಿದೆ ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ನಗರದ ಕಾಡುಗೋಡಿ ಸಮೀಪದ ಟೈಟಾನಿಯಂ ಟೆಕ್ ಪಾರ್ಕ್ ಪ್ರದೇಶದಲ್ಲಿ ಏರ್ ಬಸ್ ಕಂಪನಿ ನಿರ್ಮಿಸಿರುವ ಅತ್ಯಾಧುನಿಕ ಏರ್ ಬಸ್ ಇಂಡಿಯಾ ಟೆಕ್ನಾಲಜಿ ಸೆಂಟರ್ ಅನ್ನು ಉಪ ಮುಖ್ಯಮಂತ್ರಿ ಡಿ. ಕೆ .ಶಿವಕುಮಾರ್ ಹಾಗೂ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಉದ್ಘಾಟಿಸಿದ ಬಳಿಕ ಮಾತನಾಡಿ, ಏರ್-ಬಸ್ ಅಭಿವೃದ್ಧಿಪಡಿಸಿರುವ ಈ ಕೇಂದ್ರದಲ್ಲಿ 5 ಸಾವಿರಕ್ಕಿಂತಲೂ ಹೆಚ್ಚು ಜನರು ಕೆಲಸ ಮಾಡಲು ಅವಕಾಶವಿದೆ. ಇದು ಕಂಪನಿಯ ಎರಡನೇ ಅತಿದೊಡ್ಡ ಡಿಜಿಟಲ್ ಕೇಂದ್ರವಾಗಿದೆ. ಜಾಗತಿಕ ಮಟ್ಟದಲ್ಲಿ ಅದರ ಮೂರನೆಯ ನಾವೀನ್ಯತಾ ಕೇಂದ್ರವಾಗಿದೆಂದರು.

ರಾಜ್ಯವು ದೇಶದ ವೈಮಾಂತರಿಕ್ಷ ಮತ್ತು ರಕ್ಷಣಾ ವಲಯಗಳಿಗೆ ಶೇ.60ರಷ್ಟು ಕೊಡುಗೆ ನೀಡುತ್ತಿದ್ದು, ಅಗ್ರಸ್ಥಾನದಲ್ಲಿದೆ. ನಮ್ಮಲ್ಲಿ 400ಕ್ಕೂ ಹೆಚ್ಚು ವೈಮಾಂತರಿಕ್ಷ ಮತ್ತು ರಕ್ಷಣಾ ಕಂಪನಿಗಳಿವೆ. ಏರ್ ಬಸ್ ಕಂಪನಿಯು ಭಾರತದ ಜೊತೆ ವರ್ಷಕ್ಕೆ 1.5 ಬಿಲಿಯನ್ ಡಾಲರ್ ವಹಿವಾಟು ನಡೆಸುತ್ತಿದೆ. ಹಾಗೆಯೇ, ಜಾಗತಿಕ ವಲಯದಲ್ಲಿ ಭಾರತದ



100 ಕಂಪನಿಗಳು ಮುಂಚೂಣಿಯಲ್ಲಿವೆ. ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಇತ್ತೀಚೆಗೆ ಆರಂಭವಾಗಿರುವ ಹೆಲಿಕಾಪ್ಟರ್ ಜೋಡಣೆ ಘಟಕವು 2027ರ ಮಧ್ಯಭಾಗದ ಹೊತ್ತಿಗೆ ತನ್ನ ಪ್ರಪ್ರಥಮ ಹೆಲಿಕಾಪ್ಟರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ ಎಂದು ತಿಳಿಸಿದರು.

ಬೆಂಗಳೂರು ನಗರಕ್ಕೆ 2033ರ ಹೊತ್ತಿಗೆ ಮತ್ತೊಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬರಲಿದೆ. ಇದು ಈಗಿರುವ ಕೆಂಪೇಗೌಡ ವಿಮಾನ ನಿಲ್ದಾಣದಷ್ಟೇ ದೊಡ್ಡದಾಗಿರಲಿದೆ. ಇದಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಕೇಂದ್ರ ನಾಗರಿಕ ವಿಮಾನ ಯಾನ ಸಚಿವ ರಾಮಮೋಹನ್ ನಾಯ್ಡು ಕೂಡ ಭರವಸೆ ನೀಡಿದ್ದಾರೆ. ಬೆಂಗಳೂರು, ಕರ್ನಾಟಕದ ಬೆಳವಣಿಗೆಯಲ್ಲಿ ಭಾರತದ ಪ್ರಗತಿ ಅಡಗಿದೆ ಎಂದರು.

4 ವಸತಿನಿಲಯ ಆರಂಭ



- ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರ ಸ್ಥಾಪನೆ
- ಐದು ಕೋಟಿ ರೂ.ಒದಗಿಸಲು ತೀರ್ಮಾನ

ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಹೆಚ್ಚಿನ ಬೇಡಿಕೆ ಇರುವ ಕಾರಣ ಬೆಂಗಳೂರಿನಲ್ಲಿ 100 ಸಂಖ್ಯಾಬಲದ ಉದ್ಯೋಗಸ್ಥ ಮಹಿಳೆಯರ ನಾಲ್ಕು ವಸತಿನಿಲಯಗಳನ್ನು ಪ್ರಾರಂಭಿಸಲು ಬಜೆಟ್‌ನಲ್ಲಿ ನಿರ್ಧರಿಸಲಾಗಿದೆ. ಉನ್ನತ ವ್ಯಾಸಂಗ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ಬರುವ ವಿದ್ಯಾರ್ಥಿಗಳಿಗಾಗಿ ಬೆಂಗಳೂರಿನಲ್ಲಿ ಎರಡು ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭಿಸಲಾಗುವುದೆಮದು ಬಜೆಟ್‌ನಲ್ಲಿ ಘೋಷಿಸಲಾಗಿದೆ. ನಗರದ ಕೆಂಗೇರಿಯಲ್ಲಿ ಆಸಿರ್ವನಂ ಬೆನಿಡಿಕ್ಟಿನ್ ಮೊನಾಸ್ಟರಿಯ ಎರಡು ಎಕರೆ ಜಾಗದಲ್ಲಿ, ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ತರಬೇತಿ ಕೇಂದ್ರ ಸ್ಥಾಪಿಸಲು ಮೂಲಸೌಕರ್ಯದ ನಿರ್ಮಾಣಕ್ಕೆ ಐದು ಕೋಟಿ ರೂ.ಗಳನ್ನು ಒದಗಿಸಲಾಗುವುದೆಂದು ಸಿಎಂ ತಿಳಿಸಿದ್ದಾರೆ.

ಮೆಟ್ರೊ ವಿಸ್ತರಣೆ



ದೇಶದ ಎರಡನೇ ಅತಿದೊಡ್ಡ ಮೆಟ್ರೊ ರೈಲು ಜಾಲವಾದ ನಮ್ಮ ಮೆಟ್ರೋಗೆ 2026-27ರ ಹಣಕಾಸು ವರ್ಷದಲ್ಲಿ ಒಟ್ಟು 41 ಕಿ.ಮೀ. ಹೆಚ್ಚುವರಿ ಮೆಟ್ರೊ ಮಾರ್ಗವನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ. ಇದರಿಂದ ದಿನಕ್ಕೆ 15 ಲಕ್ಷ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಪ್ರಸ್ತುತ ಕಾರ್ಯಾಚರಣಾ ಜಾಲವು 96 ಕಿ.ಮೀ. ಆಗಿದ್ದು, ಇದರಿಂದ ಪ್ರತಿ ದಿನ 10 ಲಕ್ಷ ಪ್ರಯಾಣಿಕರಿಗೆ ಪ್ರಯೋಜನಕಾರಿಯಾಗಿದೆ. ಇಲ್ಲಿಯವರೆಗೂ ವೆಚ್ಚವಾಗಿರುವ 67,460 ಕೋಟಿ ರೂ.ಗಳಲ್ಲಿ ರಾಜ್ಯ ಸರ್ಕಾರ 59,376 ಕೋಟಿ ರೂ.ಗಳನ್ನು ನೀಡಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಚಿತ್ರೆ

ದಿನದ ಮಾತು

ನಾಚಿಕೆ ಅನ್ನುವುದನ್ನು ಬಿಟ್ಟಾಗ ಮಾನವ ಮೃಗವಾಗುತ್ತಾನೆ.

▲ ಲೋಕೋಕ್ತಿ

ದಿನ ಭವಿಷ್ಯ

ಮೇಷ
ಸ್ಥಗಿತಗೊಳಿಸಿದ್ದ ಕಾರ್ಯ ಮತ್ತೆ ಆರಂಭಿಸ ಬೇಕಾದ ಅನಿವಾರ್ಯತೆ. ಸಹೋದ್ಯೋಗಿಗಳ ಸಹಕಾರ. ಕೌಟುಂಬಿಕ ಉದ್ವಿಗ್ನತೆ ಶಮನ.

ವೃಷಭ
ದಿನದ ಜಂಜಡದಿಂದ ಮುಕ್ತಿ ಸಿಗಲಿದೆ. ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವ ಅವಕಾಶ. ಆತ್ಮೀಯರ ಒಡನಾಟ. ಧನಪ್ರಾಪ್ತಿ ಸಾಧ್ಯತೆ.

ಮಿಥುನ
ನಿಮ್ಮ ಕಾರ್ಯತಂತ್ರ ಯಾರ ಜತೆಗೂ ಹೇಳದಿರಿ. ದೀರ್ಘಾವಧಿ ಯೋಜನೆಗೆ ಹಣ ಹಾಕಬೇಡಿ. ಲಾಭ ಸಿಗದು. ಹೆತ್ತವರ ಹಿತಾಸಕ್ತಿಗೆ ಗಮನ ಕೊಡಿ.

ಕಟಕ
ಆರೋಗ್ಯ ಕಾಳಜಿ ವಹಿಸಿ. ಆಹಾರ ಸೇವನೆ ಹಿತಮಿತವಾಗಿರಲಿ.ಸಂಗಾತಿ ಜತೆ ಭಿನ್ನಮತ ಸಂಭವ. ಅಧ್ಯಯನದಲ್ಲಿ ಯಶ. ಧನವ್ಯಯ ಅಧಿಕ.

ಸಿಂಹ
ಒತ್ತಡ. ಸಮಸ್ಯೆ. ಮನೆಯಲ್ಲಿ ಸಣ್ಣ ಜಗಳ ಆದೀತು. ಸಂಯಮ ಕಾಯ್ದುಕೊಳ್ಳಿ. ವ್ಯವಹಾರದಲ್ಲಿ ಹಿನ್ನಡೆ, ಧನಹಾನಿ ಸಂಭವ.

ಕನ್ಯಾ
ಕೌಟುಂಬಿಕ ಪರಿಸ್ಥಿತಿ ಆನಂದಕರ. ಆತ್ಮೀಯರ ಜತೆ ಕಾಲಕ್ಷೇಪ. ಆದಾಯದಲ್ಲಿ ಹೆಚ್ಚಳ. ಆರ್ಥಿಕ ಒತ್ತಡ ನಿವಾರಣೆ. ಆಪ್ತ ಬಂಧು ಭೇಟಿ.

ತುಲಾ
ಆರ್ಥಿಕ ಸ್ಥಿರತೆ. ಉಳಿತಾಯ ಹೆಚ್ಚಳ. ಸಂಜೆ ವೇಳೆಗೆ ವ್ಯವಹಾರದ ಒತ್ತಡದಿಂದ ದೂರವಾಗಿ ಕಾಲ ಕಳೆಯುವಿರಿ. ಆಪ್ತ ಹವ್ಯಾಸದಲ್ಲಿ ಖುಷಿ.

ವೃಶ್ಚಿಕ
ಸಂಗಾತಿ ಜತೆ ಅರಿತು ವ್ಯವಹರಿಸಿ. ಸಂಘರ್ಷಕ್ಕೆ ಆಸ್ಪದ ಕೊಡಬೇಡಿ. ಹೊಸ ವ್ಯವಹಾರ ಆರಂಭಕ್ಕೆ ಸಕಾಲ. ಸ್ವಂತ ಉದ್ದಿಮೆ ಹೊಂದಿದವರಿಗೆ ಲಾಭ.

ಧನು
ಕೋಪತಾಪ ನಿಯಂತ್ರಿಸಿ. ಇಲ್ಲವಾದರೆ ಜಗಳ ನಡೆದೀತು. ಮಾತಿಗೆ ಮಾತು ಕೂಡಿಸದಿರಿ. ವಿದ್ಯಾರ್ಥಿಗಳಿಗೆ ತುಸು ಹಿನ್ನಡೆ ಉಂಟಾದೀತು.

ಮಕರ
ನಿಮ್ಮ ಸುತ್ತ ಶಾಂತ ಪರಿಸ್ಥಿತಿ ಬೇಕಾದರೆ ನಿಮ್ಮ ಕೋಪಕ್ಕೆ ಕಡಿವಾಣ ಹಾಕಿ. ಇತರರ ವರ್ತನೆ ಅಸಹನೀಯ ಅನಿಸಿದರೂ ಈ ದಿನ ಸುಮ್ಮಗುಳಿಯಿರಿ.

ಕುಂಭ
ಹೊಸ ಸವಾಲು ಎದುರಾಗಲಿದೆ. ಆದರೆ ಧೃತಿಗೆಡಬೇಡಿ. ಸೂಕ್ತ ಸಹಕಾರವೂ ಸಿಗಲಿದೆ. ಮನೆಯಲ್ಲಿ ವಿರಸ ಕಳೆದು ಸೌಹಾರ್ದತೆ ಮೂಡಲಿದೆ.

ಮೀನ
ಮನೆಯಲ್ಲಿ ಶಾಂತಿ ಬೇಕೆ? ನಿಮ್ಮ ನಡೆನುಡಿ ಪ್ರಾಮಾಣಿಕವಾಗಿರಲಿ. ವೃತ್ತಿಯಲ್ಲಿ ಸಣ್ಣ ಸಮಸ್ಯೆ. ದೊಡ್ಡ ಹಾನಿ ತರದಿದ್ದರೂ ಮನಸ್ಸಿಗೆ ಕಿರಿಕಿರಿ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 6,0,4,1

ಏಕಾತ್ಮತಾ ತತ್ವದರ್ಶನದಲ್ಲಿ ವಿಶ್ವ ವಿಫಲ

ಪುಟ ೧ ➡ ವಿವಾದಗಳನ್ನು ತರ್ಕದಿಂದಲ್ಲ, ಸದ್ಭಾವನೆ ಮತ್ತು ಸೌಹಾರ್ದಗಳಿಂದ ಪರಿಹರಿಸಿಕೊಳ್ಳಬೇಕು. ಸಮಾಜವು ಸ್ವಾರ್ಥ ಮತ್ತು ವಿಭಜನೆಗಳನ್ನು ತೊಡೆದುಹಾಕಿ ಅಲ್ಲಿ ಸದ್ಭಾವನೆಯನ್ನು ಹಂತ ಹಂತವಾಗಿ ಬೆಳೆಸಿಕೊಳ್ಳುವ ಅಗತ್ಯವಿದೆ. ಜಗತ್ತು ಇಂದು ಎದುರಿಸುತ್ತಿರುವ ಸಮಸ್ಯೆಗಳಿಗೆ ಭಾರತ ತನ್ನ ಪ್ರಾಚೀನ ಏಕತೆಯ ಜ್ಞಾನದ ಮೂಲಕ ಉತ್ತರ ಹೊಂದಿದೆ. ಸಮಾಜವು ಭೇದವಿಲ್ಲದೆ ಒಂದಾಗಿ ಧರ್ಮವನ್ನು ರಕ್ಷಿಸಲು ಮುಂದಾಗಬೇಕು. ಇದರಿಂದ ಉತ್ತಮ ವಿಶ್ವವೊಂದನ್ನು ಸ್ಥಾಪಿಸಲು ಸಾಧ್ಯವಿದೆ. ಈ ಮೂಲಕ ಭಾರತ ಸುಖ, ಶಾಂತಿ, ಸಮೃದ್ಧಿ ಸಾಧಿಸುವುದಷ್ಟೇ ಅಲ್ಲದೆ ವಿಶ್ವಗುರುವಾಗಿ ಎದ್ದು ನಿಲ್ಲಬಲ್ಲದು. ಇದು ಹೊಸ ಸಾಮರಸ್ಯದ ವಿಶ್ವಕ್ಕೆ ನಾಂದಿಯಾಗಬಹುದು ಎಂದು ಭಾಗ್ವತ್ ವಿವರಿಸಿದರು.

ಎಲ್ಲ ನಂಬಿಕೆಗಳೂ ದೇವರೆಡೆಗೆ ಸಾಗುವಂತಹದ್ದೇ ಆದ್ದರಿಂದ ಗೌರವಕ್ಕೆ ಅರ್ಹವೇ ಆಗಿವೆ.ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ನಂಬಿಕೆಯ ಸನ್ಮಾರ್ಗದಲ್ಲಿ ಸಾಗಿದಾಗ ಎಲ್ಲರಿಗೂ ಶಾಂತಿ, ಒಳಿತುಂಟಾಗುತ್ತದೆ ಎಂದರು. ಮಧ್ಯಯುಗದ ಕಾಲದಲ್ಲಿ ಭಾರತದಲ್ಲಿದ್ದ ಪ್ರಮುಖ ಜೈನಮುನಿ ಆಚಾರ್ಯ ಜಿನದತ್ತ ಸೂರಿ(ದಾದಾ ಗುರುದೇವ್) ಅವರ ಬೋಧನೆಗಳು, ವಿದೇಶಿ ಆಕ್ರಮಣಗಳಂತಹ ಶತಮಾನಗಳ ಸವಾಲು-ಬಿಕ್ಕಟ್ಟುಗಳನ್ನು ಎದುರಿಸುವಂತಹ ಶಕ್ತಿ ಹೊಂದಿದ್ದವು. ಇದು ಸನಾತನ ಸಂಸ್ಕೃತಿಯ ಬಲವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದರು. ಶತಮಾನಗಳ ಬಳಿಕ ಜೈಸಲ್ಮೇರ್‌ನಲ್ಲಿ ಸಾಂಕ್ರಾಮಿಕ ಹರಡಿದ ವೇಳೆ ರಾಜ ಆ ಬಟ್ಟೆಯನ್ನು ಅಲ್ಲಿಂದ ತರಲು ಆದೇಶಿಸಿದ. ಈ ಬಟ್ಟೆಯ ಸ್ಪರ್ಷದ ಪವಿತ್ರ ನೀರನ್ನು ನಗರದಾದ್ಯಂತ ಚಿಮುಕಿಸಿದಾಗ ಸಾಂಕ್ರಾಮಿಕ ರೋಗ ನಿರ್ಮೂಲನೆಗೊಂಡಿತ್ತು. ಈ ಪವಿತ್ರ ವಸ್ತ್ರ ಈಗಲೂ ಅಲ್ಲಿ ಸುರಕ್ಷಿತವಾಗಿದ್ದು, ಭಕ್ತರು ಈ ಪವಿತ್ರ ವಸ್ತ್ರದ ಮೆರವಣಿಗೆ ನಡೆಸುವುದೇ ಚಾದರ ಉತ್ಸವವಾಗಿದೆ.

ಬಜೆಟ್‌ನಲ್ಲಿ ಪ್ರಸ್ತಾವನೆ | ಮೈಸೂರಲ್ಲಿ ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣ


4 ರಾಷ್ಟ್ರ ಮಟ್ಟದ ಮ್ಯಾರಥಾನ್

◆ **ಬೆಂಗಳೂರು:** ಸೈಕ್ಲಿಂಗ್, ಕಯಾಕಿಂಗ್ ಮತ್ತು ಮ್ಯಾರಥಾನ್ ಕ್ರೀಡೆಗೆ ಒತ್ತು ನೀಡಿ, ರಾಜ್ಯಾದ್ಯಂತ ನೂತನ ಕ್ರೀಡಾಂಗಣಗಳನ್ನು ನಿರ್ಮಿಸುವುದು. ಇರುವ ಕ್ರೀಡಾಂಗಣ ಗಳ ಗುಣಮಟ್ಟ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟಿನಲ್ಲಿ ಪ್ರಸ್ತಾಪಿಸಿದ್ದಾರೆ. ಕ್ರೀಡೆ ಕುರಿತಾದ ಯೋಜನೆಗಳ ಬಗ್ಗೆ ಮಾತನಾಡುತ್ತಾ ಅವರು, ತುಮಕೂರಿನಲ್ಲಿ ಕ್ರೀಡಾ ಮೂಲಸೌಕರ್ಯಗಳನ್ನು ಮೂರು ಕೋಟಿ ರೂ.ಗಳ ವೆಚ್ಚದಲ್ಲಿ ಉನ್ನತೀಕರಿಸಲಾಗುವುದು ಎಂದು ತಿಳಿಸಿದರು.

ಕ್ರೀಡಾ ಉತ್ತೇಜನ ವಿಚಾರದಲ್ಲಿ ಮ್ಯಾರಥಾನ್ ಮತ್ತು ನೀರಿನೊಂದಿಗೆ ಆಡಲಾಗುವ ಕ್ರೀಡೆಗಳ ಉತ್ತೇಜನಕ್ಕೆ ಸರ್ಕಾರ ಮುಂದಾಗಿದೆ. ಬೆಳಗಾವಿ ಅಂಥ ಪ್ರಮುಖ ನಗರಗಳಲ್ಲಿ ಕುಸ್ತಿ, ರಾಷ್ಟ್ರೀಯ ಮ್ಯಾರಥಾನ್ ಆಯೋಜನೆಗೆ ಒತ್ತು ನೀಡುವ ಭರವಸೆ ಕೂಡ ಸಿಎಂ ಸಿದ್ದರಾಮಯ್ಯ ನೀಡಿದ್ದಾರೆ.

ರಾಷ್ಟ್ರ ಮಟ್ಟದ ಮ್ಯಾರಥಾನ್: ಸಶಕ್ತ ಕರ್ನಾಟಕ ಕಾರ್ಯಕ್ರಮದಡಿ ಬೆಳಗಾವಿ, ಗೋಕರ್ಣ, ಚಿತ್ರದುರ್ಗ ಮತ್ತು ಹಂಪಿಯಲ್ಲಿ ರಾಷ್ಟ್ರಮಟ್ಟದ 4 ಮ್ಯಾರಥಾನ್‌ಗಳನ್ನು ಆಯೋಜಿಸುವ ಯೋಜನೆ ರೂಪಿಸಲಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಈ ಮ್ಯಾರಥಾನ್‌ಗಳು ನಡೆಯಲಿವೆ. ದೇಶದ ಪ್ರತಿಭಾನ್ವಿತ ರನ್ನರ್‌ಗಳೊಂದಿಗೆ ನಮ್ಮ ಅಥ್ಲೀಟ್‌ಗಳು ಸ್ಪರ್ಧಿಸಿ ಉತ್ತಮ ಫಲಿತಾಂಶ ತರುವ ಉದ್ದೇಶ ಯೋಜನೆ ಹೊಂದಿದೆ. ಒಂದೊಂದು ಮ್ಯಾರಥಾನ್‌ಗಳು ಸುಮಾರು 10 ಲಕ್ಷ ರೂ. ಮೂಲದ್ದಾಗಿರುತ್ತದೆ. ಇಷ್ಟಕ್ಕೆ ನಿಲ್ಲದೆ, 10 ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಮಟ್ಟದ ಮ್ಯಾರಥಾನ್ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಇದು ಸುಮಾರು 4 ಲಕ್ಷ ರೂ. ಮೌಲ್ಯ ಹೊಂದಿರುತ್ತದೆ.

ಸೈಕ್ಲಿಂಗ್ ಟ್ರ್ಯಾಕ್: ಸೈಕ್ಲಿಂಗ್‌ಗೆ ಉತ್ತೇಜನ ನೀಡಲು



ಮೈಸೂರಿನಲ್ಲಿರುವ ದಟ್ಟಗಳ್ಳಿಯಲ್ಲಿ ಗುರುತಿಸಲಾದ ಜಾಗದಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣ ಮಾಡುವ ಪ್ರಸ್ತಾವನೆ ಮಾಡಲಾಗಿದೆ. ಕರ್ನಾಟಕದಲ್ಲಿ ಸೈಕ್ಲಿಂಗ್‌ಗೆ ಉತ್ತಮ ವ್ಯಾಪ್ತಿ ಇದ್ದು, ಸಾವಿರಾರು ಸೈಕ್ಲಿಂಗ್ ಪ್ರಿಯರಿಗೆ ನೂತನ ಯೋಜನೆ ಸಹಾಯಕವಾಗಲಿದೆ. ಸೈಕ್ಲಿಂಗ್‌ನಲ್ಲಿ ಪರಿಣಾಮಕಾರಿ ಬದಲಾವಣೆಯಾಗಲಿದೆ.

ಬೆಂಗಳೂರಲ್ಲಿ ಕಯಾಕಿಂಗ್ ಕೇಂದ್ರ: ನೀರಲ್ಲಿ ಆಡಲಾಗುವ ಕಯಾಕಿಂಗ್, ದೋಣಿ ಸವಾರಿಯ ಉತ್ತೇಜನ ಮತ್ತು ಅಭ್ಯಾಸಕ್ಕೆ ಒತ್ತು ನೀಡುವ ದೃಷ್ಟಿಯಿಂದ ಬೆಂಗಳೂರಿನ ಹೆಸರಘಟ್ಟ ಕೆರೆಯಲ್ಲಿ ಪಿಪಿಪಿ ಮಾದರಿಯ ಕಯಾಕಿಂಗ್ ಮತ್ತು ದೋಣಿ ಸವಾರಿಯ ಶ್ರೇಷ್ಠತಾ ಕೇಂದ್ರಗಳ ಪ್ರಸ್ತಾವನೆ ಮಾಡಲಾಗಿದೆ. ಒಲಿಂಪಿಕ್ಸ್ ಭಾಗವಾಗಿರುವ ಕಯಾಕಿಂಗ್ ಅಭ್ಯಾಸಕ್ಕೆ ಬೂಸ್ಟರ್ ನೀಡುವ ಉದ್ದೇಶ ಪ್ರತಿಪಾದಿಸಲಾಗಿದೆ.

ಹೊಸ ಕ್ರೀಡಾಂಗಣಗಳ ನಿರ್ಮಾಣ: ಬಂಗಾರಪೇಟೆ, ಮುದ್ದೇಬಿಹಾಳ, ಗುಳೇದಗುಡ್ಡ, ಕನಕಪುರ, ಕುಕನೂರು ಮತ್ತು ಮಸ್ಕಿಯಲ್ಲಿ ತಲಾ 2 ಕೋಟಿ ರೂ. ವೆಚ್ಚದಲ್ಲಿ ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ವಿಜಯನಗರಕ್ರೀಡಾಂಗಣಉತ್ತೇಜನ: ವಿಜಯನಗರ ಜಿಲ್ಲೆಯಲ್ಲಿರುವ ಕ್ರೀಡಾಂಗಣವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕೆಎಮ್‌ಇಆರ್‌ಸಿ ಅನುದಾನದಲ್ಲಿ ಮೇಲ್ದರ್ಜೆಗೇರಿಸಲಾಗುವುದು. ಮಕ್ಕಳ ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸಲು ವಿರಾಜಪೇಟೆಯಲ್ಲಿ ಸುಸಜ್ಜಿತ ಕ್ರೀಡಾ ತರಬೇತಿ ವಸತಿ ನಿಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ ಬಜೆಟಿನಲ್ಲಿ ಪ್ರಸ್ತಾಪಿಸಲಾಗಿದೆ.

ಬೆಳಗಾವಿಯಲ್ಲಿ ಕುಸ್ತಿ ಅಖಾಡ: ಸಮಸ್ತ ಕರ್ನಾಟದ ಕುಸ್ತಿ ಪಟುಗಳನ್ನು ಪ್ರೋತ್ಸಾಹಿಸಲು ಬೆಳಗಾವಿಯ ಬೆಳಗುಂದಿಯಲ್ಲಿ ನೂತನ ಕುಸ್ತಿ ಅಖಾಡ ನಿರ್ಮಾಣ ಮಾಡುವ ಪ್ರಸ್ತಾವನೆ ಸಲ್ಲಿಸಲಾಗಿದೆ. ಬೆಳಗಾವಿಯಲ್ಲಿ ವಿಶೇಷವಾಗಿ ಕುಸ್ತಿ ಪಂದ್ಯಗಳನ್ನು ಹೆಚ್ಚಾಗಿ ಆಡಲಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ.

ಕ್ರೀಡಾ ವಿಜ್ಞಾನ ಕೇಂದ್ರ ಸ್ಥಾಪನೆ

ಇನ್ನು ಕಲ್ಯಾಣ ಕರ್ನಾಟಕ ಭಾಗದ ಕ್ರೀಡಾಪಟುಗಳಿಗೆ ಉತ್ತಮ ಕ್ರೀಡಾ ವಿಜ್ಞಾನ ಸೇವೆಗಳನ್ನು ಒದಗಿಸಲು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕಲಬುರಗಿಯಲ್ಲಿ ಆಧುನಿಕ ಕ್ರೀಡಾ ವಿಜ್ಞಾನ ಕೇಂದ್ರ ಆರಂಭ ಮಾಡಲು ಸರ್ಕಾರ ಮುಂದಾಗಿದೆ. ಗ್ರಾಮೀಣ ಮಟ್ಟದ ಕ್ರೀಡೆಗೂ ಉತ್ತಮ ದರ್ಜೆಯ ಸೌಲಭ್ಯಗಳನ್ನು ತಲುಪಿಸುವುದು ಇದರ ಉದ್ದೇಶವಾಗಿದೆ.

ಸರಣಿ ಶ್ರೇಷ್ಠ ಪ್ರಶಸ್ತಿಗೆ ಎಂಟು ಜನರ ಫೈಟ್

◆ **ಮುಂಬೈ:** ವಿಶ್ವಕಪ್ ಪಂದ್ಯಾವಳಿಯುದ್ದಕ್ಕೂ ಮಿಂಚಿರುವ ಆಟಗಾರರ ಪಟ್ಟಿಯನ್ನು ಬಿಡುಗಡೆ ಮಾಡಿರುವ ಐಸಿಸಿ ಪ್ರತಿಷ್ಠಿತ ಪಂದ್ಯಾವಳಿಗಾಗಿ ಸರಣಿ ಶ್ರೇಷ್ಠ ಆಟಗಾರರನ್ನು ನಾಮನಿರ್ದೇಶನ ಮಾಡಲಾಗಿದೆ. ಇದರಲ್ಲಿ ಸಂಜು ಸ್ಯಾಮ್ಸನ್ ಒಬ್ಬರೇ ಭಾರತೀಯರಾಗಿದ್ದಾರೆ. ಭಾನುವಾರದಂದು ಫೈನಲ್ ಪಂದ್ಯ ನಡೆಯಲಿದೆ. ವಾಡಿಕೆಯಂತೆ ಪಂದ್ಯಕ್ಕೂ ಮುನ್ನ ನಾಮನಿರ್ದೇನ ಮಾಡಲಾಗುತ್ತದೆ. ಈ ಬಾರಿಯ ನಾಮನಿರ್ದೇಶನದಲ್ಲಿ ದ.ಆಫ್ರಿಕಾದ ಇಬ್ಬರು, ನ್ಯೂಜಿಲೆಂಡ್‌ನ ಇಬ್ಬರು, ಇಂಗ್ಲೆಂಡ್, ಪಾಕಿಸ್ತಾನ, ಭಾರತ, ಅಮೆರಿಕದ ಒಬ್ಬರನ್ನು ನಾಮನಿರ್ದೇಶನ ಮಾಡಲಾಗಿದೆ. ಇಂಗ್ಲೆಂಡ್ ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಮುಂಚೂಣಿಯಲ್ಲಿದ್ದಾರೆ. ಕೂಟದುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿರುವ ಅವರು, ಪ್ರಮುಖ ಆಲ್ ರೌಂಡರ್ ಎನಿಸಿಕೊಂಡಿದ್ದಾರೆ. ಪಾಕಿಸ್ತಾನದ ಫರ್ಹಾನ್ ಅವರನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಎರಡು ಶತಕ ಬಾರಿಸಿದ ದಾಖಲೆಯನ್ನೂ ಮಾಡಿರುವ ಅವರು ನಾಮನಿರ್ದೇಶನಗೊಂಡಿದ್ದಾರೆ. ಇನ್ನು ದ.ಆಫ್ರಿಕಾದಿಂದ ಇಬ್ಬರು, ನ್ಯೂಜಿಲೆಂಡ್ ತಂಡದಿಂದ ಇಬ್ಬರನ್ನು ಪಟ್ಟಿಯಲ್ಲಿ ಸೇರಿದಲಾಗಿದೆ.

ನಾಮನಿರ್ದೇಶನಗೊಂಡ ಆಟಗಾರರು

ಹೆಸರು	ತಂಡ	ಪ್ರದರ್ಶನ
ಸಂಜು ಸ್ಯಾಮ್ಸನ್	ಭಾರತ	232 ರನ್
ಏಡನ್ ಮಾರ್ಕ್ರಮ್	ದ.ಆಫ್ರಿಕಾ	286 ರನ್
ಲುಂಗಿ ಎನ್‌ಗಿಡಿ	ದ.ಆಫ್ರಿಕಾ	12 ವಿಕೆಟ್
ಟಿಮ್ ಸೈಫರ್ಟ್	ನ್ಯೂಜಿಲೆಂಡ್	274 ರನ್
ರಚಿನ್ ರವೀಂದ್ರ	ನ್ಯೂಜಿಲೆಂಡ್	11 ವಿಕೆಟ್, 128 ರನ್
ಸಹಿಬ್ಜಾದ್ ಫರ್ಹಾನ್	ಪಾಕಿಸ್ತಾನ	383 ರನ್
ಶ್ಯಾಡ್ಲಿ ವ್ಯಾನ್	ಅಮೆರಿಕ	13 ವಿಕೆಟ್

ಸೆಮಿಗೇರಿದ ಅಂಕಿತಾ, ವೈಷ್ಣವಿ


▶ ರಾಚಪ್ಪಾ ಜಂಬಗಿ

◆ **ಕಲಬುರಗಿ:** ಭಾರತೀಯ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ಎದುರಾಳಿಯ ನಿರಂತರ ಡ್ರಾಪ್ ಶಾಟ್ ಬಳಸಿ ಮೂಲಕ ಪಂದ್ಯದಲ್ಲಿ ಮೇಲುಗೈ ಸಾಧಿಸಿದರೆ, ಇನ್ನೊಂದೆಡೆ ಅಂಕಿತಾ ರೈನಾ, ಎದುರಾಳಿಯ ಅನಗತ್ಯ ತಪ್ಪಿನ ಪ್ರಯೋಜನ ಪಡೆದು ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಗೆದ್ದು ಸಿಂಗಲ್ಸ್ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ಲಾನ್ ಟೆನ್ನಿಸ್ ಅಂಗಳದಲ್ಲಿ ನಡೆದ ಐಟಿಎಫ್ ಡಬ್ಲ್ಯು-35 ಓಪನ್ ಟೆನಿಸ್ ಟೂರ್ನಿಯ ಪಂದ್ಯದಲ್ಲಿ ವೈಷ್ಣವಿ, ಉಕ್ರೇನ್‌ನ ಎಲಿನಾ ನೆಪ್ಲಿಯ ವಿರುದ್ಧ ನೇರ ಸೆಟ್‌ಗಳಲ್ಲಿ ಜಯ ಪಡೆದರು. ಈ ಮಧ್ಯೆ, ನೆಪ್ಲಿಯ,ಅಡ್ಕರ್‌ರ ಆಟದ ರಿದಮ್‌ನ್ನು ಕದಡುವ ಉದ್ದೇಶದಿಂದ ಕೆಲವೊಮ್ಮೆ ಡ್ರಾಪ್ ಶಾಟ್ ಪ್ರಯೋಗಿಸಿದ್ದರಿಂದ ಗೇಮ್‌ನಲ್ಲಿ ದೀರ್ಘ ಡ್ಯೂಸ್ ಹೋರಾಟ ಕಂಡುಬಂತು.

ಮೊದಲ ಗೇಮ್‌ನಲ್ಲಿ ಸರ್ವ್ ಬ್ರೇಕ್ ಮಾಡಿ ನಂತರ ಕಠಿಣ ಹೋರಾಟ ನಡೆದರೂ ಅವರು 6-1, 6-3 ಅಂತರದಲ್ಲಿ ಗೆಲುವು ಸಾಧಿಸಿ ಮುಂದಿನ ಹಂತಕ್ಕೆ ಪ್ರವೇಶ ಪಡೆದರು. ಇನ್ನೊಂದೆಡೆ ಅಂಕಿತಾ ರೈನಾ, ರಷ್ಯಾದ ಎಲಿನಾ ಬರ್ಡಿನಾ ವಿರುದ್ಧ ನೇರ ಸೆಟ್‌ಗಳಲ್ಲಿ ಜಯ ಸಾಧಿಸಿದರು. ಆರಂಭದಲ್ಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿ ಮೊದಲ ಗೇಮ್‌ನಲ್ಲೇ ಬ್ರೇಕ್ ಪಾಯಿಂಟ್ ಸೃಷ್ಟಿಸಿಕೊಂಡರು. ಬರ್ಡಿನಾ ತಮ್ಮ ಶಾಟ್‌ಗಳಲ್ಲಿ ವೈವಿಧ್ಯತೆ ತರುವ ಪ್ರಯತ್ನ ಮಾಡಿದರೂ ಅದು ಫಲಕಾರಿಯಾಗಲಿಲ್ಲ. ಕೊನೆಯಲ್ಲಿ ಅಂಕಿತಾ 6-0,6-2ರ ಗೆಲುವು ಪಡೆದರು.

ಮಿಂಚಿದ ನಾಕ್ಲೋ,ಗಿಂಬ್ರೇರ್: ಥಾಯ್ಲೆಂಡಿನ ಎ ಚಾಂಟ್ ವಿರುದ್ಧದ ಸಿಂಗಲ್ಸ್ ಪಂದ್ಯದಲ್ಲಿ ಟಿ ನಾಕ್ಲೋ 6-4,6-1 ಅಂತರದಲ್ಲಿ ಗೆಲವು ಸಾಧಿಸಿದರು. ಇಸ್ರೇಲಿನ ಎಮ್ ಲಾರೋನ್ ವಿರುದ್ಧದ ಕ್ವಾರ್ಟರ್‌ನಲ್ಲಿ ನೆದರ್ಲ್ಯಾಂಡ್ಸ್‌ನ ಜಾಸ್ಮಿನ್ ಗಿಂಬ್ರೇರ್ ಕ್ಲಾಸಿಕ್ ಆಟ ಪ್ರದರ್ಶಿಸುವ ಮೂಲಕ 6-2-6-2 ಅಂತರದಲ್ಲಿ ಗೆಲುವು ಪಡೆದುಕೊಂಡು.



ಡಬಲ್ಸ್‌ನಲ್ಲಿ ನಂ.1 ಸ್ಥಾನ ಖಚಿತ

ಡಬಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ಅಗ್ರ 3ನೇ ಶ್ರೇಯಾಂಕಿತ ವೈಷ್ಣವಿ ಅಡ್ಕರ್ ಮತ್ತು ಅಂಕಿತಾ ರೈನಾ 7-6 (5), 6-2 ಸೆಟ್‌ಗಳಿಂದ ಸೋನಾಲ್ ಪಾಟೀಲ್ ಮತ್ತು ಬೇಲಾ ತಮ್ಹಾಂಕರ್ ಅವರನ್ನು ಮಣಿಸಿ ಫೈನಲ್‌ಗೇರಿದರು. ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಆಕಾಂಕ್ಷಾ ದಿಲೀಪ್ ನಿಟ್ಟೂರೆ ಮತ್ತು ಸೋಹಾ ಸಾದಿಕ್ ಜೋಡಿ 6-7 (7), 6-0, 10-5 ಸೆಟ್‌ಗಳಿಂದ ಜಪಾನ್‌ನ ಮಿಚಿಕಾ ಒಜಿಕಿ ಜೋಡಿಯನ್ನು ಸೋಲಿಸಿ ಫೈನಲ್ ತಲುಪಿತು. ಇದರೊಂದಿಗೆ ಭಾರತಕ್ಕೆ ಪದಕ ಖಚಿತವಾಗಿದೆ.

ಮಹಿಳೆಯರ ಟೆಸ್ಟ್: ಭಾರತಕ್ಕೆ ಮಿಶ್ರ ಫಲ

◆ **ಪರ್ತ್:** ಬ್ಯಾಟಿಂಗ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸಿದ ನಂತರ ಬೌಲಿಂಗ್‌ನಲ್ಲಿ ಮಿಂಚಿರುವ ಭಾರತ ತಂಡವು ಸಮಾಧಾನಕರ ಪ್ರದರ್ಶನ ನೀಡದಿದ್ದರೂ ಮಿಶ್ರ ಫಲ ಪಡೆಯಿತು. ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ ಡೆ, ನೈಟ್ ಟೆಸ್ಟ್ ಪಂದ್ಯದಲ್ಲಿ ಭಾರತ ಮೊದಲ ದಿನವೇ ಆಲೌಟ್ ಆಯಿತು, ಆದಾಗ್ಯೂ ಆಸ್ಟ್ರೇಲಿಯಾ ಬ್ಯಾಟರ್‌ಗಳನ್ನು ಕಟ್ಟಿ ಹಾಕಿದ್ದು, 3 ವಿಕೆಟ್‌ಗಳನ್ನು ಪಡೆದುಕೊಂಡಿದೆ. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ರಾಡ್ರಿಗ್ಸ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ 62.4 ಓವರ್‌ಗಳಲ್ಲಿ 198 ರನ್ ಗಳಿಸುವಷ್ಟರಲ್ಲಿ ಆಲೌಟ್ ಆಯಿತು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 97 ರನ್ ಗಳಿಸುವಷ್ಟರಲ್ಲಿ 3 ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿದೆ. ಶೆಫಾಲಿ ವರ್ಮಾ ಉತ್ತಮ ಆರಂಭ ಒದಗಿಸಿದರೂ, ಮಂಧಾನ, ಪ್ರತಿಕಾ ಬೇಗನೇ ವಿಕೆಟ್ ಒಪ್ಪಿಸಿದ್ದು ಭಾರತಕ್ಕೆ ಆಘಾತ ನೀಡಿತು. ಮಧ್ಯಮ ಕ್ರಮಾಂಕದಲ್ಲಿ ರಾಡ್ರಿಗ್ಸ್ 52 ರನ್ ಬಾರಿಸಿದರು. ಕೆಳಕ್ರಮಾಂಕದಲ್ಲಿ ಕಾಶ್ವಿ ಗೌತಮ್ 34 ರನ್‌ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದರು. ಅಷ್ಟೊತ್ತಿಗಾಗಲೇ ಭಾರತ ಪತನಗೊಂಡಿತು. ಆಸ್ಟ್ರೇಲಿಯಾ ಪರ ಆನ್ನಾಬೆಲ್ ಸುದರ್‌ಲೆಂಡ್ 46 ರನ್ ಮಾತ್ರ ನೀಡಿ 4 ವಿಕೆಟ್ ಕಿತ್ತರು. ಪಂದ್ಯದ ಬೆಸ್ಟ್ ಬೌಲರ್ ಎನಿಸಿಕೊಂಡರು. ಲೂಸಿ 3 ವಿಕೆಟ್ ಪಡೆದರು. ಆಸ್ಟ್ರೇಲಿಯಾಗೂ ದೊಡ್ಡ ಆರಂಭ ಸಿಗಲಿಲ್ಲ. ವಾಲ್, ಲಿಚ್‌ಫೀಲ್ಡ್ ಬೇಗನೇ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಎಲ್ಲೀಸ್ ಪೆರ್ರಿ 62 ಬಾಲ್‌ಗಳಲ್ಲಿ ಔಟಾಗದೆ 43 ರನ್ ಗಳಿಸಿ ಬ್ಯಾಟಿಂಗ್ ಉಳಿಸಿಕೊಂಡಿದ್ದಾರೆ. ಅನ್ನಾಬೆಲ್ 20 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದಾರೆ.



ವಿಧಾನಸೌಧದ ಬಳಿ ಬಿಜೆಪಿ ಪ್ರತಿಭಟನೆ



◆ **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ರಾಜ್ಯ ಬಜೆಟ್ ಖಾಲಿ ಚೊಂಬಿನಂತಿದೆ ಎಂದು ಆಕ್ಷೇಪಿಸಿ ಬಿಜೆಪಿ ವತಿಯಿಂದ ವಿಧಾನಸೌಧದ ಬಳಿ ಪ್ರತಿಭಟನೆ ನಡೆಸಲಾಯಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ್, ಉಪ ನಾಯಕ ಅರವಿಂದ ಬೆಲ್ಲದ, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಸೇರಿದಂತೆ ಶಾಸಕರು, ವಿಧಾನಪರಿಷತ್ ಸದಸ್ಯರು ಭಾಗವಹಿಸಿದ್ದರು. ಕನ್ನಡಿಗರಿಗೆ ಖಾಲಿ ಚೊಂಬು ಕೊಟ್ಟ ಕಾಂಗ್ರೆಸ್ ಸರ್ಕಾರ ಎಂಬ ಪೋಸ್ಟರ್ ಹಿಡಿದು ಬಿಜೆಪಿ ಶಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಪ್ರಮುಖರು ಕೈಯಲ್ಲಿ ಖಾಲಿ ಚೊಂಬನ್ನು ಪ್ರದರ್ಶಿಸಿದರು. ಯುವಕರಿಗೆ ಮೋಸ ಮಾಡಿದ ಸರಕಾರಕ್ಕೆ ಧಿಕ್ಕಾರ, 3 ವರ್ಷದಲ್ಲಿ ಮೂರೂವರೆ ಲಕ್ಷ ಕೋಟಿ ಸಾಲ ಮಾಡಿದ ಸರಕಾರಕ್ಕೆ ಧಿಕ್ಕಾರ, ಬಜೆಟ್ಟಂತೆ ಬಜೆಟ್ ಖಾಲಿ ಚೊಂಬಿನ ಬಜೆಟ್- ಎಂಬಿತ್ಯಾದಿ ಘೋಷಣೆಗಳನ್ನು ಕೂಗಲಾಯಿತು.

ರಾಜ್ಯದ ಜನರಿಗೆ ಖಾಲಿ ಚೊಂಬು ನೀಡಿದ ಸಿದ್ದರಾಮಯ್ಯನವರಿಗೆ ಧಿಕ್ಕಾರ, ಕನ್ನಡಿಗಢರಿಗೆ ಖಾಲಿ ಚೊಂಬು ನೀಡಿದ ಸಿದ್ದರಾಮಯ್ಯನವರಿಗೆ ಧಿಕ್ಕಾರ ಎಂದು ಕೂಗಿದರು. ರಾಜ್ಯದ ರೈತರಿಗೆ ಖಾಲಿ ಚೊಂಬು ಕೊಟ್ಟ ಸರಕಾರಕ್ಕೆ ಧಿಕ್ಕಾರ ಎಂದು ಕೂಗಲಾಯಿತು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿಕೆ

ಜನರ ಅಪೇಕ್ಷೆಯಂತೆ ರಾಜ್ಯದಲ್ಲಿ ಬದಲಾವಣೆ

◆ **ಮೈಸೂರು:** ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿಯಿಂದ ರಾಜ್ಯದ ಜನರು ಬೇಸತ್ತು ಹೋಗಿದ್ದಾರೆ. ಬದಲಾವಣೆಯನ್ನು ಬಯಸಿದ್ದಾರೆ. ಹಾಗಾಗಿ ಜನರ ಅಪೇಕ್ಷೆಯಂತೆ ರಾಜ್ಯದಲ್ಲಿ ಬದಲಾವಣೆ ತರಲು ನಾನು ರಾಜ್ಯ ಪ್ರವಾಸವನ್ನು ಕೈಗೊಂಡಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಶುಕ್ರವಾರ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಅವರು, ನಾಡ ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿ, ಪ್ರಾರ್ಥಿಸಿದರು. ಬಳಿಕ ಚಾಮುಂಡಿಬೆಟ್ಟದ ಪಾದದಲ್ಲಿರುವ ಸುತ್ತೂರು ಮಠಕ್ಕೆ ಆಗಮಿಸಿ, ಮಠದ ಪೀಠಾಧಿಪತಿಗಳಾದ ಶ್ರೀಶಿವರಾತ್ರಿದೇಶಿಕೇಂದ್ರ ಸ್ವಾಮಿಯವರನ್ನು ಭೇಟಿ ಮಾಡಿ, ಆಶೀರ್ವಾದ ಪಡೆದರು. ಕುಶಲೋಪರಿ ವಿಚಾರಿಸಿದ ಬಳಿಕ ಮಠದಲ್ಲಿಯೇ ಉಪಹಾರ ಸೇವಿಸಿದರು. ನಂತರ ಮಾಧ್ಯಮದವರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರದ ಜನರ ಎಲ್ಲಾ ನಿರೀಕ್ಷೆಗಳನ್ನು ಸರ್ಕಾರ ಹುಸಿ ಮಾಡಿದೆ. ರಾಜ್ಯದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಕಚ್ಚಾಡುತ್ತಿದ್ದಾರೆ. ಗೊಂದಲ ಗಳಿವೆ. ಕಾನೂನು ಸುವ್ಯವಸ್ಥೆ ಹಾಳಾಗಿದೆ. ಜನರಿಗೆ ನೆಮ್ಮದಿಯಿಲ್ಲದಂತಾಗಿದೆ. ಈ ಕಾರಣ ಜನ ಬದಲಾವಣೆ ಬಯಸಿದ್ದಾರೆ ಎಂದು ಹೇಳಿದರು.



ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ವಿಚಾರದಲ್ಲಿ ಪ್ರಧಾನಮಂತ್ರಿ ನರೇಂದ್ರಮೋದಿ ಅವರ ಬಗ್ಗೆ ಗೊಂದಲ ಮೂಡಿಸುತ್ತಿದ್ದಾರೆ. ಮೋದಿ ಅವರು ಒಳ್ಳೆಯ ಕೆಲಸಗಳನ್ನ ಮಾಡುತ್ತಿದ್ದಾರೆ. ಹೀಗಿದ್ದರೂ ಗೊಂದಲ ಸೃಷ್ಟಿ ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಎನ್. ಸುಬ್ಬಣ್ಣ, ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಸಚಿವ ಎನ್. ಮಹೇಶ್, ಮಾಜಿ ಸಂಸದ ಪ್ರತಾಪ್‌ಸಿಂಹ ಮತ್ತಿತರರು ಹಾಜರಿದ್ದರು.

ಹೋಳಿ ಹಬ್ಬ: ಜೈ ಮಹಾರಾಷ್ಟ್ರ ಹಾಡು, ಆಯೋಜಕರ ವಿರುದ್ಧ ದೂರು

◆ **ಬೆಳಗಾವಿ:** ಹೋಳಿ ಹಬ್ಬದ ದಿನ ಬೆಳಗಾವಿಯ ಅನಗೋಳ ಪ್ರದೇಶದ ರಾಜಹಂಸ ಗಲ್ಲಿಯಲ್ಲಿ ಆಯೋಜಿಸಲಾಗಿದ್ದ ಹೋಳಿ ಹಬ್ಬದ ಸಂಭ್ರಮಾಚರಣೆಯಲ್ಲಿ ಬೇರೆ ರಾಜ್ಯ ಓಲೈಸುವ ಉದ್ದೇಶದಿಂದ 'ಜೈ ಜೈ ಮಹಾರಾಷ್ಟ್ರ ಮಾಜಾ' ಎಂಬ ಹಾಡನ್ನು ಹಾಕಿ ಕುಣಿದು ಮತ್ತೊಂದು ಯಟವಟ್ಟು ಮಾಡಿಕೊಂಡ ಎಂಇಎಸ್ ಪುಂಡರ ವಿರುದ್ಧ ಕನ್ನಡಿಗರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಕೃತ್ಯ ಕನ್ನಡಿಗ ಮತ್ತು ಸಾರ್ವಜನಿಕರ ಭಾವನೆಗಳಿಗೆ ಧಕ್ಕೆ ತಂದಿದ್ದು, ಆಯೋಜಕರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳುವಂತೆ ಕರ್ನಾಟಕ ರಕ್ಷಣಾ ವೇದಿಕೆ ಬೆಳಗಾವಿ ಜಿಲ್ಲಾ ಘಟಕದ ವತಿಯಿಂದ ಟಿಳಕವಾಡಿ ಪೊಲೀಸ್ ಠಾಣೆಯಲ್ಲಿ ಕಾರ್ಯಕ್ರಮದ ಆಯೋಜಕರ ವಿರುದ್ಧ ದೂರು ದಾಖಲಿಸಲಾಗಿದೆ.

ಜೈ ಜೈ ಮಹಾರಾಷ್ಟ್ರ ಮಾಜಾ ಎಂದು ಹಾಡಿಗೆ ನೃತ್ಯ ಮಾಡಿದವರ ಹಾಗೂ ಆಯೋಜಕರ ವಿರುದ್ಧ ಟಿಳಕವಾಡಿ ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿ ಕಠಿಣ ಕ್ರಮಕೈಗೊಳ್ಳಲಿದ್ದಾರೆ.

ಗ್ಯಾರಂಟಿಯಿಂದ ಅಭಿವೃದ್ಧಿ ನಿಂತಿಲ್ಲ: ಜಾರಕಿಹೊಳಿ

◆ **ಬೆಳಗಾವಿ:** ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 50-60 ಸಾವಿರ ಕೋಟಿ ರೂ. ವೆಚ್ಚವಾಗುತ್ತಿರುವುದು ಸರ್ಕಾರದ ಮೇಲೆ ಆರ್ಥಿಕ ಹೊರೆಯಾಗಿದೆ. ಆದರೂ ಅಭಿವೃದ್ಧಿ ಕೆಲಸಗಳು ನಿಂತಿಲ್ಲ ಎಂದು ಲೋಕೋಪಯೋಗಿ ಇಲಾಖೆ ಸಚಿವ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಗ್ಯಾರಂಟಿ ಯೋಜನೆಗಳ ಬಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ, ಸಚಿವ ಎಂ.ಬಿ.ಪಾಟೀಲ ಅಪಸ್ವರ ಎತ್ತಿದ ಬೆನ್ನಲ್ಲೇ, ಸಚಿವ ಸತೀಶ ಜಾರಕಿಹೊಳಿ ಕೂಡ ಅದೇ ಧಾಟಿಯಲ್ಲಿಯೇ ಶುಕ್ರವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಕಳೆದ 2-3 ವರ್ಷಗಳಲ್ಲಿ ಸರ್ಕಾರ ಏನೂ ಮಾಡಿಲ್ಲ, ಎಂಬ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಆರೋಪ ನಿರಾಧಾರ. ನಾವು



ಕೆಲಸ ಮಾಡಿದ್ದೇವೋ ಇಲ್ಲವೋ ಎಂಬುದನ್ನು ಜನರೇ ತೀರ್ಮಾನಿಸುತ್ತಾರೆ. ಗುತ್ತಿಗೆದಾರರ ಬಾಕಿ ಬಿಲ್ ಕುರಿತ ಬೇಡಿಕೆಗಳನ್ನು ಸಿಎಂ ಗಮನಕ್ಕೆ ತಂದರೆ ಸಮಸ್ಯೆ ಬಗೆಹರಿದು ಹಣ ಬಿಡುಗಡೆಯಾಗಲಿದೆ ಎಂದು ತಿಳಿಸಿದರು.

ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ಬದಲಾವಣೆ ಹಾಗೂ ಅಧಿಕಾರ ಹಂಚಿಕೆ ಕುರಿತ ಗೊಂದಲಗಳಿಗೆ ಹೈಕಮಾಂಡ್ ಕೂಡಲೇ ಸ್ಪಷ್ಟನೆ ನೀಡಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಸಂಕಷ್ಟ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಒಬ್ಬರು ಅರ್ಧ ಅವಧಿ ಎನ್ನುತ್ತಾರೆ, ಮತ್ತೊಬ್ಬರು ಪೂರ್ಣ ಅವಧಿ ಎನ್ನುತ್ತಾರೆ. ಇಂತಹ ಚರ್ಚೆಗಳಿಂದ ಶಾಸಕರು, ಕಾರ್ಯಕರ್ತರು ಹಾಗೂ ಅಧಿಕಾರಿಗಳಲ್ಲಿ ಗೊಂದಲದ ವಾತಾವರಣ ನಿರ್ಮಾಣ ಸೃಷ್ಟಿಯಾಗುತ್ತಿದೆ. ಗೊಂದಲ ಹೀಗೆಯೇ ಮುಂದುವರಿದರೆ ಸರ್ಕಾರಕ್ಕೆ ಸಂಕಷ್ಟವಾಗಲಿದೆ ಎಂಬುವುದಕ್ಕೆ ಮೌನವಾದರು.


ದೆಹಲಿ ನಾಯಕತ್ವವೇ ಈ ಬಗ್ಗೆ ಕಟ್ಟುನಿಟ್ಟಿನ ನಿರ್ಧಾರ ಪ್ರಕಟಿಸಬೇಕು. ಸಿಎಂ ಬದಲಾವಣೆ ಇದೆಯೋ ಇಲ್ಲವೋ ಎಂಬುದನ್ನು ಹೈಕಮಾಂಡ್ ಸ್ಪಷ್ಟಪಡಿಸಬೇಕು. ಅಲ್ಲದೆ, ಮೂಲಸೌಕರ್ಯ ವಲಯದಲ್ಲಿ ಪದೇ ಪದೆ ಹೊರಹೊಮ್ಮುತ್ತಿರುವ ಗುತ್ತಿಗೆದಾರರಿಗೆ ಬಾಕಿ ಪಾವತಿಗಳ ವಿಷಯದ ಕುರಿತು, ಮುಖ್ಯಮಂತ್ರಿಗಳ ಗಮನಕ್ಕೆ ತಂದರೆ ಈ ವಿಷಯ ಪರಿಹರಿಸಬಹುದು ಎಂದರು.

ಬಾಕಿ ಇರುವ ಮಸೂದೆಗಳ ವಿಷಯವನ್ನು ಮುಖ್ಯಮಂತ್ರಿ ಮುಂದೆ ಇಟ್ಟ ನಂತರ, ಸಮಸ್ಯೆಯನ್ನು ಪರಿಹರಿಸಲಾಗುವುದು ಮತ್ತು ಹಣ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಪದಬಂಧ

▶▶ ರಾಜಾ ಸಂಗಮೇಶ ಹಿರೇಮಠ

5916



ಎಡದಿಂದ ಬಲಕ್ಕೆ
2.ಭಾರವಾಗಿ ಉಸಿರಾಡು (4)
4.ಹತ್ತೂರಲ್ಲೂ ನೆಲೆಸಿರುವ ಶಿವ (2)
5.ಚಲಿಸುವುದರ ನಡುವೆ ಬುದ್ಧಿವಂತನಿದ್ದಾನೆ (3)
6.ಎಳೆಯ ಬಿಸಿಲನ್ನು ಹೀಗೂ ಹೇಳುತ್ತೇವೆ (5)
9.ಸಣ್ಣ ಗಂಟೆಗಳಿರುವ ಕಾಲಿನ ಆಭರಣ (4)
10.ಭಗವಂತನ ಸೇವಕ ಚಲನಚಿತ್ರವಾಗಿದ್ದಾನೆ (4)
13.ಲಲಿತಕಲೆಗಳ ಸಾರವನ್ನು ಅನುಭವಿಸು (5)
15.ದೊಡ್ಡ ಜಲವಾಹ (4)
17.ಸ್ವತಂತ್ರವಾಗಿ ಉಚ್ಚರಿಸುವ ವರ್ಣ (2)
18.ಕಾಸು ಕೊಟ್ಟು ದಾರ ಖರೀದಿಸಿದ ಕುದುರೆಯ ಸೇವಕ (4)

ಮೇಲಿನಿಂದ ಕೆಳಕ್ಕೆ
1.ಮಲಗಲು ಉಪಯೋಗಿಸುವ ಆಸನ (2)
2.ಘೋಷಣೆ-ಅಲಂಕಾರಗಳೊಂದಿಗೆ ಸಾಗುವ ಕಾರ್ಯಕ್ರಮ (5)
3.ಧನಸಂಪತ್ತಿನಿಂದ ಕೂಡಿದ ಸ್ಥಿತಿ (4)
4.ಆಯುಧದ ಅಲಗು ಚೂಪಾಗಿದೆ (3)
7.ವ್ಯಕ್ತಿ-ವಸ್ತುವಿನ ಸುತ್ತಲಿನ ಪರಿಸ್ಥಿತಿ (4)
8.ಸಾಲ ಪಡೆದು ಕೊಡದೇ ಇರುವವನು (4)
11.ಬಲವಾದ ರಕ್ಷಣೆ-ದೃಢವಾದ ಗೂಡು (5)
12.ಒಂಬತ್ತು ಬಗೆಯ ಕಲೆಯ ಭಾವಗಳು (4)
14. ಆಕೃತಿ ಸಹಿತವಾಗಿರುವಿಕೆ (3)
16.ತಲೆಯ ಮೇಲಿನ ಶಿಖೆ (2)

5915 ಉತ್ತರ

ಎಡದಿಂದ ಬಲಕ್ಕೆ:
3.ಪಾಪಸುಕಳ್ಳಿ
5.ಭವತಾರಿಣಿ 6.ಪಾಶ
7.ಕಾರ್ಯ 9.ಕಳವಳ
11.ದೇವಾಲಯ
15.ಆವಿ 16.ಭಯ
17.ಭಾಷಾವಿಜ್ಞಾನ
19.ವರದಿಗಾರ

ಮೇಲಿನಿಂದ ಕೆಳಕ್ಕೆ:
1.ಶುಭಮಂಗಳ
2.ಶೀತಾ 3.ಪಾಣಿಪಾತ್ರ
4.ಕನಕಾಚಲ 8.ಮೊಳ
10.ವನವಿಹಾರ 12.ವಾಣಿ
13.ಯಮುನಾನದಿ
14.ರಾಯಭಾರ 18.ವಿದ್ಯೆ

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಮಾರ್ನಿಂಗ್ ಶೋ
ಶನಿವಾರ 7 ಮಾರ್ಚ್ 2026, ಬೆಂಗಳೂರು

ಚಿತ್ರ ವಿಮರ್ಶೆ

ಒರಿಯೋ ಹಾರರ್ ಜತೆ ಸಾರ್ವಜನಿಕರಿಗೆ ಸಂದೇಶ..



ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರಲ್ಲಿ ಪರಿಸರ ಕಾಳಜಿ ಮರೆಯಾಗುತ್ತಿದೆ, ಎಲ್ಲರೂ ತಂತಮ್ಮ ಸ್ವಾರ್ಥ ಪ್ರಪಂಚದಲ್ಲೇ ಮುಳುಗಿ ನಮ್ಮ ಸುತ್ತಲಿನ ಪರಿಸರದ ಸಂರಕ್ಷಯ ಬಗ್ಗೆ ಮರೆತೇ ಬಿಡುತ್ತಿದ್ದಾರೆ. ಜನರಲ್ಲಿ ಅದರ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನವನ್ನು ನಿರ್ದೇಶಕ ನಂದನ ಪ್ರಭು ಅವರು ಮಾಡಿರುವ ಚಿತ್ರ ಒರಿಯೋ ಈವಾರ ತೆರೆಕಂಡಿದೆ, ಹಾರರ್ ಜತೆಗೆ ಪರಿಸರ ಜಾಗೃತಿ ಮೂಡಿಸುವ ಕಥಾಹಂದರವನ್ನು ನಿರ್ದೇಶಕ ನಂದನ ಪ್ರಭು ಅವರು ಮಾಡಿದ್ದಾರೆ. ಈ ಮೂಲಕ ಸಿನಿ ಪ್ರೇಕ್ಷಕರಿಗೆ ಒಂದು ಹೊಸ ಅನುಭವ ತಂದುಕೊಡುವ ಪ್ರಯತ್ನ ಮಾಡಿದ್ದಾರೆ. ಮಾಜಿ ರಾಷ್ಟ್ರಪತಿ ದಿ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಸಾಧನೆಗೈಯಬೇಕು ಎಂದರೆ ಏನಾದರೂ ಮಾಡಬೇಕು ಎಂಬ ಅವರ ಸ್ಫೂರ್ತಿದಾಯಕ ಮಾತುಗಳಿಂದಲೇ ಒರಿಯೋ ಚಿತ್ರವಾಗಿದ್ದು ಇದೀಗ ತನ್ನ ವಿಭಿನ್ನ ಕಂಟೆಂಟ್ ಮೂಲಕ ಸಿನಿ ಪ್ರೇಕ್ಷಕರನ್ನು ಸೆಳೆಯುತ್ತಿದೆ,

ಇನ್ನು ಒರಿಯೋ ಚಿತ್ರದ ಕಥೆಯೇ ವಿಶೇಷವಾಗಿದೆ, ಕತ್ತಲು ಮತ್ತು ಬೆಳಕಿನ ನಡುವೆ ನಡೆಯುವ ಕಥೆಯಿದು, ಸಸ್ಪೆನ್ಸ್, ಥ್ರಿಲ್ಲರ್, ಲವ್, ಆಕ್ಷನ್‌ನಂಥ ಎಲ್ಲ ಮನರಂಜನಾತ್ಮಕ ಅಂಶಗಳು ಈ ಚಿತ್ರದಲ್ಲಿದ್ದು, ಅದೇ ಕಾರಣದಿಂದ ಈ ಚಿತ್ರವು ಎಲ್ಲ ವರ್ಗದ ಜನರನ್ನು ಸೆಳೆಯುತ್ತಿದೆ, ಜತೆಗೆ ಒರಿಯೋ ಚಿತ್ರದಲ್ಲಿ ಎಲ್ಲರಿಗೂ ಅನ್ವಯವಾಗುವಂಥ ಒಂದು ಅದ್ಭುತವಾದ ಸಂದೇಶವಿದೆ, ಈ ಚಿತ್ರಕ್ಕೆ ಸಕಲೇಶಪುರ, ಮಡಿಕೇರಿ ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ,

ನಾವು ಈಗಲೇ ಜಾಗೃತರಾಗಬೇಕು, ಒಂದು ವೇಳೆ ಎಚ್ಚರ ತಪ್ಪಿದರೆ, ಮುಂದೊಂದು ದಿನ ಹೀಗೂ ಆಗಬಹುದು ಎಂಬ ಎಚ್ಚರಿಕೆಯ ಸಂದೇಶವನ್ನು ನಿರ್ದೇಶಕರು ಈ ಚಿತ್ರದಲ್ಲಿ ಹೇಳಿದ್ದಾರೆ, ಇದು ಇಡೀ ವಿಶ್ವಕ್ಕೆ ನೀಡುವಂಥ ವಿಭಿನ್ನ ಸಂದೇಶ ಎನ್ನಬಹುದು, ಹಾರರ್ ಕಂಟೆಂಟ್ ಜೊತೆಗೆ ಪರಿಸರ ಕಾಳಜಿಯನ್ನು ಮೂಡಿಸುವ ಅಂಶ ಚಿತ್ರದಲ್ಲಿರುವುದು ಪ್ರೇಕ್ಷಕರನ್ನು ಸೆಳೆಯುತ್ತಿದೆ ಇನ್ನು ಈ ಚಿತ್ರದ ಪೋಸ್ಟರ್‌ನಲ್ಲಿ ತೋರಿಸಿರುವ 5 ಹೆಡೆಯ ಹಾವಿಗೂ ಚಿತ್ರಕಥೆಗೂ ಏನು ಸಂಬಂಧ ಎಂಬ ಕುತೂಹಲ ಎಲ್ಲರನ್ನೂ ಕಾಡುವುದು ಸಹಜ, ಚಿತ್ರದಲ್ಲಿ ಅದಕ್ಕೆ ನಿರ್ದೇಶಕರು ಉತ್ತರವನ್ನೂ ನೀಡಿದ್ದಾರೆ,

ಒರಿಯೋ ಚಿತ್ರದಲ್ಲಿ ನಾಯಕನಾಗಿ ನಟಿಸಿರುವ ನಿತಿನ್‌ಗೌಡ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ನಾಯಕಿ ಶುಭಿ ಅವರು ಸಹ ತಮ್ಮ ಅಭಿನಯದ ಮೂಲಕವೇ ನೋಡುಗರನ್ನು ಸೆಳೆಯುತ್ತಾರೆ, ಚಿತ್ರದಲ್ಲಿ ಒಬ್ಬ ಸಾಮಾನ್ಯ ಕ್ಯಾಬ್‌ಡ್ರೈವರ್ ಪಾತ್ರ ಮಾಡಿರುವ ಸುಚಿತ್ ಮಂಜುನಾಥ್ ಅವರ ಅದ್ಭುತ ಅಭಿನಯ ಈ ಚಿತ್ರದ ಮತ್ತೊಂದು ಪ್ಲಸ್ ಪಾಯಿಂಟ್.

ಒಂದು ಸಂದರ್ಭದಲ್ಲಿ ಇವರೆಲ್ಲ ಕಾಡಿಗೆ ಹೋದಾಗ ಅಲ್ಲಿ ಏನೇನೆಲ್ಲ ಘಟನೆಗಳು ಸಂಭವಿಸುತ್ತದೆ ಎನ್ನುವುದೇ ಈ ಚಿತ್ರದ ಕಥಾಹಂದರ. ಮತ್ತೊಬ್ಬ ನಟಿ ಯುಕ್ತ, ಕಾಮಿಡಿ ಪಾತ್ರದಲ್ಲಿ ಚಕ್ರವರ್ತಿ ತಂತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಸಾಯಿಕಿರಣ್ ಅವರ ಸಂಗೀತ ಸಂಯೋಜನೆಯ ಒಂದು ಹಾಡು ಸಂದರ್ಭಕ್ಕನುಗುಣವಾಗಿ ಮೂಡಿಬಂದಿದೆ, ಹಿನ್ನೆಲೆ ಸಂಗೀತ ಚಿತ್ರದ ಓಟಕ್ಕೆ ಸಾಥ್ ನೀಡಿದೆ. ಛಾಯಾಗ್ರಾಹಕ ಬ್ಯಾಟಪ್ಪ ಗೌಡ ಹಾಗೂ ಪ್ರಭಾಕರ್ ಅವರ ಕ್ಯಾಮೆರಾ ಕೈಚಳಕ ಕೂಡ ಚೆನ್ನಾಗಿದೆ,

ನಂದನ್‌ಪ್ರಭು ಅವರು ಈ ಹಿಂದೆ ಪ್ರೀತಿಯಲೋಕ ಹಾಗೂ ಲವ್ ಈಸ್ ಪಾಯಸನ್ ಎಂಬ ಎರಡು ಚಿತ್ರಗಳನ್ನು ನಿರ್ದೇಶಿಸಿದ್ದರು. ಒರಿಯೋ ನಂದನ್ ಪ್ರಭು ಅವರ ನಿರ್ದೇಶನದ ಮೂರನೇ ಚಿತ್ರ.

ಈಗಿನ ಮೆಜೆಸ್ಟಿಕ್‌ನಲ್ಲೂ ಲಾಂಗಿದೆ, ಲವ್ವೂ ಇದೆ...

▸ ಸತ್ಯಮೂರ್ತಿ

ತಂದೆ ತಾಯಿಯ(ಶ್ರುತಿ, ಶಶಿಶಧರ್ ಭಟ್) ಮುದ್ದಿನ ಮಗನಾದ ದಾಸ(ಭರತ್‌ಕುಮಾರ್) ಕಾಲೇಜಲ್ಲಿ ರ್‍ಯಾಂಕ್ ಸ್ಟೂಡೆಂಟ್. ಬಡವರು, ಕಷ್ಟದಲ್ಲಿರುವವರನ್ನು ಕಂಡರೆ ಸಹಾಯ ಮಾಡುವ ದೊಡ್ಡ ಗುಣ ಆತನದು, ಆಕಸ್ಮಿಕವಾಗಿ ತಂದೆಯ ನಿಧನದ ನಂತರ ಮರಿದಾಸ ತರ್ಳ್ಳೋ ಗಾಡಿ ಹೋಟೆಲ್‌ನಲ್ಲಿ ಕೆಲಸ ಮಾಡುತ್ತ, ಸ್ಟಡಿ ಮುಂದುವರೆಸಿರುತ್ತಾನೆ, ಕೆಲಸಕ್ಕಾಗಿ ಹಳ್ಳಿಯಿಂದ ಸಿಟಿಗೆ ಬಂದ ಪ್ರೀತಿ(ಸಂಹಿತಾ)ಯ ಪರಿಚಯ ಆಗಿ ಆಕೆಯ ಜತೆ ಪ್ರೇಮಾಂಕುರವಾಗುತ್ತದೆ, ಬೆಂಗಳೂರನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದ ಬಂಗಾರಿಯ ಕಾರಣದಿಂದ ದಾಸನ ಜೀವನದಲ್ಲಿ ಬಿರುಗಾಳಿ ಎದ್ದೇಳುತ್ತದೆ, ತನಗೆ ಎಷ್ಟೇ ಅವಮಾನ ಮಾಡಿದಾಗಲೂ ಸುಮ್ಮನಿದ್ದ ದಾಸ, ಪ್ರೀತಿಯ ಸೆರಗಿಗೆ ಕೈ ಹಾಕಿದಾಗ ಸಿಡಿದೇಳುತ್ತಾನೆ, ದಾಸ ಆಕಸ್ಮಿಕವಾಗಿ ಮಚ್ಚು ಹಿಡಿದ ದಾಸ ಬಂಗಾರಿಯ ತಲೆಯನ್ನೇ ಕತ್ತರಿಸುತ್ತಾನೆ, ಓದಿ ತಂದೆಯಿಲ್ಲದ ಮನೆಗೆ ಬೆಳಕಾಗಬೇಕಾಗಿದ್ದ ದಾಸ ರೌಡಿಯ ಕೊಲೆ ಮಾಡಿ ಜೈಲು ಸೇರಬೇಕಾಗುತ್ತದೆ, ರೌಡಿಶೀಟರ್ ಪಟ್ಟ ಆತನದಾಗುತ್ತದೆ. ಆತ ಜೈಲುವಾಸ ಮುಗಿಸಿ ಹೊರಬಂದ ಮೇಲೆ ಸದಾ ಹೊಡೆದಾಡಿಕೊಂಡಿದ್ದ ಬಂಗಾರಿಯ ಶಿಶ್ಯರಾದ ಬಲರಾಮ (ಕೋಟೆ ಪ್ರಭಾಕರ್) ಹಾಗೂ ಸಕ್ರೆ(ಪೆಟ್ರೋಲ್ ಪ್ರಸನ್ನ) ಒಂದಾಗಿ ತಮ್ಮ ಬಾಸ್ ತಲೆಯನ್ನೇ ತೆಗೆದ ದಾಸನ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಾರೆ, ದಾಸನನ್ನ ಲಾಕ್ ಮಾಡಲು ಹೊಂಚು ಹಾಕ್ತಿರ್ತಾರೆ. ದಾಸ ತನ್ನ ತಾಯಿ ಹಾಗೂ ಪ್ರೀತಿಯ ಮಾತಿಗೆ ಕಟ್ಟು ಬಿದ್ದ ದಾಸ ಇವರ ಮೇಲೆ ಆಯುಧ ಚಲಾಯಿಸದೆ ಸುಮ್ಮನಿದ್ದು ಬಿಡುತ್ತಾನೆ. ಆದರೆ ದಾಸ ಸುಮ್ಮನಿದ್ದರೂ ಇವರಿಬ್ಬರೂ ಸಿಮ್ಮನಿರದೆ ದಾಸನಿಗೆ ತೊಂದರೆ ನೀಡುತ್ತಲೇ ಇರುತ್ತಾರೆ. ಇದೇ ಕಾರಣಕ್ಕೆ ದಾಸ ತನ್ನ ತಾಯಿಯನ್ನೂ ಸಹ ಕಳೆದುಕೊಳ್ಳಬೇಕಾಗುತ್ತದೆ,



ಮುಂದೆ ದಾಸನ ಸ್ಥಿತಿ ಏನೇಯಿತು, ತನ್ನ ಈ ಸ್ಥಿತಿಗೆ ಹಾಗೂ ತಾಯಿಯ ಸಾವಿಗೆ ಕಾರಣರಾದ ಬಲರಾಮ ಹಾಗೂ ಸಕ್ರೆಯ ಮೇಲೆ ಸೇಡು ತೀರಿಸಿಕೊಳ್ತಾನಾ, ಇಲ್ವಾ ಎನ್ನುವುದೇ ಚಿತ್ರದ ಕ್ಲೈಮ್ಯಾಕ್ಸ್, ನಾಯಕ ಭರತ್ ಮೊದಲ ಚಿತ್ರದಲ್ಲೇ ಉತ್ತಮ ಅಭಿನಯ ನೀಡಿದ್ದಾರೆ, ತಾಯಿಯಾಗಿ ಶೃತಿ ಅವರದು ಮಾಗಿದ ಅಭಿನಯ, ನಾಯಕಿ ಸಂಹಿತಾ ವಿನ್ಯಾ ಇಡಿ ಚಿತ್ರದ ಹೈಲೈಟ್, ಏಕೆಂದರೆ ಅವರ ಕಾರಣದಿಂದಲೇ ನಾಯಕ ಮಚ್ಚು ಹಿಡಿಯಬೇಕಾಗುತ್ತದೆ, ಚಿತ್ರಕಥೆಗೆ ಅಂತ್ಯ ಹಾಡುವುದು ಕೂಡ ಇದೇ ಪಾತ್ರ. ಮೆಜೆಸ್ಟಿಕ್ 2 ಚಿತ್ರದಲ್ಲಿ ವಿನು ಮನಸು ಅವರ ಸಂಗೀತದ ಹಾಡುಗಳು ಹಾಗೂ ವೀನಸ್ ಮೂರ್ತಿ ಅವರ ಕ್ಯಾಮೆರಾ ವರ್ಕ್ ಉತ್ತಮವಾಗಿದೆ,

ಸಾವು ಕೂಡ ಮರಿದಾಸ ಅನ್ನೋ ಹೆಸರ್ ಕೇಳಿದ್ರೆ ಸೈಲೆಂಟಾಗುತ್ತೆ, ನಿನ್ನ ನೆರಳಿಗೆ ಗೊತ್ತಾಗ್ದೇ ಇರೋದು ಕರುಳಿಗೆ ಗೊತ್ತಾಗುತ್ತೆ ಕಣೋ, ಇಂಥ ಹಲವಾರು ಡೈಲಾಗ್‌ಗಳು ನೆನಪಲ್ಲುಳಿಯುತ್ತವೆ, ಅಮ್ಮಾ ಎಂಟರ್‌ಪ್ರೈಸಸ್ ಮೂಲಕ ಚಿತ್ರದುರ್ಗದ ಹೆಚ್.ಆನಂದಪ್ಪ ಈ ಚಿತ್ರದ ನಿರ್ಮಾಪಕರು. ಈಗಿನ ಮೆಜೆಸ್ಟಿಕ್ ಏರಿಯಾ, ಅಲ್ಲಿ ನಡೆಯುವ ದಂಧೆಗಳು, ಅಕ್ರಮ ಚಟುವಟಿಕೆಗಳು ಅಲ್ಲದೆ ಈಗಲೂ ಅಲ್ಲಿ ರೌಡಿಸಂ ಹೇಗೆ ನಡೆಯುತ್ತೆ ಎಂಬುದನ್ನು ಅಲ್ಲಿಯೇ ಹುಟ್ಟಿ ಬೆಳೆದ ಹುಡುಗನೊಬ್ಬನ ಮೂಲಕ ಹೇಳೋ ಚಿತ್ರವಿದು.

ದರ್ಶನ್ ವಿರುದ್ಧ ರೌಡಿ ಶೀಟರ್ ಸಾಕ್ಷಿ!

ನಟ ದರ್ಶನ್‌ಗೆ ವಿಚಾರಣೆಯಲ್ಲಿ ಅನುಕೂಲವಾಗುವಂಥ ಸನ್ನಿವೇಶ ನಡೆದಿದೆ. ಸದ್ಯ ಕೊಲೆ ಆರೋಪಿ ಆಗಿರುವ ದರ್ಶನ್, ಅದರ ಕುರಿತು ಪೊಲೀಸರು ದಾಖಲು ಮಾಡಿಕೊಂಡಿರುವ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗುತ್ತಿದೆ.



ಮಹತ್ತರ ಸಾಕ್ಷಿಯೊಂದಕ್ಕೆ ಬೆಂಗಳೂರು ಕಾಮಾಕ್ಷಿಪುರ ಪೊಲೀಸರು, ಸಾಕ್ಷಿಯೊಬ್ಬರನ್ನು ದಾಖಲಿಸಿಕೊಂಡಿದ್ದಾರೆ. ಶಿವು ಎಂಬಾತ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಕೊಟ್ಟಿದ್ದಾನೆ. ದರ್ಶನ್ ಪರ ವಾದ ಮಾಡುವ ವಕೀಲ ಸುಧನ್ವ ಎನ್ನುವವರು, ಸಾಕ್ಷಿದಾರರನ್ನು ಪ್ರಶ್ನಿಸುತ್ತಾ, ನ್ಯಾಯಾಧೀಶರ ಮುಂದೆ ಈತ ರೌಡಿಶೀಟರ್ ಆಗಿದ್ದಾನೆ, ಹಾಗಾಗಿ ಈತನ ಹೇಳಿಕೆ ದಾಖಲು ಮಾಡುವುದು ಎಷ್ಟು ಸರಿ ? ಎಂದು ಪ್ರಶ್ನಿಸಿದ್ದಾರೆ. ಇದು ರೌಡಿ ಶೀಟರ್‌ನನ್ನು ಸಾಕ್ಷಿದಾರನನ್ನಾಗಿ ಮಾಡಿದ ಪೊಲೀಸರಿಗೆ ಕಸಿವಿಸಿ ತಂದಿದೆ, ನ್ಯಾಯಾಧೀಶರು ಕೂಡಾ ಸಾಕ್ಷಿದಾರ ರೌಡಿಶೀಟರ್ ಆಗಿರುವುದಕ್ಕೆ ಅಸಮಾಧಾನ ವ್ಯಕ್ತ ಪಡಿಸಿದ್ದಾರೆ. ಈಗಾಗಲೇ ರೇಣುಕಾಸ್ವಾಮಿಯ ತಾಯಿ ಪೊಲೀಸರು ಒಂದಷ್ಟು ತಪ್ಪು ಮಾಹಿತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದಾರೆ ಎಂದು ನೇರವಾಗಿ ಹೇಳಿದ್ದಾರೆ. ಈ ಹೇಳಿಕೆಯನ್ನು ಪೊಲೀಸರು ನಿರೀಕ್ಷಿಸಿರಲಿಲ್ಲ. ಈ ನ್ಯಾಯಾಲಯದ ಕಲಾಪಗಳು ದರ್ಶನ್ ಜಾಮೀನಿಗೆ ಅನುಕೂಲವಾಗುವ ಸಾಧ್ಯತೆ ಇದೆ.

ದರ್ಶನ್ ಜಾಮೀನನ್ನು ಸುಪ್ರೀಂ ಕೋರ್ಟು ನಿರಾಕರಿಸಿರುವುದರಿಂದ, ಬೆಂಗಳೂರು ಸೆಷನ್ಸ್ ಕೋರ್ಟಿನಲ್ಲಿ ಮತ್ತೆ ಜಾಮೀನು ಸಲ್ಲಿಸಲು ಆರು ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಈಗ ಈ ಕಾಲಾವಕಾಶ ಬಂದಿದ್ದು ದರ್ಶನ್ ವಕೀಲರು ಯಾವ ಹಂತದಲ್ಲಾದರೂ ಜಾಮೀನಿಗೆ ಅರ್ಜಿ ಸಲ್ಲಿಸಬಹುದು. ಸಾಕ್ಷಿಗಳು ಪೊಲೀಸರ ಮುಂದೆ ನೀಡಿದ ಹೇಳಿಕೆಗೂ, ನ್ಯಾಯಾಧೀಶರ ಮುಂದೆ ನೀಡುತ್ತಿರುವ ಹೇಳಿಕೆಗೂ ವ್ಯತ್ಯಾಸ ಕಾಣಲಾಗುತ್ತಿದೆ. ಇದು ದರ್ಶನ್ ಜಾಮೀನಿಗೆ ಅನುಕೂಲ ಆಗುವ ಸಾಧ್ಯತೆಯನ್ನು ನಿರೀಕ್ಷಿಸಲಾಗಿದೆ.

ದರ್ಶನ್‌ಗೆ ಜಾಮೀನು ಸಿಗಬಹುದು ಎನ್ನುವ ನಿರೀಕ್ಷೆಯಲ್ಲಿರುವ ಕೆಲವು ನಿರ್ಮಾಪಕರು ದರ್ಶನ್ ಚಿತ್ರಕ್ಕಾಗಿ ಕಥೆ ಸಿದ್ಧ ಮಾಡುತ್ತಿರುವುದೂ ಈಗ ನಡೆದಿದೆ. ಈ ಪಟ್ಟಿಯಲ್ಲಿ ಶೈಲಜಾನಾಗ್ ಹಾಗೂ ದಿನಕರ್ ಇದ್ದಾರೆ.

ವಿಮರ್ಶೆಗೂ ನಿಯಮ!

ಮೆಜೆಸ್ಟಿಕ್ ದರ್ಶನ್‌ಗೆ ಸ್ಟಾರ್‌ವ್ಯಾಲ್ಯೂ ತಂದುಕೊಟ್ಟ ಚಿತ್ರ. ಈಗ ಮೆಜೆಸ್ಟಿಕ್-2 ಚಿತ್ರ ತೆರೆಕಂಡಿದೆ. ಈ ಚಿತ್ರದಲ್ಲಿ ದರ್ಶನ್ ಇಲ್ಲ. ಭರತ್‌ಕುಮಾರ್ ಮತ್ತು ಸಂಹಿತಾ ವಿನ್ಯಾ ಅಭಿನಯಿಸಿದ್ದಾರೆ. ಚಿತ್ರದ ಪಿಆರ್‌ಓ ಕನ್ನಡ ಚಿತ್ರರಂಗದಲ್ಲಿ



ಬಹುಅಪರೂಪ ಎನ್ನಬಹುದಾದ ನೋಟ್ ಕಳುಹಿಸಿದ್ದಾರೆ. ಈ ನೋಟನ್ನು ಯಾರನ್ನು ಉದ್ದೇಶಿಸಿ ಮಾಡಲಾಗಿದೆ ಎಂದು ವಿವರಿಸುವ ಅಗತ್ಯವಿಲ್ಲ.

ಸಿನಿಮಾ ಅಂದರೆ ಪ್ರಚಾರ. ಇದು ಬಿಡುಗಡೆ ಪೂರ್ವದ ಸಿದ್ಧತೆ. ಆನಂತರ ಸಿನಿಮಾ ವೀಕ್ಷಣೆ ಮತ್ತು ವಿಮರ್ಶೆ. ಈಗ ವಿಮರ್ಶೆಯನ್ನು ಆಹ್ವಾನ ಇಲ್ಲದೆಯೂ ಮಾಡಬಹುದು. ಆದರೆ ಇದು ಅಷ್ಟಕ್ಕೆ ನಿಲ್ಲುವುದಿಲ್ಲ. ನಿರ್ಮಾಪಕರಿಗೆ ಬೇಡವಾದವರಿಂದಲೂ ವಿಮರ್ಶೆ ದಾಖಲಾಗುತ್ತದೆ. ಅಲ್ಲಿಂದ ಮುಂದೆ ಇಷ್ಟು ಲಕ್ಷ ವೀಕ್ಷಕರಿದ್ದಾರೆ, ಒಳ್ಳೆ ವಿಮರ್ಶೆ ಬರುತ್ತೆ ಎನ್ನುವ ಕಾರಣಗಳನ್ನು ನಮೂದಿಸಿ ಬಿಲ್ ಹೋಗುತ್ತೆ. ಆ ಮೇಲೆ ಒತ್ತಡ, ಆದರೆ ಆ ಕಡೆ ಚಿತ್ರ ನೋಡಲು ಜನ ಬರುವುದಿಲ್ಲ, ಈ ಚಿಂತೆಯೊಂದಿಗೆ ನಿರ್ಮಾಪಕ ಹೈರಾಣ. ಇದೆಲ್ಲವನ್ನೂ ಅನುಭವಿಸಿರುವ ಮೆಜೆಸ್ಟಿಕ್ ನಿರ್ಮಾಪಕರು ಚಿತ್ರ ವೀಕ್ಷಣೆಗೆ ದಯವಿಟ್ಟು ಬನ್ನಿ, ಆನಂತರ ಏನನ್ನೂ ಅಪೇಕ್ಷಿಸಬೇಡಿ ಎಂದು ತಮ್ಮ ಚಿತ್ರದ ಪಿಆರ್‌ಓ ಮೂಲಕ ನೇರ ಸೂಚನೆ ಕಳುಹಿಸಿದ್ದಾರೆ. ಇದೇನು ಹೀಗೆ ? ಎಂದು ಪಿಆರ್‌ಓ ಬಳಿ ಪ್ರಸ್ತಾಪಿಸಿದರೆ, ಚಿತ್ರಕ್ಕೆ ಅನುಕೂಲವಾಗುವಂಥವರಿಂದ ಮಾತ್ರ ವಿಮರ್ಶೆಗಳು ದಾಖಲಾಗಲಿ, ಅದು ಬಿಟ್ಟು ಗೊತ್ತು ಗುರಿಯಿಲ್ಲದವರಿಂದ ಬರುವ ವಿಮರ್ಶೆಗಳು, ಆನಂತರ ಕೋರಿಕೆಗಳು ಯಾಕೆ ಬೇಕು ? ಎಂದು ಪ್ರಶ್ನಿಸುತ್ತಾರೆ. ಮುಂದಿನ ದಿನಗಳಲ್ಲಿ ಒಂದಷ್ಟು ನಿರ್ಮಾಪಕರು ತಮ್ಮ ಚಿತ್ರಗಳಿಗೆ ಈ ನಿಯಮ ಜಾರಿಗೆ ತರುವ ಪ್ರಯತ್ನದಲ್ಲಿದ್ದಾರೆ.

ಪಂಚರತ್ನಗಳು ಹಿರಿಯರಿಗೆ ಮಕ್ಕಳಿಂದ ಪಾಠ



ಬೆಂಗಳೂರಿನ ಗುರುಮೂರ್ತಿ ನಗರದ ಆಕಾಶ್, ಜೀವಿತಾ, ಜ್ಯೋತಿ, ಅನಿಲ್, ಭುವನ್ ಈ ಐವರು ಮಕ್ಕಳ ಸಾಹಸದ ಕಥೆಯನ್ನು ಈ ಶುಕ್ರವಾರ ತೆರೆಕಂಡಿರುವ ಪಂಚರತ್ನಗಳು ಚಿತ್ರದ ಮೂಲಕ ನಿರ್ದೇಶಕ ಗೌತಮ್ ಅವರು ಹೇಳೋ ಪ್ರಯತ್ನ ಮಾಡಿದ್ದಾರೆ, ಈ ಐವರು ಮಕ್ಕಳಲ್ಲೂ ಒಂದೊಂದು ವಿಶೇಷ ಟ್ಯಾಲೆಂಟ್ ಇರುತ್ತದೆ, ಅದರಲ್ಲಿ ಡಾನ್ಸ್ ಅಂದ್ರೆ ಆಕಾಶ್‌ಗೆ ಪಂಚಪ್ರಾಣ, ತಂದೆಯಿಲ್ಲದ ಆತ, ತಾಯಿಯ ಆಸರೆಯಲ್ಲೇ ಬೆಳೆದಿರುತ್ತಾನೆ. ಇನ್ನು ಜೀವಿತಾಳದು ಒಂದು ಗುಣ, ಆಕೆ ನೀರಿನ ಥರ ಹೇಗೆ ಬೇಕಾದ್ರೂ ಬದಲಾಗಬಲ್ಲ ಚುರುಕು ಬುದ್ದಿಯುಳ್ಳವಳು, ಇನ್ನು ಭುವನ್ ಅಪ್ಪಟ ಕನ್ನಡ ಪ್ರೇಮಿ, ಆತನ ಭಾಷಾ ಜ್ಞಾನ ಯಾರಿಗೂ ಬರದು, ನಂತರ ಜ್ಯೋತಿ ಕೂಡ ಬೆಂಕಿಯ ಥರ ಹೈ ಎನರ್ಜಿ ಉಳ್ಳವಳು, ಮತ್ತೊಬ್ಬ ಅನಿಲ್, ಗಾಳಿಯ ಥರ ಎಲ್ಲಿ ಬೇಕಾದ್ರೂ ತೂರಿಕೊಳ್ಳುವವನು. ಈ ಐವರು ಮಕ್ಕಳು ಗುರುಮೂರ್ತಿ ನಗರ ಎಂಬ ಒಂದೇ ಏರಿಯಾದವರು. ಆತ್ಮೀಯ ಸ್ನೇಹಿತರು, ಪ್ರತಿದಿನ ಒಟ್ಟಾಗಿ ಸೇರಿ ಆಟ ಆಡಿಕೊಂಡಿರುತ್ತಾರೆ,

ಒಮ್ಮೆ ಆಕಾಶ್ ತಾಯಿ ಕೆಲಸ ಮುಗಿಸಿಕೊಂಡು ಸ್ಕೂಟರ್‌ನಲ್ಲಿ ಮನೆಗೆ ಬರುವಾಗ ರಸ್ತೆಯಲ್ಲಿ ಮಳೆಯಿಂದುಂಟಾದ, ಇನ್ನೂ ಮುಚ್ಚದೇ ಇರುವ ಗುಂಡಿಗೆ ಆಯತಪ್ಪಿ ಬಿದ್ದ ಕಾರಣ, ಕೈಗೆ ಬಲವಾದ ಏಟು ಬೀಳುತ್ತದೆ, ಬ್ಯಾಂಡೇಜ್ ಹಾಕಿಕೊಂಡು ಮನೆಗೆ ಬಂದ ತಾಯಿ, ಯಾವುದೇ ಕೆಲಸ ಮಾಡಲಾಗದೆ ನೋವಿನಿಂದ ನರಳಾಡುವುದನ್ನು ಕಂಡ ಅನಿಲ್ ಇದಕ್ಕೆ ಕಾರಣ ಏನೆಂದು ಹುಡುಕುತ್ತಾನೆ, ತನ್ನ ಸ್ನೇಹಿತರ ಜತೆ ಸೇರಿ ಇದಕ್ಕೊಂದು ಪರಿಹಾರ ಹುಡುಕಲು ಮುಂದಾಗುತ್ತಾನೆ, ಆ ಮಕ್ಕಳೆಲ್ಲ ಸೇರಿ ನಾವೇ ಮುಂದೆನಿಂತು ಏಕೆ ಇದನ್ನು ಸರಿಪಡಿಸಬಾರದು ಎಂಬ ತೀರ್ಮಾನಕ್ಕೆ ಬರುತ್ತಾರೆ. ತನ್ನ ತಾಯಿಗಾದಂತೆ ಮತ್ತಾರಿಗೂ ಆಗಬಾರದೆಂದು ಸ್ನೇಹಿತರ ಸಹಕಾರದಿಂದ ಆ ಗುಂಡಿಯನ್ನು ಮುಚ್ಚಲು ಮುಂದಾಗುತ್ತಾರೆ, ಆದರೆ ಅದಕ್ಕೆಲ್ಲ ಮರಳು, ಸಿಮೆಂಟ್, ಜೆಲ್ಲಿಕಲ್ಲು ಬೇಕಲ್ಲವೇ ? ಅದನ್ನೆಲ್ಲ ಆ ಸ್ನೇಹಿತರು ಹೇಗೆ ಸಂಪಾದಿಸಿದರು, ಆ ಗುಂಡಿಯನ್ನು ಮುಚ್ಚಲು ಹೇಗೆ ಪ್ರಯತ್ನಿಸಿದರು, ತಮ್ಮ ಪ್ರಯತ್ನದಲ್ಲಿ ಸೋತಾಗ ಅದಕ್ಕೆ ಕಾರಣವೇನೆಂದು ಕಂಡು ಹಿಡಿದು ಮತ್ತೆ ಪ್ರಯತ್ನ ಮಾಡಿ ಹೇಗೆ ವಿಜಯ ಸಾಧಿಸಿದರು, ಅವರ ಈ ಸಾಧನೆಯನ್ನು ಇಡೀ ಏರಿಯಾ ಹೇಗೆ ಕೊಂಡಾಡಿತು ಎಂಬುದನ್ನು ಪಂಚರತ್ನಗಳು ಚಿತ್ರದಲ್ಲಿ ನೋಡಬಹುದು, ನಾವೇ ಪಂಚಭೂತಗಳು, ಮಣ್ಣಿನಿಂದಲೇ ಮಡಿಕೆ, ಕಲ್ಲಿನಿಂದಲೇ ಮೂರ್ತಿ ಎಂಬ ಸ್ಫೂರ್ತಿದಾಯಕ ಹಾಡುಗಳು ಕೇಳಲು ತುಂಬಾ ಸೊಗಸಾಗಿವೆ,

ಐವರು ಸಾಹಸಿ ಮಕ್ಕಳ ಸಾಹಸ ಗಾಥೆಯನ್ನು ಪಂಚ ರತ್ನಗಳು ಚಿತ್ರದಲ್ಲಿ ಗೌತಮ್ ಅವರು ತುಂಬಾ ಚೆನ್ನಾಗಿ ತೋರಿಸಿದ್ದಾರೆ, ಚಿತ್ರರಂಗದಲ್ಲಿ ಪ್ರದರ್ಶಕರು ಮತ್ತು ವಿತರಕರಾಗಿರುವ ಜಿ.ಆರ್.ನಾರಾಯಣಗೌಡ ಅವರು ಶ್ರೀಕ್ಯಾಲಮ್ಮದೇವಿ ಫಿಲಂಸ್ ಅಡಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಇಂದಿನ ಸಮಾಜದ ದೈನಂದಿನ ಸಮಸ್ಯೆಗಳನ್ನು ದೊಡ್ಡವರು ಗಮನಕ್ಕೆ ತೆಗೆದುಕೊಳ್ಳದೆ ಇದ್ದಾಗ, ಏನೂ ಅರಿಯದ ಮಕ್ಕಳು ಅದನ್ನು ಸಾಧಿಸಿ ತೋರಿಸುವ ಮೂಲಕ ಹಿರಿಯರಿಗೆ ಹೇಗೆ ಪಾಠ ಕಲಿಸಿದರು ಎಂಬುದನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ,

ಪ್ರಕೃತಿಯ ಪಂಚಭೂತಗಳಾದ ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ ಇವುಗಳನ್ನು ಪ್ರತಿನಿಧಿಸುವ ಪಾತ್ರಗಳನ್ನು ಪ್ರಥಮ್, ಯಶಸ್, ವಿಹಾನ್, ತನ್ವಿ, ಹಾಗೂ ಆಧ್ಯ ಪ್ರಥಮ್ ನಿಭಾಯಿಸಿದ್ದಾರೆ, ತಾಯಿಯ ಪಾತ್ರದಲ್ಲಿ ಬಿಂದೂ ಆಚಾರ್ಯ ನಟಿಸಿದ್ದಾರೆ, ಪ್ರಣವ್ ಅವರ ಸಂಗೀತ, ಅನಿಲ್ ಕಶ್ಯಪ್ ಅವರ ಕ್ಯಾಮೆರಾ ವರ್ಕ್ ಚೆನ್ನಾಗಿದೆ, ವೆಂಕಟ್‌ಗೌಡ ಅವರ ಸಚಿತ್ ಫಿಲಂಸ್ ಮೂಲಕ ಈಚಿತ್ರ ತೆರೆಕಂಡಿದೆ.

ಜಯಕೃಷ್ಣ ಮಾದಕ ವ್ಯಸನಿಗಳಿಗೆ ಸಂದೇಶ



ಈಗಿನ ಕಾಲದ ಯುವತಿಯರಿಗೆ ಧೈರ್ಯ ಮತ್ತು ಸ್ಫೂರ್ತಿ ತುಂಬವ ಕಥೆ ಹೊತ್ತು ಈ ವಾರ ತೆರೆಕಂಡಿರುವ ಚಿತ್ರ ಜಯಕೃಷ್ಣ, ನಮ್ಮ ಸಮಾಜದಲ್ಲಿ ಡ್ರಗ್ ಮಾಫಿಯಾ ದಂದೆ ಎಗ್ಗಿಲ್ಲದೆ ನಡೆಯುತ್ತಿದೆ, ಇದರ ಹಿಂದೆ ದೊಡ್ಡ ದೊಡ್ಡ ಪ್ರಭಾವಿಗಳ ಕೃಪೆ ಇರುವುದು ಜಗಜ್ಜಾಹೀರಾಗಿದೆ, ಇದರ ಪರಿಣಾಮ ಮುಂದೊಂದು ದಿನ ಏನಾಗಬಹುದು, ನಮ್ಮ ಹೆಣ್ಣು ಮಕ್ಕಳು ಇದಕ್ಕೆ ಹೇಗೆ ಬಲಿಯಾಗುತ್ತಿದ್ದಾರೆ, ಇಂಥ ಹಲವಾರು ಅಂಶಗಳನ್ನು ಹೊತ್ತು ಈವಾರ ರಾಜಾದ್ಯಂತ ತೆರೆಕಂಡಿರುವ ಚಿತ್ರ ಜಯಕೃಷ್ಣ. ಈಗಂತೂ ಚಿಕ್ಕ ಚಿಕ್ಕ ಮಕ್ಕಳ ಕೈಗೆ ಡ್ರಗ್ ಸಿಗುತ್ತಿದೆ, ಕಾಲೇಜುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇದಕ್ಕೆ ಹೆಚ್ಚಾಗಿ ಅಡಿಕ್ಟ್ ಆಗುತ್ತಿದ್ದಾರೆ. ಇದೆಲ್ಲವನ್ನು ಅತ್ಯುತ್ತಮ ಸಂದೇಶದ ಮೂಲಕ ಹೇಳುವ ಚಿತ್ರ ಜಯಕೃಷ್ಣ. ರಾಜ್ ಆನಂದರಾಮ್ ಅವರು ಈ ಚತ್ರದ ನಿರ್ಮಾಣ ಹಾಗೂ ನಿರ್ದೇಶನ ಮಾಡಿದ್ದಾರೆ. ಡ್ರಗ್ ಮಾಫಿಯಾ ಸುತ್ತ ನಡೆಯುವ ಕಥಾಹಂದರ ಈ ಚಿತ್ರದಲ್ಲಿದ್ದು, ನಮ್ಮ ಸಮಾಜದಲ್ಲಿ ಮಹಿಳೆಯರು ಧೈರ್ಯದಿಂದ ಹೋರಾಡಿದರೆ. ಅದೆಂಥಾ ದೊಡ್ಡ ಡ್ರಗ್ ಪೆಡ್ಲರ್‌ಗಳ ಜಾಲವನ್ನಾದರೂ ಪತ್ತೆ ಹಚ್ಚಬಹುದು, ಅಂಥವರ ವಿರುದ್ಧ ಸಮರ ಸಾರಬಹುದು ಎಂದು ಮಹಿಳೆಯರಿಗೆ ಧೈರ್ಯ ತುಂಬುವ ಕೆಲಸ ಈ ಚಿತ್ರದಿಂದಾಗಿದೆ.

ಓಂ ಫಿಲಂ ಪ್ರೊಡಕ್ಷನ್ಸ್ ಅಡಿ ಶ್ರೀಮತಿ ಲಕ್ಷ್ಮಿ ರಮೇಶ್‌ಅರ್ಪಿಸುವ ಜಯಕೃಷ್ಣ ಚಿತ್ರಕ್ಕೆ ರಾಜ್ ಆನಂದರಾಮ್ ಅವರು ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ, ಬೆಂಗಳೂರು, ನೆಲಮಂಗಲ ಸುತ್ತಮುತ್ತ ಈ ಚಿತ್ರದ ಚಿತ್ರದ ಚಿತ್ರೀಕರಣ ನಡೆಸಲಾಗಿದೆ, ರಾಜ್ ಆನಂದರಾಮ್ ಅವರು ಮೇಸ್ತ್ರಿ ಚಿತ್ರದ ಮೂಲಕ ಮೊದಲ ಬಾರಿಗೆ ನಿರ್ದೇಶಕನ ಕ್ಯಾಪ್ ತೊಟ್ಟಿದ್ದರು, ಬಹಳ ದಿನಗಳ ನಂತರ ಜಯಕೃಷ್ಣ ಎಂಬ ಚಿತ್ರ ನಿರ್ದೇಶಿಸಿದ್ದಾರೆ, ಚಿತ್ರದ ನಿರ್ಮಾಣವೂ ಇದರದೇ. ಜಯಕೃಷ್ಣ ನಾಯಕನ ಪಾತ್ರದಲ್ಲಿ ಅದ್ಭುತವಾಗಿ ಅಭಿನಯಿಸಿದ್ದಾರೆ. ಆರ್.ಲೋಕೇಶ್, ವೇಣುಗೋಪಾಲ್, ಸುರೇಶ್‌ಪೂಜಾರಿ, ಹಾಗೂ ದಿನಕರ್ ಪೂಜಾರಿ ಸಹ ನಿರ್ಮಾಪಕರಾಗಿ ಈ ಚಿತ್ರಕ್ಕೆ ಕೈ ಜೋಡಿಸಿದ್ದಾರೆ, ಈ ಚಿತ್ರದಲ್ಲಿ ಕೇವಲ ಒಂದೇ ಒಂದು ಹಾಡಿದ್ದು, ಜೆಸ್ಸಿ ಗಿಫ್ಟ್ ಅವರು ಸಂಗೀತ ಸಂಯೋಜಿಸಿದ್ದಾರೆ, ಇವರ ಹಿನ್ನೆಲೆ ಸಂಗೀತವೇ ಜಯಕೃಷ್ಣ ಚಿತ್ರದ ಮತ್ತೊಂದು ಹೈಲೈಟ್ ಎನ್ನಬಹುದು, ಅಷ್ಟು ಅದ್ಭುತವಾಗಿ ಬ್ಯಾಕ್‌ಗ್ರೌಂಡ್ ಸ್ಕೋರ್ ಮಾಡಿದ್ದಾರೆ. ವೀಕೆಂಡ್‌ನಲ್ಲಿ ಒಮ್ಮೆ ನೋಡಲು ಅಡ್ಡಿಯೇನಿಲ್ಲ,

ಹಳ್ಳಿ ಹುಡುಗಿಯಾದ ಸಂಹಿತಾ ವಿನ್ಯಾ



ಕನ್ನಡ ಚಿತ್ರರಂಗದ ಬ್ಯೂಟಿಕ್ವೀನ್ ಎಂದೇ ಗುರುತಿಸಿಕೊಂಡಿರುವ ನಟಿ ಸಂಹಿತಾ ವಿನ್ಯಾಗೆ ಈ ವರ್ಷ ಲಕ್ಕಿ ಇಯರ್ ಎಂದೇ ಹೇಳಬಹುದು. ನಿನ್ನೆ ತೆರೆಕಂಡಿರುವ ಮೆಜೆಸ್ಟಿಕ್-2 ಚಿತ್ರದ ನಾಯಕಿಯಾಗಿ ನಟಿಸಿರುವ ಇವರ ಕಟೌಟ್ ಕೂಡ ನಾಯಕನಿಗೆ ಸರಿಸಮನಾಗಿದೆ, ವಿಶೇಷವಾಗಿ ಇವರ ಕಟೌಟ್ ತುಂಬ ಹಾರಗಳ ಸುರಿಮಳೆ. ಎರಡು ತಿಂಗಳ ಹಿಂದಷ್ಟೇ ಸಂಹಿತಾ ಅಭಿನಯದ ಜಿ.ಎಸ್.ಟಿ, ಕಳೆದ ತಿಂಗಳು ಮಿಕ್ಸಿಂಗ್‌ಪ್ರೀತಿ, ಹೀಗೆ ಒಂದರ ಮೇಲೊಂದರಂತೆ ಚಿತ್ರಗಳು ಬಿಡುಗಡೆಯಾಗುತ್ತಿವೆ. ಇದೀಗ ಸಂಹಿತಾ ನಾಯಕಿಯಾಗಿ ನಟಿಸಿರುವ ಮೆಜೆಸ್ಟಿಕ್-2 ಚಿತ್ರವೀಗ ರಾಜ್ಯಾದ್ಯಂತ ತೆರೆಕಂಡಿದೆ. ಚಿತ್ರದ ಕಥೆ ಆರಂಭವಾಗೋದು, ಅಂತ್ಯವಾಗೋದು ಕೂಡ ಇವರ ಪಾತ್ರದಿಂದಲೇ, ಸಂಹಿತಾ ಈಗಾಗಲೇ ಕನ್ನಡ, ತೆಲುಗು, ತಮಿಳು ಸೇರಿದಂತೆ 18ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ ಗುರುತಿಸಿಕೊಂಡಿದ್ದಾರೆ. ಕೆಲಸ ಹುಡುಕಿಕೊಂಡು ಹಳ್ಳಿಯಿಂದ ಸಿಟಿಗೆ ಬರುವ ಮಧ್ಯಮವರ್ಗದ ಯುವತಿಯಾಗಿ ಸಂಹಿತಾ ವಿನ್ಯಾ ಈ ಚಿತ್ರದಲ್ಲಿ ನಟಿಸಿದ್ದಾರೆ. ಮೊದಲಬಾರಿಗೆ ಮೆಜೆಸ್ಟಿಕ್‌ಗೆ ಬಂದಿಳಿಯುವ ಆಕೆಗೆ, ನಾಯಕ ದಾಸನ ಪರಿಚಯ ಆಗುತ್ತದೆ. ನಂತರ ಆತನ ಜತೆ ಲವ್ ಕೂಡ ಆಗುತ್ತದೆ, ನಂತರ ಈ ಪಾತ್ರದಿಂದ ಏನೇನೆಲ್ಲ ನಡೆದು ಹೋಗುತ್ತದೆ ಎನ್ನುವುದೇ ಚಿತ್ರದ ಮುಖ್ಯಕಥೆ. ಹಿರಿಯನಟಿ ಶೃತಿ ಅವರಂಥ ಹಿರಿಯ ಕಲಾವಿದೆಯರೊಂದಿಗೆ ನಟಿಸಿದ್ದು ನನ್ನ ಜೀವನದ ಮರೆಯಲಾಗದ ಅನುಭವ ಎಂದವರು ತಮ್ಮ ಅನುಭವ ಹಂಚಿಕೊಳ್ಳುತ್ತಾರೆ. ಇದಲ್ಲದೆ ಸಂಹಿತಾ ಅಭಿನಯದ ಸ್ವಾಭಿಮಾನಿ, ವಿದೂಷಕ, ಯಾಕೋ ಬೇಜಾರು ಸೇರಿದಂತೆ ಒಂದಷ್ಟು ಚಿತ್ರಗಳು ರಿಲೀಸ್ ಹಂತದಲ್ಲಿದ್ದು, ಇದೇ ವರ್ಷ ತೆರೆ ಕಾಣಲಿವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26